ಬೇಕು ಎಂದು. ಇದು ನನ್ನ ತಲೆಯಲ್ಲಿ ಕೆಲಸ ಮಾಡುತ್ತಾ ಇತ್ತು. It was just worrying my head. ಆದುದರಿಂದ ತಮ್ಮ ಗಮನಕ್ಕೆ ತಂದಿದ್ದೇನೆ.

Mr. SPEAKER.—I am very sorry for the distress caused to the Hon'ble Member.

MYSORE MUNICIPALITIES BILL, 1962

Motion to consider—(Contd.)

†ಶ್ರೀ ಬಿ. ಎಲ್. ಗೌಡ (ಚಳ್ಳಕೆರೆ).—ಸ್ವಾಮಿ, ಮೈಸೂರು ಪೌರಸಭೆಗಳ ವಿಧೇಯಕದ ಮೇಲೆ ಶನಿವಾರದ ದಿವಸ ಮಾತನಾಡುತ್ತ ಈ ವಿಧೇಯಕದ 13ನೆಯ ಅಧ್ಯಾಯದ ಬಗ್ಗೆ ಒಂದೆರಡು ವಿಷಯಗಳನ್ನು ಹೇಳುತ್ತಿದ್ದೆ. ಕೆಲವು ಸಂದರ್ಭಗಳಲ್ಲಿ ಪೌರಸಭೆಗಳ ಆಡಳಿತವನ್ನೂ supersede ಮಾಡುವುದು ಮತ್ತು ವಿಶೇಷ ಅಧಿಕಾರಗಳನ್ನು ನೇಮಕ ಮಾಡುವುದು, ಹೀಗೆ ಕೆಲವಾರು ಅವಕಾಶ ಗಳನ್ನೂ ಈ ಅಧ್ಯಾಯದಲ್ಲಿ ಸರ್ಕಾರದವರು ಕಲ್ಪಿಸಿಕೊಂಡಿದ್ದಾರೆ. ಕ್ಲಾಜ್ 300 (2) (*a*) ನಲ್ಲಿ ಉಪಯೋಗಿಸಿರುವ ಪದಗಳು ಸರಿಯಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಸರ್ಕಾರ ತಮಗೆ ಬೇಡವಾದ ಪೌರಸಭೆಗಳ ಅಧಿಕಾರವನ್ನು ವಜಾಮಾಡಿ ತಮ್ಮ ಸುಪರ್ದಿಗೆ ತೆಗೆದುಕೊಳ್ಳುವುದಕ್ಕೆ ಇದರಿಂದ ಅವಕಾಶವಾಗುತ್ತದೆ. ಇಂಥ ಅವಕಾಶವಿರಬಾರದು. ನಿರ್ದಿಷ್ಟವಾಗಿ ಇಂಥಿಂಥ ತಪ್ಪು ಮಾಡಿದ ಸಂದರ್ಭಗಳಲ್ಲಿ ನಾವು ಸಂಬಂಧಪಟ್ಟ ಮುನಿಸಿಪಾಲಿಟಿಗಳನ್ನು supersede ಮಾಡುತ್ತೇವೆ ಎಂದು ನಮೂದು ಮಾಡಬೇಕೆಂದು ಒತ್ತಾಯಮಾಡಿ ಹೇಳುತ್ತೇನೆ.

ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಕೆಲವು ನಿದರ್ಶನಗಳು ನಮ್ಮ ಕಣ್ಣುಮುಂದಿವೆ. ದಾವಣಗೆರೆ ಮುನಿಸಿಪಾಲಿಟಿಯು ಚೆನ್ನಾಗಿ ಕೆಲಸ ಮಾಡಿದರೂ ಸಹ ಸೂಪರ್‌ಸೀಡ್ ಮಾಡುವುದ ಕ್ಕಾಗಿ ಆಡಳಿತಾಧಿಕಾರಿ ನೇಮಕ ಮಾಡಬೇಕೆಂದು show cause notice ಕೊಟ್ಟಿದ್ದಾರೆ. ಮಂಡ್ಯ ದಲ್ಲಿಯೂ ಸಹ ಆಡಳಿತ ಪಕ್ಷಕ್ಕೆ ವಿರೋಧವಾಗಿರುವವರು ಅಧಿಕಾರಿದಲ್ಲಿದ್ದಾರೆ ಅವರು ಇರುವುದು ಬೇಡ ಎಂದು ಅದನ್ನು ಸೂಪರ್‌ಸೀಡ್ ಮಾಡಲು ಪ್ರಯತ್ನ ಮಾಡುತ್ತಿದ್ದಾರೆಂಬ ವರ್ತಮಾನ ಬಂದಿದೆ. ಈ ಸೆಕ್ಷನ್ ವಿಶಾಲತೆ ಕಡಿಮೆ ಮಾಡಬೇಕು. ನಿರ್ದಿಷ್ಟವಾದ ಸಮಯದಲ್ಲಿ ಅಷ್ಟೇ ಗಮನಕ್ಕೆ ತೆಗೆದು ಕೊಳ್ಳಬೇಕು. 290ನೇ ಕಲಮಿನಲ್ಲಿ ಜಿಲ್ಲಾಧಿಕಾರಿಗಳಿಗೆ ಸಸ್ಪೆಂಡ್ ಮಾಡುವ ಅಧಿಕಾರ ಕೊಟ್ಟಿದ್ದಾರೆ. 297ರಲ್ಲಿ performance of duties ಬಗ್ಗೆ ನಿರ್ದಿಷ್ಟ ಕೆಲಸ ಮಾಡಬೇಕು ಎಂದು ಮಾಡಿದ್ದಾರೆ ಯಾವುದರಲ್ಲಿಯಾದರೂ ಮುನಸಿಪಾಲ್ಟಿಯು ವಿಫಲವಾಗಿದ್ದರೆ ಆ ರೀತಿ ಮಾಡಬಹುದು. ಸೂಪರ್ ಸೀಡ್ ಮಾಡುವ ಆವಶ್ಯಕತೆಯಲ್ಲಿ ಕಾನೂನಿನಲ್ಲಿ ಈ ರೀತಿ ಅವಲಂಬಿಸಕೊಳ್ಳಬಾರದು. ಪ್ರಜಾಪ್ರಭುತ್ವ ದಲ್ಲಿ ಈ ಅಧಿಕಾರದ ದುರುಪಯೋಗವಾಗುತ್ತದೆಂದು ಒತ್ತಾಯಪೂರ್ವಕ ಹೇಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ (ನಗರಾಡಳಿತ ಶಾಖೆಯ ಮಂತ್ರಿಗಳು).—Show cause notice ಕೊಡಬಾರದೇನು ?

ಶ್ರೀ ಬಿ. ಎಲ್ ಗೌಡ.—ಅದನ್ನು ಕೊಡಿ, ಎಕ್ಸ್‌ಪ್ಲನೇಷನ್ ತೆಗೆದುಕೊಳ್ಳಿ. ಸುಪರ್‌ಸೀಡ್ ಏತಕ್ಕೆ ಮಾಡಬೇಕು ?

ಶ್ರೀ ಕೆ. ಪುಟ್ಟಸ್ವಾಮಿ.—Show cause notice ಅಷ್ಟೇ ಕೊಟ್ಟಿದೆ.

Mr. SPEAKER.—I think there was an amendment which was passed, recently by this House.

Sri K. PUTTASWAMY.—This is a provision which is found in all the various enactments that we have in the State, and in all the enactments wherever the local bodies have been brought into existence.

ಶ್ರೀ ಬಿ. ಎಲ್. ಗೌಡ.—ಸ್ವಾಮಿ ಅಂಥ ಅನುಭವ ಬಂದಿದೆ. ಚೆನ್ನಾಗಿ ಕೆಲಸ ಮಾಡಿದರೂ ಕೂಡ ಯಾವ ರೀತಿ ಅಧಿಕಾರ ದುರುಪಯೋಗ ಮಾಡಿಕೊಳ್ಳುತ್ತಾರೆ ಎನ್ನುವುದಕ್ಕೆ ಕೈಸುಟ್ಟು ಕೊಂಡಿದ್ದೇವೆ ಎಂದು ಹೇಳಬೇಕಾಗಿದೆ. ನ್ಯಾಯವಾಗಿ ಅಧಿಕಾರ ಉಪಯೋಗಿಸಿಕೊಳ್ಳುತ್ತಿದ್ದರೆ ಅಧಿಕಾರ ಕೊಡಲು ಹಿಂದೆ ಮುಂದೆ ನೋಡುತ್ತಿರಲಿಲ್ಲ. ಈ ಪ್ರಜಾಪ್ರಭುತ್ವದಲ್ಲಿ 295ನೇ ಕಲಮಿನ ಪ್ರಕಾರ ಒಂದು ಯಾವದಾದರೂ ನೇಮಕ ಮಾಡಿಕೊಳ್ಳಲು ಅವಕಾಶವಿಲ್ಲ. ಕಮೀಷನರ್ ಅವರು ಒಪ್ಪಿ

(ಶ್ರೀ ಬಿ. ಎಲ್. ಗೌಡ)

ಕೊಳ್ಳದಿದ್ದರೆ ನೇಮಕ ಮಾಡುವುದನ್ನು ನಿಲ್ಲಿಸಬಹುದು. ಇಂಥ ಅಧಿಕಾರ ವಿಕೇಂದ್ರೀಕರಣದ ಅನುಭವ ಬಂದಿದೆ. ಒಬ್ಬ ನೌಕರನ ನೇಮಕ ಮಾಡಿಕೊಳ್ಳಲು ಅವಕಾಶವಿಲ್ಲ. 293ನೇ ಕಲಮನ್ನು ತೆಗೆದು ಹಾಕಬೇಕು. ಯಾಕೆಂದರೆ ಪ್ರಜಾಪ್ರಭುತ್ವ ತತ್ವಕ್ಕೆ ಅದು ಅನುಗುಣವಾಗಿಲ್ಲ ಎಂದು ಹೇಳುತ್ತೇನೆ.

ಒಟ್ಟಿನಲ್ಲಿ ಹೇಳುವದಾದರೆ ವಿವಿಧ ಭಾಗಗಳಿಗೆ ಒಂದೇ ರೀತಿಯಾಗಿ ಅನ್ವಯಿಸುವ ಹಾಗೆ ಒಂದು ಸಮಗ್ರವಾದ ಕಾನೂನನ್ನು, ಪ್ರಜಾಪ್ರಭುತ್ವ ತತ್ವಕ್ಕೆ ಪ್ರಾಧಾನ್ಯ ಕೊಟ್ಟು, ಅಧಿಕಾರ ವಿಕೇಂದ್ರೀಕರಣ ಮಾಡಿ, ಪ್ರಗತಿಪರವಾಗಿ ರಚನೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆನು. ಆದರೆ ಹೆಚ್ಚೆಚ್ಚು ಅಧಿಕಾರವನ್ನು ತಾವೇ ಇಟ್ಟುಕೊಳ್ಳಬೇಕೆಂದು ಮಾಡಿಕೊಂಡಿದ್ದಾರೆ. ಖಂಡಿತ ವಾಗಿ ಸೆಲೆಕ್ಟ್ ಕಮಿಟಿಯಲ್ಲಿ ಪುನರ್‌ಪರಿಶೀಲನೆ ಮಾಡಿ ಸುಪರ್‌ಸೀಡ್ ಮಾಡುವ ಬಗ್ಗೆ ಆಡಳಿತದಲ್ಲಿ ಪ್ರವೇಶ ಮಾಡುವ ಬಗ್ಗೆ, ನಿರ್ದಿಷ್ಟ ಸಂದರ್ಭದಲ್ಲಿ ಅಗತ್ಯವಿದ್ದರೆ ಅವಕಾಶ ಕೊಡುವ ಹಾಗೆ ಮಾಡ ಬೇಕು ಎಂದು ಹೇಳಬಯಸುತ್ತೇನೆ.

ಇನ್ನು ಮುನಸಿಪಾಲ್ಟಿಯ ರಚನೆಯ ವಿಷಯದಲ್ಲಿ ಒಂದೆರಡು ಮಾತು ಹೇಳುತ್ತೇನೆ. ಹತ್ತು ಸಾವಿರ ಜನಸಂಖ್ಯೆಯಿರುವ ಪ್ರದೇಶಕ್ಕೆ ಮುನಿಸಿಪಾಲ್ಟಿ ಮಾಡಲಾಗುವುದು ಎಂದು ಹೇಳಿದ್ದಾರೆ ಅದು ಒಳ್ಳೆಯದು. ಜನಸಂಖ್ಯೆ ಕಡಿಮೆಯಿರುವಲ್ಲಿ ಸಿಬ್ಬಂದಿ ವೆಚ್ಚ ಸಹಿಸುವುದಕ್ಕೆ ಆಗುವದಿಲ್ಲ, ಹತ್ತು ಸಾವಿರ ಜನಸಂಖ್ಯೆಗಿಂತ ಹೆಚ್ಚಾಗಿ ಇರತಕ್ಕ ಪ್ರದೇಶದಲ್ಲಿ ಕಡ್ಡಾಯವಾಗಿ ಆಚರಣೆ ತಂದರೆ ಪ್ರಯೋಜನವಾಗುತ್ತದೆ.

ಇನ್ನೂ 13ನೇ ಸೆಕ್ಷನ್ನಿನಲ್ಲಿ ಮುನಿಸಿಪಲ್ ಕೌನ್ಸಿಲ್ಲಿಗೆ ಹೆಣ್ಣುಮಕ್ಕಳಸಲುವಾಗಿ ರಿಜರ್ವ ಮಾಡು ವುದಕ್ಕೆ ಅವಕಾಶ ಕೊಟ್ಟಿದೆ. ಕಾನೂನು ಪ್ರಕಾರ ಹೆಂಗಸರು ಮತ್ತು ಗಂಡಸರು ಇವರಲ್ಲಿ ಯಾವ ವ್ಯಾತ್ಯಾಸವಿಲ್ಲ. ಚುನಾವಣೆಯಿಂದ ನೇರವಾಗಿ ಬರುವುದಕ್ಕೆ ಅವಕಾಶವಿರಬೇಕು. ರಿಝರ್ವೇಶನ್ ಇರಬಾರದು ಎಂದು ಹೇಳುತ್ತೇನೆ.

14ನೇ ಸೆಕ್ಷನ್ನಿನಲ್ಲಿ ಒಂದು ಕ್ಷೇತ್ರದಲ್ಲಿ ಚುನಾವಣೆ ನಡೆಯದಿದ್ದರೆ ನಾಮಿನೇಟ್ ಮಾಡಲು ಅವಕಾಶಮಾಡಿ ಕೊಂಡಿದ್ದಾರೆ. ಖಂಡಿತವಾಗಿ ಇದು ತಪ್ಪು, ಮೊದಲನೇ ಸಲ ಮತ್ತು ಎರಡನೇಸಲ ಚುನಾವಣೆ ನಡೆಸುವುದಕ್ಕೆ ಏರ್ಪಾಡು ಮಾಡಬೇಕು. ಹಾಗೆ ಆಗದೇ ಇದ್ದರೆ ಮೂರನೇಸಲ ಮಾತ್ರ ನಾಮಿನೇಟ್ ಮಾಡಬೇಕು ಎಂದು ಹೇಳುತ್ತೇನೆ. ಪುರಸಭೆ ಸುಪರ್‌ಸೀಡ್ ಮಾಡಿದ ಸಂದರ್ಭದಲ್ಲಿ ಮರು ಚುನಾವಣೆಗೆ ಒಂದು ವರ್ಷ ಕಾಲಾವಕಾಶ ಕೊಡಬೇಕು. ಆರು ತಿಂಗಳು ಮುಂದುವರಿಸಿದರೆ ಸಕಾಗುತ್ತದೆ. ಅಧಿಕಾರಿಗಳ ವಶದಲ್ಲಿ ವ್ಯವಹಾರ ಇಟ್ಟುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುವುದು ಒಳ್ಳೆಯದಲ್ಲ, ಆದ್ದರಿಂದ ಈ ಅವಕಾಶ ಮಾಡಿಕೊಡುವುದನ್ನು ತೆಗೆದುಹಾಕಬೇಕು, ಪೂರ್ತಿ delete ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕ್ಲಾಜ್ 22ರಲ್ಲಿ ಎಲೆಕ್ಷನ್ ಪಿಟಿಷನ್ ಫೈಲ್‌ಮಾಡಲು 15 ದಿವಸ ಕಾಲವಕಾಶ ಕೊಡ ಲಾಗಿದೆ. ಇದು ಸಾಕಷ್ಟು ಇಲ್ಲ. ಒಂದು ತಿಂಗಳು ಕಾಲಾವಕಾಶ ಇರಬೇಕು. ಇದನ್ನು ತಿದ್ದುಪಡಿ ಮಾಡುವುದು ಅಗತ್ಯ.

ಸೆಕ್ಷನ್ 29 (3) ರಲ್ಲಿ ಒಂದು ಒಳ್ಳೇ ಸಲಹೆ ಇದೆ. ನ್ಯಾಷನಲ್ ಫ್ಲಾಗ್‌ನ್ನು ಚುನಾವಣೆಯಲ್ಲಿ ಉಪಯೋಗಿಸಬಾರದು ಎಂದು ಇರುವುದು ಸ್ವಾಗತಾರ್ಹವಾಗಿದೆ.

Section 43—Functions of President. ಅಧ್ಯಕ್ಷರಿಗೆ ಎಷ್ಟರಮಟ್ಟಿಗೆ ಅಧಿಕಾರ ಇರ ಬೇಕು ಎಂಬುದನ್ನು ಹೇಳಿದೆ. ಆದರೆ ಅಧ್ಯಕ್ಷರಿಗೆ ಸಾಕಷ್ಟು ಅಧಿಕಾರ ಕೊಟ್ಟಿರುವದಿಲ್ಲ ಕಮಿಷನರ್ ಅವರಿಗೆ ಮುಖ್ಯವಾದ ಅಧಿಕಾರ ಕೊಡಲಾಗಿದೆ. ಸುಮ್ಮನೆ ಅಧ್ಯಕ್ಷರಾಗಿ ನೋಡುತ್ತಾ ಇರುವುದು ತಪ್ಪು. ನಾಮಕಾವಸ್ತೆ ಅಧ್ಯಕ್ಷರಾಗಿರುತ್ತಾರೆ. ಕಂಟ್ರೋಲು ಮಾಡಲು ಯಾವ ಅಧಿಕಾರ ಉಳಿಯುವ ದಿಲ್ಲ. ಆದುದರಿಂದ ಇದರಲ್ಲಿ ಸೂಕ್ತ ಬದಲಾವಣೆ ಮಾಡಬೇಕೆಂದು ಸೂಚಿಸುತ್ತೇನೆ.

ಈ 56ನೇ ಸೆಕ್ಷನ್ನಿನಲ್ಲಿ ಹಿಂದಿನ ಸಭೆಯಲ್ಲಿ ಮಾಡಿದ ತೀರ್ಮಾನವನ್ನು ಮೂರು ತಿಂಗಳಲ್ಲಿ ತೀರ್ಮಾನ ಮಾಡಬಹುದು ಎಂದಿದೆ. ಅದರಲ್ಲೂನೂ ಅರ್ಧಕ್ಕಿಂತ ಹೆಚ್ಚಿಗೆ ಓಟು ಬಂದರೆ ಬದಲಾವಣೆ ಮಾಡುವ ಅವಕಾಶವಿದೆ. ಇದು ತಪ್ಪು. ಈ ರೀತಿ ಪದೇಪದೇ ಒಂದು ಸಲ ಆದ ತೀರ್ಮಾನವನ್ನು ಬದಲಾವಣೆ ಮಾಡತಕ್ಕಂಥಾದ್ದು ಸರಿಯಲ್ಲ, ಇದನ್ನು ವಿಶೇಷ ಸಂದರ್ಭದಲ್ಲಿ ಮಾಡಬಹುದೇವಿನಾ, ಸಾಮಾನ್ಯ ಸಂದರ್ಭಗಳಲ್ಲಲ್ಲ. ಆದ್ದರಿಂದ ತೀರ್ಮಾನ ಬದಲಾವಣೆ ಮಾಡಬೇಕಾದರೆ ಆರು ತಿಂಗಳು ಕಾಲಾವಕಾಶ ಮತ್ತು two-thirds majority ಇರಬೇಕು ಎಂದು ಈ ಸೆಕ್ಷನ್ನಿನಲ್ಲಿ ಬದಲಾವಣೆ ಮಾಡಬೇಕು.

61ನೇ ಸೆಕ್ಷನ್ ಪ್ರಕಾರ ಮುನಿಸಿಪಲ್ ಕಮೀಷನರು ಸಭೆಗಳಲ್ಲಿ ಭಾಗವಹಿಸಬೇಕು ಮತ್ತು ಸದಸ್ಯರು ಕಮಿಷನರನ್ನು ಪ್ರಶ್ನೆ ಕೇಳಬಹುದು. ಯಾವ ವಿವರ ಬಯಸಿದರೂ, ಇಂಟರ್‌ಪಲೇಷನ್ ಕೇಳಿದರೂ, ಕಮಿಷನರಿಗೇ ಕೇಳುವಂತೆ ಅವಕಾಶ ಮಾಡಿಕೊಟ್ಟಿದೆ. ಅಧಿಕಾರಿಗಳು ಕನ್‌ಸಲ್ಟ್ ಪ್ರೊಸೀಡಿಂಗ್ಸ್‌ನಲ್ಲಿ ಭಾಗವಹಿಸುವ ಪದ್ಧತಿ ಪ್ರಜಾಪ್ರಭುತ್ವ ನೀತಿಗೆ ಅನುಗುಣವಾಗಿ ಇರುವುದಿಲ್ಲ. ಇಂಟರ್‌ಪೆಲೇಷನ್, ಕೊಶ್ಚನ್ ಕೇಳಬೇಕಾದರೆ ಸದಸ್ಯರು ಅಧ್ಯಕ್ಷರಿಗೆ ಕೇಳುವ ರೀತಿಯಲ್ಲಿ ಬದಲಾವಣೆ ಮಾಡಬೇಕು.

ಸೆಕ್ಷನ್ 70ರಲ್ಲಿ Joint Committees of local bodies and joint levy of octroi ಗೆ ಅವಕಾಶ ಮಾಡಿಕೊಟ್ಟಿರುವುದು ಬಹಳ ಒಳ್ಳೆಯದು. Corresponding Amendmentನ್ನು, ತಾಲ್ಲೂಕು ಬೋರ್ಡ್ ಮತ್ತು ವಿಲೇಜ್ ಪಂಚಾಯಿತಿಗಳಲ್ಲಿ ಮಾಡದೇ ಹೋದರೆ, ಇದು ಏನೂ ಪ್ರಯೋಜನಕಾರಿಯಾಗಿ ಉಳಿಯುವುದಿಲ್ಲ.

ಅಸೆಸ್‌ಮೆಂಟ್‌ರಿಕವರಿಗಳ ಬಗ್ಗೆ ಸೆಕ್ಷನ್ 133 ರಲ್ಲಿ ಕೊಟ್ಟಿರತಕ್ಕಂಥ ಸೂಚನೆಗಳು ಬಹಳ ಒಳ್ಳೆಯದು. ಇವತ್ತಿನ ಪರಿಸ್ಥಿತಿಯಲ್ಲಿ ಮುನಿಸಿಪಾಲಟಿಗಳಲ್ಲಿ ಕಂದಾಯ ವಸೂಲು ಮಾಡುವವರೇ ಇಲ್ಲ. ಹತ್ತು-ಹದಿನೈದು ವರ್ಷಗಳ ಬಾಕಿ ಬಿದ್ದಿರುತ್ತದೆ. ಚಿತ್ರದುರ್ಗದಲ್ಲಿ ಸ್ವಲ್ಪ ವರ್ಷಗಳ ಹಿಂದೆ ಬಾಕಿ ಎಲ್ಲಾ ವಸೂಲುಮಾಡಿ, ರಸೀತಿ ಕೊಡದೆ, ಅಸೆಸ್‌ಮೆಂಟ್ ರೆಕಾರ್ಡುಗಳು ಮತ್ತು ರಿಜಿಸ್ಟರುಗಳನ್ನೆಲ್ಲಾ ಬಾವಿಯಲ್ಲಿ (ಸಂಬಂಧಪಟ್ಟ ಅಧಿಕಾರಿಗಳು-ಅಧ್ಯಕ್ಷರು ಸೇರಿದ್ದರೋ ಇಲ್ಲವೋಗೊತ್ತಿಲ್ಲ,) ಹಾಕಿಬಿಟ್ಟರು; ಏನೂ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಈ ಬಾಕಿಗಳು ಬಹಳ ದಿವಸ ಸುಸ್ತಿಯಲ್ಲಿ ಇರುವ ಹಾಗೆ ಅವಕಾಶ ಮಾಡಿಕೊಡಬಾರದು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಈ ಘಟನೆ ಆದುದು. ಮುನ್ಸಿಪಲ್ ಕೌನ್ಸಿಲರುಗಳಾಗಿ ವರ್ತಕರು ಮುಂತಾದವರು ಆಗಿರುತ್ತಾರೆ; ಅವರು ಆಕ್ಟ್ರಾಯಿ ತಪ್ಪಿಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದ್ದರಿಂದ ಮುನಿಸಿಪಲ್ ಕ್ಲೈಮ್ಸನ್ನು ಕಟ್ಟುನಿಟ್ಟಾಗಿ ವಸೂಲು ಮಾಡುವ ಅವಕಾಶವಿರಬೇಕು.

ಸೆಕ್ಷನ್ 145ರ ಪ್ರಕಾರ Improvement Boards ಸ್ಥಾಪನೆ ಮಾಡುವ ಅವಕಾಶ ಮುನಿಸಿಪಾಲಟಿಗಳಿಗೆ ಇದೆ. ಇದು ಬಹಳ ಸ್ವಾಗತಾರ್ಹವಾದುದು.

ಪ್ರಜಾಪ್ರಭುತ್ವ ದೃಷ್ಟಿಯಿಂದ ನಾನು ಸೂಚಿಸಿದ ಬದಲಾವಣೆಗಳನ್ನು ಮಾಡಬೇಕೆಂದು ಹೇಳಿ, ಒಟ್ಟಿನಲ್ಲಿ ನಾನು ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

†ಶ್ರೀ ಎ. ಶರಣಪ್ಪ (ದೇವದುರ್ಗ).—ಸನ್ಮಾನ್ಯ ಅಧ್ಯಕ್ಷರೆ, ಈಗ ಈ ಪುರ ಮತ್ತು ನಗರ ಸಭೆಗಳ ಒಂದು ಕಾನೂನನ್ನು ಇಡೀ ನಮ್ಮ ರಾಜ್ಯದಲ್ಲಿ ಏಕಮುಖವಾಗಿ ಎಲ್ಲಾ ನಗರ, ಪಟ್ಟಣಗಳಿಗೆ ಅನ್ವಯಿಸುವಂತೆ ಕಾಯಿದೆಯನ್ನು ತಂದಿರುವುದನ್ನು ನಾನು ಸ್ವಾಗತಿಸುತ್ತಾ ಇದ್ದೇನೆ. ಏಳು ವರ್ಷದಲ್ಲಿ ಇಂಥ ಕಾನೂನು ಅನೇಕ ಪಟ್ಟಣಗಳಲ್ಲಿ, ಅನೇಕ ಅನೇಕ ರೀತಿಯಲ್ಲಿರುವುದನ್ನು, ಒಂದೇ ಕಾನೂನಿಗೆ ಒಳಪಟ್ಟಂತೆ ಮಾಡಿ ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಮಾಡುವಂಥಾದ್ದು ಅವಶ್ಯ. ನಮ್ಮ ರಾಜ್ಯದಲ್ಲಿರುವ ಸುಮಾರು 500-600 ಇಂಥ ಕಾಯಿದೆಗಳ ಪೈಕಿ ಇದೂ ಒಂದು ಕಾಯಿದೆ. ಇದು ಅತಿ ಮುಖ್ಯವಾದುದು; ಪ್ರಾಮುಖ್ಯವಾದದು ಅಂತ ಅಂದರೂ ಕೂಡ ತಪ್ಪಾಗಲಿಕ್ಕಿಲ್ಲ. ಏಕೆಂದರೆ ನಮ್ಮ ರಾಜ್ಯದಲ್ಲಿ ಅನೇಕ ಪಟ್ಟಣಗಳಲ್ಲಿ ಮತ್ತು ನಗರಗಳಲ್ಲಿ ಅನೇಕ ರೀತಿಯ ಕಾಯಿದೆ ಇರುವುದರ ದೆಶೆಯಿಂದ, ಆಡಳಿತ ಮತ್ತು ನಗರ ಸಭೆಗಳ ಸಮಿತಿ ರಚನೆ ದೃಷ್ಟಿಯಿಂದ ಅನೇಕ ತೊಂದರೆಗಳು ಉಂಟಾಗುವುದರಲ್ಲದೆ, ಅವುಗಳ ಅಭಿವೃದ್ಧಿ ಮತ್ತು ವಿಶೇಷ ಕಾರ್ಯಗಳಿಗೆ ಅಡ್ಡಿ ಆತಂಕ ಬರುವ ಹಾಗಿದೆ. ಅದ್ದರಿಂದ ಇಂಥ ಒಂದು ಏಕಮುಖವಾದ ಕಾಯಿದೆ ಅವಶ್ಯವಿತ್ತು. ಈ ಒಂದು ಕಾಯಿದೆಯನ್ನು ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡುತ್ತಾ ಇದ್ದೇವೆ. ಅದಕ್ಕೆ ಮುಂಚಿತವಾಗಿ ವಿಸ್ತಾರವಾಗಿ ಯಾವ ವಿಷಯದ ಬಗ್ಗೆಯೂ ಹೇಳದೆ, ಸಂಕ್ಷಿಪ್ತವಾಗಿ ಕೆಲವೊಂದು ಸೆಕ್ಷನ್ನುಗಳ ಬಗ್ಗೆ ನನ್ನ ಸಲಹೆ, ಸೂಚನೆಗಳನ್ನು ಕೊಡಬೇಕೆಂದು ಬಯಸುತ್ತಾ ಇದ್ದೇನೆ.

ಈಗ ಸೆಕ್ಷನ್ 13ರಲ್ಲಿ ಒಂದು population basis ಮೇಲೆ, ನಗರ ಸಮಿತಿಗಳ ಮತ್ತು ಪುರ ಸಮಿತಿಗಳಲ್ಲಿ ಎಷ್ಟರ ಮಟ್ಟಿಗೆ ಸ್ಥಾನಗಳು ಇರಬೇಕು ಎಂಬ ವಿವರಣೆಯನ್ನು ಕೊಟ್ಟಿದ್ದಾರೆ. ಒಂದು ಲಕ್ಷಕ್ಕೆ ಮೇಲ್ಪಟ್ಟಿದ್ದರೆ, 35 ಸ್ಥಳಗಳು ಇರಬೇಕೆಂದಿದೆ. ಏಳು ಸಾವಿರಕ್ಕೆ ಮೇಲ್ಪಟ್ಟು, ಒಂದು ಲಕ್ಷ ಪ್ರಜಾ ಸಂಖ್ಯೆವರೆಗೂ 35 ಸ್ಥಳಗಳಿರಬೇಕೆಂದು ನಾನು ಸೂಚನೆ ಇಡುತ್ತೇನೆ; 50 ಸಾವಿರಕ್ಕೆ ಮೇಲ್ಪಟ್ಟು 70 ಸಾವಿರದವರೆಗೆ 31 ಸ್ಥಳಗಳಿರಬೇಕು. ಏಕೆಂದರೆ ಜಿಲ್ಲಾಮಟ್ಟದ ಮೇಲೆ ಅಂದಾಜು ಮಾಡುವುದಾದರೆ ರೈತರ ಪಾಪ್ಯುಲೇಷನ್ ಪ್ರತಿಯೊಂದು ಜಿಲ್ಲೆಯಲ್ಲಿಯೂ ಯಾವ ಕಾಲಕ್ಕಾದರೂ ಹೆಚ್ಚುತ್ತಾ ಇದೆ. ಈಗ ಅನೇಕ ಜಿಲ್ಲೆಗಳಲ್ಲಿ 34 ಸ್ಥಾನಗಳಿವೆ. ಈಗ 13ನೇ ಕಾಲಮು ಜಾರಿಗೆ ಬಂದರೆ, ಆ ಸ್ಥಾನಗಳನ್ನು ರೆಡ್ಯೂಸ್ ಮಾಡಬೇಕಾಗುತ್ತದೆ; 34 ಸ್ಥಾನಗಳು 31 ಆಗುತ್ತವೆ. ಈ ಕಾರಣದಿಂದ 31ರ ಬದಲು, 35 ಸ್ಥಾನಗಳನ್ನು ಸಿಟಿ ಮುನಿಸಿಪಾಲಟಿಗಳಿಗೆ ಇರುವಂತೆ, ಈ ಒಂದು ಹೆಚ್ಚಿನ ಅವಕಾಶ ಮಾಡಿಕೊಡಬೇಕೆಂದು ನನ್ನ ಸಲಹೆ ಉಂಟು.

(ಶ್ರೀ ಎ. ಶರಣಪ್ಪ)

ಈಗ ಸೆಕ್ಷನ್ 27ರ ಪ್ರಕಾರ ಎಲೆಕ್ಷನ್ ನಡೆದನಂತರ ಚುನಾವಣೆ ಕೇಸು ಎಲೆಕ್ಷನ್ ಟ್ರಿಬ್ಯುನಲ್ಲಿಗೆ ಹೋದಮೇಲೆ, ಒಂದುವೇಳೆ ಇಬ್ಬರು ಕ್ಯಾಂಡಿಡೇಟುಗಳಿಗೆ equal votes ಬಂದಿದ್ದರೆ, lot system ಮೇಲೆ ತೀರ್ಮಾನ ಮಾಡಬೇಕೆಂದಿದೆ. ಈ 27ನೇ ಸೆಕ್ಷನ್ನಿನಲ್ಲಿ ನಮೂದಿಸಿದಂತೆ ಫಲಿತಾಂಶವಾಗಬಾರದು ಎಂದು ನನ್ನ ಅಭಿಪ್ರಾಯ. ಈ ಎಲೆಕ್ಷನ್ ಟ್ರಿಬ್ಯೂನಲ್ ವಿರುದ್ಧವಾಗಿ, party may go in appeal to the High Court ಅಂತ ಇದೆ. ಅಪೀಲಬಲ್ ಆದ ಮೇಲೆ, party consent ಇಲ್ಲದೇನೆ, ಅಲ್ಲಿ ಲಾಟ್ಸ್ ತೆಗೆದುಕೊಳ್ಳದೇನೇ, ಇತ್ಯರ್ಥ ಮಾಡುವ ಅವಕಾಶವಿದೆ. ಇಂಥ ಒಂದು ಪದ್ಧತಿ ಸರಿಯಲ್ಲ ಇಬ್ಬರು ಕ್ಯಾಂಡಿಡೇಟುಗಳಿಗೆ ಸಮನಾದ ಓಟುಗಳು ಇದ್ದರೇ ಅಂಥ ಒಂದು ಪರಿಸ್ಥಿತಿಯಲ್ಲಿ, ಪುನಃ ಒಂದು ಚುನಾವಣೆ ಆಗುವುದಕ್ಕೆ ಅಲ್ಲಿ ಅವಕಾಶವಿರಬೇಕು ಅಂತ ನನ್ನ ಅಭಿಪ್ರಾಯ.

ಸೆಕ್ಷನ್ 40ರಲ್ಲಿ President ಮತ್ತು Vice-President resignation ಬಗ್ಗೆ ಹೇಳಿದೆ, ಈ ವಿಷಯದಲ್ಲಿ ಕೆಲವೊಂದು ವಿಚಾರಗಳನ್ನು ಹೇಳಬಯಸುತ್ತೇನೆ, ಹೈದರಾಬಾದ್ ಕರ್ಣಾಟಕ ಭಾಗದಲ್ಲಿ, Hyderabad City Muncipality Act ಈಗ ಜಾರಿಯಲ್ಲಿದೆ. ಅದರ ಪ್ರಕಾರ ಪ್ರೆಸಿಡೆಂಟು ರಾಜಿನಾಮೆ ಕೊಟ್ಟುಬಿಟ್ಟರೆ, ಕಮಿಟಿಗೆ ನೋಟೀಸು ಕೊಟ್ಟು, ಆ ರಾಜೀನಾಮೆಯನ್ನು ಕಮಿಟಿಗೆ ಕಳುಹಿಸಬೇಕು.

ಕಳುಹಿಸಿದ ನಂತರ ನಿರ್ದಿಷ್ಟವಾಗಿ ಇಂತಿಷ್ಟೇ ಅವಧಿಯಲ್ಲಿ ಆ ಒಂದು ವಿಷಯದಲ್ಲಿ ಚರ್ಚೆಯಾಗಲೇಬೇಕು, ಚರ್ಚೆಯಾದನಂತರ ಆ ಕಮಿಟಿಯ ಅನುಮತಿಯ ಮೇಲೆ ರೆಸಿಗ್ನೇಷನ್ ಕೊಟ್ಟಿದ್ದನ್ನು ನಿಮ್ಮ ಅಧಿಕಾರಿಗಳಿಗೆ ಕಳುಹಿಸತಕ್ಕ ಒಂದು ಅವಕಾಶವನ್ನು ಅಲ್ಲಿ ಕಾಣಿಸಲಾಗಿತ್ತು. ಇಲ್ಲಿ ಹಾಗಿಲ್ಲ ಇಲ್ಲಿ ನೇರವಾಗಿ ಡೆಪ್ಯುಟಿ ಕಮೀಷನರಿಗಾಗಲೀ ಅಥವಾ ಡಿವಿಜನಲ್ ಕಮೀಷನರಿಗಾಗಲೀ ಕಳುಹಿಸಿಕೊಡಬಹುದು. ಮುಟ್ಟಿದ ಹತ್ತು ದಿವಸಗಳಲ್ಲಿ ಅದು ಜಾರಿಗೆ ಬರಬಹುದು ಎಂದು ಸೆಕ್ಷನ್ 40ರಲ್ಲಿ ಹೇಳಿದ್ದಾರೆ. ಅದು ಸರಿಯಲ್ಲ. ಏಕೆಂದರೆ ರಾಜೀನಾಮೆ ಕೊಡತಕ್ಕ ವ್ಯವಸ್ಥೆ ಯಾವಾಗಲೂ ಕಮಿಟಿಯಿಂದ ಆರಿಸಲ್ಪಟ್ಟ ಅಧ್ಯಕ್ಷರು ಚರ್ಚೆ ಮಾಡುವುದಕ್ಕೂ, ಸದಸ್ಯರ ಅಭಿಪ್ರಾಯ ಪಡೆಯುವುದಕ್ಕೂ ಅನುಕೂಲತೆ ಇರಬೇಕು. ಒಂದುವೇಳೆ ಕಮಿಟಿ ಅನುಮತಿ ಕೊಡದಿದ್ದರೆ ಅಂಥಾ ರಾಜೀನಾಮೆಯನ್ನು ಸ್ವೀಕರಿಸಬಾರದು ಎಂಬ ಅಂಶ ಮೊದಲನೆಯ ಕಾಯಿದೆಯಲ್ಲಿದೆ. ಅದೇ ಪ್ರಕಾರ ಹೈದರಾಬಾದ್ ಕರ್ನಾಟಕದ ಭಾಗದಲ್ಲಿದ್ದ ಕಾಯಿದೆ ಅನುಸರಿಸಿ ಇಲ್ಲೂ ಕೂಡ ಕಮಿಟಿಯ ಅಭಿಪ್ರಾಯ ಪಡೆಯತಕ್ಕ ವಿಚಾರ ಈ ಸೆಕ್ಷನ್‌ನಲ್ಲಿ ತೋರಿಸಿ ಮುಂದೆ ಕಮಿಟಿ ಒಪ್ಪಿದ್ದೇ ಆದರೆ ಡೆಪ್ಯುಟಿ ಕಮೀಷನರು ಅಥವಾ ಡಿವಿಜನಲ್ ಕಮೀಷನರಿಗೆ ಕಳುಹಿಸತಕ್ಕ ವಿಚಾರ ಮಾಡುವುದು ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

2-30 P.M.

41ನೇ ಸೆಕ್ಷನ್‌ನಲ್ಲಿ ಆರು ತಿಂಗಳವರೆಗೂ leave ಕೊಡಬಹುದು ಎಂದು ಇದೆ. ಆರು ತಿಂಗಳು ಎಂದರೆ at a time ಕೊಡಬಹುದೇ ಅಥವಾ ವೈಸ್ ಪ್ರೆಸಿಡೆಂಟ್, ಪ್ರೆಸಿಡೆಂಟ್ ಆಗಿದ್ದ ಟರ್ಮ್‌ನಲ್ಲಿ ಆರು ತಿಂಗಳು ಆತ leave ಪಡೆಯಬಹುದೇ ಎಂಬ clarification ಬೇಕಾಗುತ್ತದೆ. ಅದನ್ನು ಸ್ವಲ್ಪ clarify ಮಾಡಬೇಕು.

ಸೆಕ್ಷನ್ 96ರಲ್ಲಿ schedule of articles (2)ರ ವಿಷಯವಾಗಿ ಮಾತನಾಡಬೇಕೆಂದು ಇದ್ದೇನೆ. ಹಳ್ಳಿ ಪ್ರದೇಶದಲ್ಲಿ ಹತ್ತಿ ಮತ್ತು ಶೇಂಗಾದ ಮೇಲೂ ಆಕ್ಟ್ರಾಯ್ ಹಾಕಬಹುದು ಎಂದು ಕಾಣಿಸಲಾಗಿದೆ. ಒಕ್ಕಲುತನ ಮಾಡತಕ್ಕ ಜನರಿಗೆ ಈಗಾಗಲೇ ಸೇಲ್ಸ್‌ಟ್ಯಾಕ್ಸ್ ಮತ್ತು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಅಲ್ಲದೆ ಇನ್ನಿತರ ಸ್ಥಳೀಯ ಕರಗಳು ಹೆಚ್ಚಾಗಿ ಅವರ ಮೇಲೆ ಬಿದ್ದಿರತಕ್ಕ ಪ್ರಯುಕ್ತ ಹತ್ತಿ ಮತ್ತು ಶೇಂಗಾಕ್ಕೆ ಆಕ್ಟ್ರಾಯ್ ಡ್ಯೂಟಿ ಹಾಕಬಾರದು ಅವಕ್ಕೆ ವಿನಾಯಿತಿ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಪೌರ ಮತ್ತು ನಗರ ಸಭೆಗಳ ಕೆಲವೊಂದು ಅಧಿಕಾರಗಳ ಬಗ್ಗೆ ಹೇಳುವುದಾದರೆ ಇನು ಅದು ವಿಕೇಂದ್ರೀಕರಣವಾಗಿಲ್ಲ ಎಂದು ನನ್ನ ಅಭಿಪ್ರಾಯ. ಈ ಬಿಲ್ ಸೆಲೆಕ್ಟ್ ಕಮಿಟಿಗೆ ಹೋಗುವಂತಹದರಲ್ಲಿರುವುದರಿಂದ ಎಲ್ಲ ಸೆಕ್ಷನ್‌ಗಳ ಮೇಲೂ ಮಾತನಾಡುವುದಕ್ಕಿಂತ ಪುನಃ ಈ ಬಿಲ್ಲು ಈ ಸಭೆಯ ಮುಂದೆ ಬಂದಾಗ್ಯೆ ಸವಿಸ್ತಾರವಾಗಿ ಪ್ರತಿಯೊಂದರ ಬಗ್ಗೆ ಮಾತನಾಡಲು ಅನುಕೂಲವಾಗುತ್ತದೆಂದು ಭಾವಿಸಿ ಈಗ ನಾನು ಇಟ್ಟಿರುವ ನಾಲ್ಕಾರು ಸಲಹೆಗಳನ್ನು ಸೆಲೆಕ್ಟ್ ಕಮಿಟಿಯವರು ಗಣನೆಗೆ ತಂದುಕೊಂಡು ಆಯಾಯ ವಿಚಾರಗಳ ಬಗ್ಗೆ ಪರಿಶೀಲನೆ ಮಾಡಬೇಕೆಂದು ಹೇಳಿ ಈ ಕಾಯಿದ

ಬಹಳ ಮುಖ್ಯವಾದದ್ದು, ಸಕಾಲಿಕವಾದದ್ದು ಇದನ್ನು ಈ ದಿವಸ ಮಾನ್ಯ ಸಚಿವರು ಇಟ್ಟಿರುವುದು ಏನಿದೆ ಇದನ್ನು ಅದಷ್ಟು ತೀವ್ರ ನಮ್ಮ ರಾಜ್ಯದಲ್ಲಿ ಏಕಮುಖವಾದ ಕಾಯಿದೆಯಾಗುವಂತೆ ಮಾಡಿ ಜಾರಿಗೆ ತರಲಿ ಎಂದು ಮತ್ತೊಮ್ಮೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಚನ್ನಬೈರೇಗೌಡ (ಹೊಸಕೋಟೆ).—ಸುಮಾರು ಏಳು ರಾಜ್ಯಗಳ ಆಡಳಿತವನ್ನು ಗಮನಿಸಿ ಈಗ ಸಮಗ್ರವಾದ ಒಂದು ಮುನಿಸಿಪಲ್ ಬಿಲ್‌ನ್ನು ಸಭೆಯಮುಂದೆ ಮಂಡಿಸಿರುವುದೇನಿದೆ ಇದನ್ನು ನಾನು ಸ್ವಾಗತಿಸುತ್ತೇನೆ. ಇವರಲ್ಲಿ ಕೆಲವು ಅಂಶಗಳು ತಪ್ಪಾಗಿವೆ ಮತ್ತು ಕೆಲವನ್ನು ಸೇರಿಸಬೇಕಾಗಿದೆ. ಅವು ಯಾವುವು ಎಂಬುದನ್ನು ಸೆಲೆಕ್ಟ್ ಕಮಿಟಿಯವರು, ಮಾನ್ಯ ಸಚಿವರು ಮತ್ತು ಸಚಿವಾಲಯದವರು ಗಮನಿಸಬೇಕೆಂದು ಹೇಳುತ್ತೇನೆ. 288ನೇ ಸೆಕ್ಷನ್‌ನಲ್ಲಿ-ಲೋಕಲ್ ಬೋರ್ಡ್ ಮತ್ತು ಮುನಿಸಿಪಾಲಿಟಿಗಳ ಆಡಳಿತವನ್ನು ನಡೆಸಲಿಕ್ಕೆ ಒಂದು ಎಲ್.ಎಸ್.ಜಿ ಕಮೀಷನ್ ಇರಬೇಕು. ಈಗ ಇರುವಂತೆ ಡೆಪ್ಯುಟಿ ಕಮೀಷನರನ್ನು ನೇಮಕ ಮಾಡುವುದು ಸರಿಯಲ್ಲ, ಡೆಪ್ಯುಟಿ ಕಮಿಷನರಿಗೆ ರೆವಿನ್ಯೂ ಮತ್ತು ಆಂಟಿಕರಪ್ಷನ್ ಇತ್ಯಾದಿ ಅನೇಕ ಕೆಲಸಗಳಿರುವುದರಿಂದ ಲೋಕಲ್ ಬೋರ್ಡ್‌ಗಳ ಆಡಳಿತವನ್ನು ನೋಡಿಕೊಳ್ಳುವುದಕ್ಕಾಗುವುದಿಲ್ಲ. ಹಿಂದೆ ಮೈಸೂರು ರಾಜ್ಯದಲ್ಲಿ ಎಲ್.ಎಸ್.ಜಿ. ಕಮೀಷನ್ ಅಂತ ಅದಕ್ಕೆ ಒಬ್ಬ ಅಧಿಕಾರಿಗಳನ್ನಿಟ್ಟು ಅವರ ಮೂಲಕ ಪ್ರತಿಯೊಂದು ಎಲ್.ಎಸ್.ಜಿ. ಯೋಗಕ್ಷೇಮ ನೋಡಿಕೊಳ್ಳುತ್ತಿದ್ದರು. ಈಗ ಇವರ ಕೆಲಸ ನಡೆದಷ್ಟು ಸುಗಮವಾಗಿ ಸರಳವಾಗಿ ಇಂದು ನಡೆಯುತ್ತಿಲ್ಲ. ಅನೇಕ ತೊಡಕುಗಳಿವೆ. ಆದ್ದರಿಂದ ಎಲ್.ಎಸ್.ಜಿ. ಕಮಿಷನ್ ಅಂತ ಒಂದು separate cadre ಅವರನ್ನೇ ನೇಮಕ ಮಾಡಿ ಆ ಮೂಲಕ ಲೋಕಲ್ ಬೋರ್ಡುಗಳ ಅಭಿವೃದ್ಧಿ ಕೆಲಸಕಾರ್ಯಗಳಿಗೆ ಸರ್ಕಾರ ಯೋಜನೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಹಾಗೆಯೇ 289ರಲ್ಲಿ power of inspection and supervision ಅಂತ ಇದೆ.

> "The Commissioner, Deputy Commissioner or any officer of the Government, authorised by the Government, by a general or special order shall have power"

ಎಂದು ಹೇಳಿದ್ದಾರೆ. ಡೆಪ್ಯುಟಿ ಕಮೀಷನರಿಗಿಂತ ಕಡಮೆ ದರ್ಜೆಯ ಅಧಿಕಾರಿಗಳಿಗೆ ಲೋಕಲ್ ಬೋರ್ಡು ಅಥವಾ ಮುನಿಸಿಪಾಲಿಟಿಗಳ ಮೇಲೆ ಸೂಪರ್‌ವಿಜನ್ ಮಾಡುವುದಕ್ಕೂ ಇನ್‌ಸ್ಪೆಕ್ಷನ್ ಮಾಡುವುದಕ್ಕೂ ಅಧಿಕಾರವಿರುವುದು ಸರಿಯಲ್ಲ ಎಂದು ಸಲಹೆ ಮಾಡುತ್ತೇನೆ. ಇದಕ್ಕೇ ಎಲ್.ಎಸ್.ಜಿ. ಕಮೀಷನ್ ಇದ್ದರೆ ಮುನಿಸಿಪಾಲಿಟಿಗಳು ಅಭಿವೃದ್ಧಿಗೆ ಬರುತ್ತವೆ. ಏಕೆ ಹೇಳುತ್ತೇನೆ ಎಂದರೆ ಒಂದು ಉದಾಹರಣೆ ಹೇಳಬೇಕಾದರೆ ಮೊನ್ನೆತಾನೆ 1962-63ನೇ ಸಾಲಿಗೆ ಗ್ರಾಂಟ್ ಕೊಟ್ಟಿದ್ದೀರಿ ಮಾರ್ಚ್ 23ನೇ ತಾರೀಖು ಸೆಕ್ರೆಟೇರಿಯಟ್ ಲೆವೆಲ್‌ನಲ್ಲಿ ಸ್ಯಾಂಕ್ಷನ್ ಆಗಿದೆ. ಒಂದೊಂದು ಜಿಲ್ಲೆಯ ಮುನಿಸಿಪಾಲಿಟಿಗೆ 5, 8 ಸಾವಿರ ರೂಪಾಯಿಗಳನ್ನು ಅವರಿಗೆ ಮನಸ್ಸಿಗೆ ಬಂದಹಾಗೆ ಕೊಟ್ಟಿದ್ದಾರೆ. ಇಷ್ಟು ಜನಸಂಖ್ಯೆ ಇರತಕ್ಕ ಮುನಿಸಿಪಾಲಿಟಿಗೆ ಇಂತಿಷ್ಟೇ ದುಡ್ಡು ಕೊಡಬೇಕು ಎಂದು ಹೇಳಿ ಏನೂ ಇಲ್ಲ. ಮಂತ್ರಿಗಳಿಗೆ ಮನಸ್ಸುಬಂದಂತೆ ಯಾರು ಹೇಗೆ ಹೇಳುತ್ತಾರೆ ಹಾಗೆ ಅವರ ಪ್ರಭಾವಕ್ಕೆ ಒಳಪಟ್ಟು ಕೆಲವು ಮುನಿಸಿಪಾಲಿಟಿಗಳಿಗೆ 25 ಸಾವಿರ, ಕೆಲವು ಮುನಿಸಿಪಾಲಿಟಿಗಳಿಗೆ 5 ಸಾವಿರ ಇನ್ನು ಕೆಲವಕ್ಕೆ ಇಲ್ಲವೇ ಇಲ್ಲ ಹೀಗೆ ನಾನಾ ತರಹ ಹಂಚಿಕೆಯಾಗಿದೆ. 23ನೇ ಮಾರ್ಚಿನಲ್ಲಿ ಕೊಟ್ಟಿದ್ದಾರೆ. ಈ ಹಣ ಪಡೆಯಬೇಕಾದರೆ ಮುನಿಸಿಪಾಲಿಟಿಯ ನಿರ್ಣಯವಾಗಬೇಕು. ಯಾವ ಉದ್ದೇಶಕ್ಕೆ ಕೊಟ್ಟಿದೆಯೋ ಆ ಉದ್ದೇಶಕ್ಕೆ ಖರ್ಚಾಗಬೇಕಾದರೆ ಹೇಗೆ ಸಾಧ್ಯ? 29ನೇ ತಾರೀಖಿಗೆ ಮುಂಚೆ ಕಳುಹಿಸಿದರೂ ಸಹ ಎ. ಜಿ. ಆಫೀಸಿನಲ್ಲಿ pay slip ಕೊಡುವುದಿಲ್ಲ. 31ನೇ ತಾರೀಖು ಆಗಿಹೋದರೆ ಹಣ ಲ್ಯಾಪ್ಸ್ ಆಗುತ್ತದೆ. 9ಲಕ್ಷ ರೂಪಾಯಿ ಗ್ರಾಂಟ್ ಕೊಡುತ್ತೀರಿ ಎಂದು ಆಗುತ್ತದೆಯೇ ಹೊರತು ಯಾವ ಮುನಿಸಿಪಾಲಿಟಿಗಳಿಗೂ ಅದರಿಂದ ಸಹಾಯವಾಗುವುದಿಲ್ಲ. ಡೆಪ್ಯುಟಿ ಕಮೀಷನರಿಗೆ ಬೇಕಾದಷ್ಟು ಕೆಲಸವಿರುತ್ತದೆ. ಅವರು ತಮ್ಮ parent departmentಗೆ ಎಷ್ಟು ಗಮನ ಕೊಡಬೇಕಾಗುತ್ತದೆಯೋ ಅಷ್ಟು ಗಮನ ಮುನಿಸಿಪಾಲಿಟಿ ಮತ್ತು ಲೋಕಲ್ ಬೋರ್ಡುಗಳ ಕಡೆಗೆ ಕೊಡುವುದಕ್ಕಾಗುವುದಿಲ್ಲ, ಆದ್ದರಿಂದ ಇದಕ್ಕೆ ಒಂದು ಸ್ಪೆಷಲ್ ಕೇಡರ್ ಇರಬೇಕು. ಎಲ್. ಎಸ್. ಜಿ ಕಮೀಷನರನ್ನು ನೇಮಕಮಾಡಿ ಆ ಮೂಲಕ ಮುನಿಸಿಪಾಲಿಟಿಗಳ ಅಭಿವೃದ್ಧಿಕಾರ್ಯ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಈ ಮಸೂದೆಯ ಕ್ಲಾಜ್ 339ರಲ್ಲಿ ಈ ಮುನಿಸಿಪಲ್ ಕಮಿಷನರ ಹುದ್ದೆಗೆ—ಸ್ಥಾನಕ್ಕೆ ಇಲ್ಲಿಯತನಕ ರೆವಿನ್ಯೂ ಡಿಪಾರ್ಟ್‌ಮೆಂಟಿನ ಅಧಿಕಾರಿಗಳಿಗೆ ಪ್ರಮೋಷನ್ ಕೊಟ್ಟು ಈ ಸ್ಥಾನಕ್ಕೆ ಹಾಕುತ್ತಿದ್ದರು ಆದರೆ ಅವರಿಗೆ ಈ ಸ್ಥಳೀಯ ಸಂಸ್ಥೆಗಳ ವಿಚಾರ ಏನೆಂದರೆ ಏನೂ ಗೊತ್ತಿರ

(ಶ್ರೀ ಬಿ. ಚನ್ನಭೈರೇಗೌಡ)

ಲಿಲ್ಲ. ಅಂಥವರಿಂದ ಈ ಸಂಸ್ಥೆಗಳ ಅಭಿವೃದ್ಧಿ ಎಷ್ಟರ ಮಟ್ಟಿಗೆ ಸಾಧಿಸಲ್ಪಡಬಹುದೆಂಬುದನ್ನು ತಾವುಗಳೇ ಊಹಿಸಬಹುದು. ಮೇಲಾಗಿ ಆ ರೆವಿನ್ಯೂ ಡಿಪಾರ್ಟಮೆಂಟಿನಲ್ಲಿ ಯಾರು ಸರಿಯಾಗಿ ಕೆಲಸ ಮಾಡುವುದಿಲ್ಲವೋ ಅಂಥವರನ್ನೇ ಆರಿಸಿ ಈ ಸ್ಥಾನಕ್ಕೆ ಹಾಕತಕ್ಕ ಪದ್ಧತಿ ಇಲ್ಲಿಯುವರೆಗೂ ನಡೆದು ಕೊಂಡು ಬರುತ್ತಿತ್ತು. ಆದರೆ ಇದಕ್ಕೆ ನೇರವಾಗಿ ಈ ಎಲ್.ಎಸ್.ಜಿ. ಬ್ರಾಂಚಿನಲ್ಲೇ ಕೆಲಸ ಮಾಡಿ, ಈ ಲೈನಿನಲ್ಲೇ ಚೆನ್ನಾಗಿ ತಯಾರಾಗಿರತಕ್ಕವರನ್ನು ಈ ಸ್ಥಾನಕ್ಕೆ ನೇಮಿಸಬೇಕು ಮತ್ತು ಅವರಿಗೆ ಈ ಲೈನಿನಲ್ಲಿ ಸಾಕಷ್ಟು ಟ್ರೈನಿಂಗ್‌ನ್ನೂ ಸಹ ಕೊಡಬೇಕೆಂದು ಸಲಹೆ ಮಾಡುತ್ತೇನೆ. ಆದರೆ ಈಗ ಇಲ್ಲಿ ಸೂಚಿಸಿರತಕ್ಕ ಕ್ಲಾಜ್ 339ನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ ಈ ಸ್ಥಾನಕ್ಕೆ L.S.G. ಕೇಡರಿನಲ್ಲಿ ನುರಿತವರನ್ನೇ ಹಾಕುವಂತೆ ಕಡ್ಡಾಯ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಆದರೆ ಇಲ್ಲಿಯ ತನಕ ಬಂದಿದ್ದ ಪದ್ಧತಿಯನ್ನು ಕೂಡಲೇ ರದ್ದು ಪಡಿಸಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಕ್ಲಾಜ್ 312ರಲ್ಲಿ ಚೀಫ್ ಆಫೀಸರ ಅಧಿಕಾರಗಳೇನೆಂಬುದನ್ನೆಲ್ಲಾ ತಿಳಿಸಿದ್ದಾರೆ. ಇವರು ಮುನಿಸಿಪಲ್ ಕೌನ್ಸಿಲ್‌ನ ಪ್ರೀವಿಯಸ್ ಪರ್ಮಿಷನ್ ಇಲ್ಲದೆ 25 ರೂಪಾಯಿಗಳ ಕೆಳಪಟ್ಟ ನೌಕರಿಗಳನ್ನು ನೇರವಾಗಿ ಭರ್ತಿಮಾಡಬಹುದೆಂದು ಹೇಳಲಾಗಿದೆ. ಅಂದರೆ ಈ ದಿವಸ ಆ ಸ್ವೀಪರ್ಸ್-ಕ್ಲಾಸ್ ಫೋರ್‌ನವರ ಸಂಬಳ ಸಾರಿಗೆಗಳು 50 ರೂಪಾಯಿಗಳಿಗೆ ಕಮ್ಮೀ ಇಲ್ಲ. ಹೀಗಿರುವಾಗ ಇಲ್ಲಿ 25 ರೂಪಾಯಿಗಳ ಬೇಸಿಕ್ ಪೇ ಇರತಕ್ಕ ನೌಕರಿಗಳು ಇವರೇ ಕೊಡಬಹುದಂತ ಹೇಳಿರುವುದರಲ್ಲಿ ಯಾವ ಅರ್ಥವೂ ಇಲ್ಲ. ಆದರೆ ಈ ಅಪಾಯಿಂಟ್‌ಮೆಂಟುಗಳ ಅಧಿಕಾರವೆಲ್ಲ ಅಧ್ಯಕ್ಷರಿಗೋ, ಉಪಾಧ್ಯಕ್ಷರಿಗೋ ಇರಬೇಕಾದ್ದು ನ್ಯಾಯ. ಆದ್ದರಿಂದ ಈಗ ಈ ಚೀಫ್ ಆಫೀಸರವರಿಗೆ ಕೊಟ್ಟಿರ ತಕ್ಕ ಈ ಅಧಿಕಾರವನ್ನು ತೆಗೆದು ಹಾಕಬೇಕು ಎಂತ ಹೇಳುತ್ತೇನೆ.

ಇನ್ನು ಕ್ಲಾಜ್ 43ರಲ್ಲಿ—Functions of the President ವಿಚಾರ ತಿಳಿಸಲಾಗಿದೆ. ಇಲ್ಲಿ ಅಧ್ಯಕ್ಷರ ಅಧಿಕಾರವನ್ನು ಬಹಳ ಮೊಟಕು ಮಾಡಿದ್ದಾರೆ. ಪ್ರಜಾಪ್ರಭುತ್ವ ಆಡಳಿತವಿರತಕ್ಕ ಕಾಲದಲ್ಲಿ ಜನರಿಂದ ಚುನಾವಣೆಗಳಲ್ಲಿ ಆರಿಸಿ ಬಂದ ಅಧ್ಯಕ್ಷರಿಗೆ ಅಧಿಕಾರವಿಲ್ಲ—ಉಪಾಧ್ಯಕ್ಷರಿಗೆ ಅಧಿಕಾರವಿಲ್ಲ. ಈ ದಿವಸ ಈ ಅಧಿಕಾರವೆಲ್ಲ ಚೀಫ್ ಆಫೀಸರು—ಜಿಲ್ಲಾಧಿಕಾರಿಗಳು ಮತ್ತು ಡಿವಿಜನಲ್ ಕಮಿಷನರ ಪಾಲಾಗಿದೆ. ಇದು ತುಂಬಾ ನಾಚಿಗೇಡಿನ ಬದುಕು. ಪ್ರಜಾ ಪ್ರಭುತ್ವ ಆಡಳಿತದಲ್ಲಿ ಹೀಗಿರಬಾರದು. ನಮ್ಮ ಹಳೇ ಮೈಸೂರು ಪ್ರಾಂತ್ಯದಲ್ಲಿ ಸುಮಾರು 20–25 ವರ್ಷ ಗಳಿಂದ ಈ ಮೇಜರ್ ಮತ್ತು ಮೈನರ್ ಮುನಿಸಿಪ್ಯಾಲಿಟಿಗಳ ಆಡಳಿತವೆಲ್ಲ ಈ ಅಧ್ಯಕ್ಷರು–ಉಪಾಧ್ಯಕ್ಷರ ಕೈಲಿತ್ತು. ಅವರು ಬಹಳ ಜವಾಬ್ದಾರಿಯಿಂದ ತಮ್ಮ ಕೆಲಸ ಕಾರ್ಯಗಳನ್ನು ನಿರ್ವಹಿಸಿ ಕೊಂಡು ಬಂದಿದ್ದಾರೆ. ಇಲ್ಲಿಯ ತನಕ ಈ L.S.G. ಸಂಸ್ಥೆಗಳು ಪ್ರಜಾಪ್ರಭುತ್ವದಲ್ಲಿ ಸರ್ಕಾರದ ಆಡಳಿತ ನಡೆಸಲು ಜನಗಳಿಗೊಂದು ಪಾಠಕಲಿಸತಕ್ಕ ಶಾಲೆಗಳೋಪಾದಿಯಲ್ಲಿದ್ದವು. ಈ ಸಂಸ್ಥೆಗಳಲ್ಲಿ ಖಾಸಗೀ ಅಧ್ಯಕ್ಷರುಗಳಿಗೂ—ಉಪಾಧ್ಯಕ್ಷರುಗಳಿಗೂ ಇಲ್ಲಿಯುವರೆಗೂ ಇದ್ದಂಥ ಅಧಿಕಾರಗಳನ್ನು ಈ ದಿವಸ ಖಂಡಿತ ಮೊಟಕು ಮಾಡಬಾರದು. ಇವರಿಗೆ ಹಿಂದಿಗಿಂತ ಇಂದು ಇನ್ನೂ ಹೆಚ್ಚಿನ ಅಧಿಕಾರ ಕೊಡಬೇಕೇ ಹೊರತು ಕೊಟ್ಟಿದ್ದ ಅಧಿಕಾರವನ್ನು ಕಿತ್ತುಕೊಳ್ಳಬಾರದೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಕ್ಲಾಜ್ 42ರಲ್ಲಿ ಈ ಮುನಿಸಿಪ್ಯಾಲಿಟಿಗಳಿಗೆ ಅಧ್ಯಕ್ಷರು, ಉಪಾಧ್ಯಕ್ಷರುಗಳ ನೇಮಕದ ವಿಚಾರ ಹೇಳುತ್ತು ಸಿಟಿ ಮುನಿಸಿಪ್ಯಾಲಿಟಿಗಳಿಗೆ ಮಾತ್ರ ಅಧ್ಯಕ್ಷರೂ ಮತ್ತು ಉಪಾಧ್ಯಕ್ಷರೂ ಇರ ಬೇಕೆಂದು ಹೇಳಿದ್ದಾರೆ. ಇಲ್ಲಿ ಈ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಅಧಿಕಾರದ ಕಾಲಾವಧಿ ಮುಗಿದ ಮೇಲೆ ಅಥವಾ ಮತ್ತೆ ಯಾವುದಾದರೂ ಕಾರಣಗಳಿಗಾಗಿ ಅವರನ್ನು ಆ ಸ್ಥಾನದಿಂದ ಕಿತ್ತು ಹಾಕಿದಾಗ ಅವರು ಅವರ ಆಫೀಸ್ ಛಾರ್ಜನ್ನು ಕೊಡದೆ ತಿರಸ್ಕಾರ ಮಾಡಿದಾಗ ಅವರಿಗೇನು ಮಾಡಬೇಕು ? ಈಗ ಯಾರಾದರೊಬ್ಬರ ಮೇಲೆ ಒಂದು ಅವಿಶ್ವಾಸ ನಿರ್ಣಯ ಬಂದು ಪಾಸಾದಾಗ ಅವರು ಛಾರ್ಜನ್ನು ಕೊಡುವುದಕ್ಕೆ ಉಲ್ಲಂಘನೆ ಮಾಡಿದ ಸಂದರ್ಭಗಳು ಬಂದರೆ ಅದಕ್ಕೇನು ರೆಮಿಡಿ ಇರಬೇಕೋ ಅದನ್ನೂ ಸಹ ಈ ಕ್ಲಾಜಿನಲ್ಲಿ ನಮೂದಿಸಬೇಕೆಂದು ಸಲಹೆ ಮಾಡುತ್ತೇನೆ. ಏಕೆಂದರೆ ಅಂಥ ಸಂದರ್ಭಗಳು ಮುಂದೆ ಒದಗುವುದರಲ್ಲಿ ಆಶ್ಚರ್ಯವೇನಿಲ್ಲ.

ಇನ್ನು ಕ್ಲಾಜ್ 85ರಲ್ಲಿ ಕೆಲವು ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರಕ್ಕೆ ಸೇರಿರತಕ್ಕ ಕಟ್ಟಡಗಳ ಮೇಲೆ ಮುನಿಸಿಪಲ್ ಕಂದಾಯ ಹಾಕಬಾರದೆಂದು ಹೇಳಲಾಗಿದೆ. ಆದರೆ ಇದು ಹಿಂದಿನಿಂದಲೂ ಏನೋ ಒಂದು ರೀತಿಯಲ್ಲಿ ನಡೆದುಕೊಂಡು ಬಂದಿದೆ. ಆದರೆ ಈ ರಿಯಾಯಿತಿ ಯನ್ನಿನ್ನು ನಾವು ಮುಂದುವರಿಸುವುದು ಬೇಕಾಗಿಲ್ಲ. ಈ ದಿವಸ ಈ ಎರಡು ಸರ್ಕಾರಗಳಿಗೂ ಹೆಚ್ಚಿನ ಉತ್ಪತ್ತಿಯಿದೆ. ಆದ್ದರಿಂದ ಈ ಕ್ಲಾಜನ್ನು ಡಿಲೀಟ್ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇತರ ಆಸ್ತಿಗಳಿಗೆ ಟ್ಯಾಕ್ಸ್ ಹಾಕುವಂತೆ ಇವುಗಳಿಗೂ ಟ್ಯಾಕ್ಸನ್ನು ಹಾಕಬೇಕೆಂದು ಸಲಹೆ ಮಾಡು

ತ್ತೇನೆ. ಹಾಗೆ ಟ್ಯಾಗ್ಸೇಷನ್ ಬಗ್ಗೆ ಈಗ ಮೊಹತರ್ಫ 8% ಏರಿಸಿದ್ದಾರೆ. ಈ ಹಿಂದೆ ಇದು 6% ಇತ್ತು. ಆದ್ದರಿಂದ 8% ಹಾಕಬೇಕೆಂದು ಸೂಚಿಸಿರುವುದು ಬಹಳ ಜಾಸ್ತಿಯಾಯಿತು. ಈ ಹಿಂದೆ ನಮ್ಮ ಹಳೇ ಮೈಸೂರಿನಲ್ಲಿ ಇದು ಶೇ. 6 ಇತ್ತು. ಈಗಾಗಲೇ ಜನರ ಮೇಲೆ ಈ ತೆರಿಗೆಗಳ ಭಾರ ಬಹಳ ಜಾಸ್ತಿಯಾಗಿದೆ. ಇದನ್ನು ರದ್ದು ಮಾಡಿ ಮೊದಲಿದ್ದಂತೆ ಶೇ. 6 ಇಡಬೇಕೆಂದು ಹೇಳುತ್ತೇನೆ. ಹಾಗೇ ಖಾಲಿ ನಿವೇಶಗಳಿಗೂ ಈ ದಿವಸ ಕಂದಾಯ ಜಾಸ್ತಿ ಮಾಡಿದ್ದಾರೆ. ಚ.ಗ.ಕ್ಕೆ 2 ರೂಪಾಯಿ ಮಾಡಿದ್ದಾರೆ. ಇದು ಬಹಳ ಜಾಸ್ತಿ ಆಯಿತು. ಮೊದಲು ಚ.ಗ.ಕ್ಕೆ 8 ಆಣೆ ಮಾತ್ರವಿತ್ತು. ಈ ದಿವಸ ಯಾರಲ್ಲಿ ಹಣವಿಲ್ಲವೋ—ಯಾರು ಬಡವರಾಗಿದ್ದಾರೋ—ಯಾರಿಗೆ ಕಟ್ಟಡ ಕಟ್ಟಿಸುವ ಶಕ್ತಿ ಯಿಲ್ಲವೋ ಅಂಥವರು ಮಾತ್ರ ನಿವೇಶಗಳನ್ನು ಖಾಲಿ ಬಿಟ್ಟುಕೊಂಡಿರುತ್ತಾರೇ ಹೊರತು ಶ್ರೀಮಂತರು ಎಂದಿಗೂ ಹಾಗೆ ಖಾಲಿ ಬಿಟ್ಟುಕೊಂಡಿರುವುದಿಲ್ಲ. ಅವರಿಗೆ ಅದಷ್ಟು ಬಾಡಿಗೆ ದುಡಿಯ ಬೇಕೆಂಬ ಆಸೆ ಬಲವಾಗಿರುತ್ತೆ. ಆದ್ದರಿಂದ ಇದನ್ನು ಖಂಡಿತ 8 ಆಣೆಗೆ ಇಳಿಸಬೇಕು ಅಥವಾ ಒಂದು ರೂಪಾಯಿಗೆ ಇಳಿಸಲೇಬೇಕೆಂದು ಹೇಳುತ್ತೇನೆ. ಇನ್ನು ಕೆಲವು ಕಡೆ ಮುನಿಸಿಪಾಲಿಟಿ ಗಳಿಗೂ—ಸ್ಕೂಲುಗಳಿಗೂ ಕಟ್ಟಡವಿಲ್ಲದೆ ಅವು ಬಾಡಿಗೆ ಕಟ್ಟಡದಲ್ಲಿರುತ್ತವೆ. ಇದಕ್ಕೆ ಸರ್ಕಾರದವರು ಏನಾದರೂ ಒಂದು ದಾರಿ ಕಂಡುಹಿಡಿದು ಅವುಗಳ ಅನುಕೂಲಕ್ಕೆ ತಕ್ಕ ಹಾಗೆ ಕಟ್ಟಡಗಳನ್ನು ಒದಗಿಸಲು ಏರ್ಪಾಡು ಮಾಡಬೇಕಂತ ಹೇಳುತ್ತೇನೆ. ಹಾಗೆ ಈ ಶಿಶು ವಿಹಾರಗಳಿಗೂ ಕಟ್ಟಡ ಗಳಿಲ್ಲ ಇವುಗಳಿಗೂ ಕಟ್ಟಡವನ್ನು ಒದಗಿಸಲು ಪ್ರಯತ್ನ ಮಾಡಬೇಕು. ಈ ದಿವಸ 6 ವರ್ಷ ವಯಸ್ಸು ಆಗದ ವಿನಾ ಹುಡುಗರನ್ನು ಶಾಲೆಗೆ ಸೇರಿಸುವುದಿಲ್ಲ. ಅಲ್ಲಿಯ ತನಕ ಆ ಮಕ್ಕಳ ಅಭಿವೃದ್ಧಿಗೆ ಈ ಶಿಶು ವಿಹಾರಗಳು ತೀರಾ ಅತ್ಯಗತ್ಯ. ಈಗ ಸರ್ಕಾರದವರು ಈ ಶಿಶು ವಿಹಾರಗಳ ಮೈಂಟನೆನ್ಸ್ ಬಗ್ಗೆ ಶೇ. 50 ಮಾತ್ರ ಗ್ರಾಂಟನ್ನು ಕೊಡುತ್ತಿದ್ದಾರೆ. ಈ ದಿವಸ ಆ ಹೈಸ್ಕೂಲುಗಳಿಗೆ ಕೊಡುತ್ತಿರು ವಂತೆ ಇವುಗಳಿಗೂ ಶೇ. 85 ಮೈಂಟನೆನ್ಸ್ ಗ್ರಾಂಟನ್ನು ಕೊಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಈಗ ಎಲೆಕ್ಟ್ರಿಸಿಟಿ ಬೋರ್ಡ್ ತಯಾರಾದ ಮೇಲೆ ಆ ಬೋರ್ಡಿನಿಂದ ಸರಿಯಾಗಿ ಟ್ಯಾಕ್ಸ್ ಆಕ್ಟ್ರಾಯಿ ಇತ್ಯಾದಿಗಳು ಸ್ಥಳೀಯ ಸಂಸ್ಥೆಗಳಿಗೆ ಬರುತ್ತಿಲ್ಲ. ಆ ಬೋರ್ಡಿಗೆ ತಾಂಮ್ರದ ತಂತಿ, ವೈರ್ ಇತ್ಯಾದಿ ಅನೇಕ ಆಕ್ಟ್ರಾಯಿ ಕೊಡತಕ್ಕ ಮಾಲುಗಳು ಬರುವುದು ಜಾಸ್ತಿಯಾಗಿದೆ. ಆದ್ದರಿಂದ ಈ ಬೋರ್ಡಿನಿಂದ ಬರತಕ್ಕ ಟ್ಯಾಕ್ಸ್‌ಗಳನ್ನು ಕಡ್ಡಾಯವಾಗಿ ವಸೂಲ್ಮಾಡಿ ಕೊಳ್ಳಲು ಅವಕಾಶವಿರು ವಂತೆ ಸೆಲೆಕ್ಟ್ ಕಮಿಟಿಯವರು ಈ ಮಸೂದೆಯಲ್ಲಿ ಒಂದು ಪ್ರತ್ಯೇಕ ಪ್ರಾವಿಷನ್ ಸೇರಿಸಬೇಕೆಂದು ಸಲಹೆಮಾಡುತ್ತೇನೆ.

ಇನ್ನು ಈ ಮೈನರ್ ಮುನಿಸಿಪಾಲಿಟಿಗಳಿಗೆ ಚೀಫ್ ಆಫೀಸರನ್ನು ಆಡಳಿತ ನೋಡಿಕೊಳ್ಳಲು ಹಾಕಬೇಕಂತ ಹೇಳಿದ್ದಾರೆ. ಆದರೆ ಈ ದಿವಸ ನನಗೆ ಗೊತ್ತಿರುವಂತೆ ಕೆಲವು ಮೈನರ್ ಮುನಿಸಿ ಪಾಲಿಟಿಗಳಲ್ಲಿ ಅಂದರೆ ನರಸಾಪುರ, ತ್ಯಾಮಗೊಂಡಲು, ಈ ಸ್ಥಳಗಳಲ್ಲಿ ಈ ಚೀಫ್ ಆಫೀಸರಿಗೆ ಕೊಟ್ಟಿರತಕ್ಕ ಅಧಿಕಾರ ಬಹಳವಾಗಿದೆ. ಆದರೆ ಚುನಾಯಿತ ಅಧ್ಯಕ್ಷರಿಗೂ ಮತ್ತು ಉಪಾಧ್ಯಕ್ಷ ರಿಗೂ ಏನು ಅಧಿಕಾರಗಳಿವೆಯೆಂಬುದನ್ನು ಈ ಮಸೂದೆಯಲ್ಲಿ ಎಲ್ಲಿಯೂ ಡಿಫೈನ್ ಮಾಡಿಲ್ಲ. ಆದರೆ ಈ ಮುನಿಸಿಪಾಲಿಟಿಗೆ ಅಧಿಕಾರಿಗಳನ್ನು ನೇಮಿಸತಕ್ಕ ವಿಚಾರದಲ್ಲಿ ದೊಡ್ಡ ಮುನಿಸಿಪಾಲಿಟಿ ಗಳಿಗೆ ಅಂದರೆ 20 ಸಾವಿರ ಪ್ರಜಾ ಸಂಖ್ಯೆ ಇರತಕ್ಕ ಮುನಿಸಿಪಾಲಿಟಿಗೆ ಒಬ್ಬ ಅಸಿಸ್ಟೆಂಟ್ ಕಮೀಷನರ ದರ್ಜೆ ಅಧಿಕಾರಿಗಳೂ, 15 ಸಾವಿರ ಪ್ರಜಾ ಸಂಖ್ಯೆ ಇರತಕ್ಕ ಮುನಿಸಿಪಾಲಿಟಿಗಳಿಗೆ ತಹಶೀಲ್ದಾರರ ದರ್ಜೆಯವರನ್ನು ಹಾಕಿದರೆ ಒಳ್ಳೆಯದೆಂದು ಸಲಹೆ ಮಾಡುತ್ತೇನೆ. ಹೀಗೆ ಮಾಡಿದರೆ ಅನುಕೂಲ ವಾಗುತ್ತೆಂಬುದು ನನ್ನ ಅಭಿಪ್ರಾಯ. ಈ ವಿಚಾರಕ್ಕೆ ಸೆಲೆಕ್ಟ್ ಸಮಿತಿಯವರು ಗಮನ ಕೊಡ ಬೇಕೆಂದು ಸಲಹೆ ಮಾಡುತ್ತೇನೆ.

† **Sri GANJI VEERAPPA** (Harihar).—Mr. Speaker, Sir, at the outset I must congratulate the Government for having placed this Bill before us because it is a long felt desire that all these Acts in the several parts of the State had to be consolidated into one law. Another healthy feature of this Bill is, they have not made two Acts one for the Town and other for the Cities. There is a lot of confusion with regard to this matter. One law for the entire State–which is a long-felt need is good and one Act for both Cities and Towns is very healthy feature. When I went through the bill I see enormous powers being given to the Municipal Council. I am not opposed to greater powers being given to the municipal councils. After all we are living in an age of democracy. We want our local bodies to enjoy more and more autonomy. While doing so,

(SRI GANJI VEERAPPA)

I feel I have to point out one or two aspects to which I come later. I feel the Council have been given powers which are not desirable, specially in the matter of removal of excutive officers and municipal commissioners and health officers. I think that these officers should not be subjected to the vote of the Council, as is provided here. I do not think it would be proper, because they would not function without fear or fervour. In the bill it is provided that in the case of Municipal Commissioners in City Municipalities a majority of three-fourths vote would be enough to remove him. In the case of executive officers a two-thirds majority would be enough. Sections 308, 309 and 315 provide for these things. Of course in the case of Health Officer the removal is subject to the consent of Government. I do not find such provisions being made in the existing City or Town Municipalities Act. The Select Committee should examine whether this is a desirable provision.

Sri V. S. PATIL (Belgaum-I).—The Hon.'ble Member referred to the provisions of the Acts in old Mysore area but has he referred to the provisions in the erstwhile Bombay area, where the municipal boroughs can even appoint as well as dismiss. A mere majority decision of the Council is enough.

Sri GANJI VEERAPPA.—Not that I am not unaware of the provisions in the erstwhile Bombay and Madras area. The less said the better with regard to the system that was there with regard to this aspect. Even the appointment of the executive officers and municipal commissioners and health officers are at the whims and fancies of the groups in Municipality. Whenever there is an election there may be a change in the group and if that be so the officers appointed by the previous group may be dislodged. Thus there would be change of officers with changes in groups. There is no safety to these officers in some of the municipalities. The power of removal should not be in the hands of councillors because the officers are Government servants lent by the Government. I am not sure if Mr. Patil is happy with regard to the provisions contained in the Bombay act.

Sri V. S. PATIL.-While opening the debate the Hon'ble Member said that decentralisation of powers should be encouraged and that local bodies should be given more and more powers. Is not his present argument inconsistent with that view?

Sri GANJI VEERAPPA.—After all we are interested in the proper functioning of the municipalities in the interest of the public. Officers are no doubt subject to the administrative control of the municipal council. If any officer misbehaves he can be transferred. There must be a safeguard for them and they should not be subject to the vote of the Council. If that is allowed every morning these officers will be going to the Municipal Councillors to curry their favour. They will not act fearlessly. In all municipalities there is groupism, whether it is healthy or unhealthy and the officers should not become playthings of groups. This sort of uncertainty or insecurity will impair efficiency ultimately.

With regard to the constitution of the municipalities under Chapter II, it has been stated that a population of more than 10,000 but less than 50,000 will make a place a town municipality and 50,000 and above would be city municipalities. No doubt there must be some basis to classify these municipalities, but what about places with a population less than 10,000? Nothing is said about them here; whether the same classification as major and minor municipalities as at present will continue or not is not clear.

Sri K. PUTTASWAMY (Minister for Municipal Administration).—We do not have that distinction now.

Sri GANJI VEERAPPA.—No doubt Government has power to declare town and city municipalities irrespective of the population, but my concern is about towns in old Mysore area which were municipalities. What will be their fate? Will they be treated as Municipalities or panchayat boards?

Sri G. V. GOWDA (Palya).—Does the Hon'ble Member agree with the discretion to Government to declare the city or town Municipalities?

Sri GANJI VEERAPPA.—A certain amount of laxity is essential, whether the Government exercises the powers or not. Suppose a town municipality has big schemes with neceessary funds and there is lot of scope for improvement. Government should not be helpless. The Bill provides the discretion to Government to act.

Mr. SPEAKER.—The House will now rise for half an hour recess.

The House adjourned for recess at Three of the Clock and reassembled at Thirty Minutes past Three of the Clock.

[MR. DEPUTY SPEAKER in the Chair.]

Sri GANJI VEERAPPA.—Mr. Speaker, Sir, I was just submitting that in Section 13, which deals with the constitution of Municipal councils, it has been provided here that the number of Councillors for a Municipality should depend upon the population of the town or the City as the case may be, and the maximum number fixed is 31. That is good. Suppose, in a place having a population of even more than a lakh or 1½ or 2 lakhs, if in this ratio, the number is also increased to 35, 40 or 45, it will be too unwieldy. I am not happy with the number of Members of the Bangalore City Corporation. I do not think it will be handy enough to transact any business; perhaps every transaction would be with full of confusion and controversies and like that. I think, this provision with regard to the number being not more than 31 is healthy.

Another thing I want to say is that in sub-section (3) of Section 13, reservation has been made for the Scheduled Castes and for women. It is all right for Scheduled Castes, but to make any reservations for women

(SRI GANJI VEERAPPA).

is opposed to the Constitution. Sir, I am not opposed to the representation being given to women. Let Smt. Champabai not take any objection. From the constitutional point of view, I feel, that this provision must be subject to legal scrutiny. I believe, there was a case and a decision of the Madras High Cout is there. This reservation for women, with however good intention it might have been made just to provide seats for women, it is opposed to Constitution and I think the Select Committee has to examine this and see whether such a provision can be made. It is all right for Scheduled Castes and let it be there. I hope the Select Committee will concentrate their attention with regard to this.

In Section 19, a provision has been made for the appointment of a Special Officer in cases wherein the Government finds it imprcaticable to hold a general election. It is provided here:

> "if in the opinion of the Government it is not practicable to hold a general election before the date of expiry of the term of office of the Councillors, the Government may appoint with effect from the said date a Special Officer for the municipal council.........."

I cannot understand this. If it remains as it is, it means that Government can, even before the expiry of the term of office of the Municipal Councillors, appoint a Special Officer. How can they appoint? Unless they dissolve, they cannct think of appointing a Special Officer. It is not expressed properly. It may be redrafted so that after the expiry of the term of the Municipal Councillors, as in Belgaum, then they can think of appointing a Special Officer. But, before the expiry of the term, they cannot appoint.

Sri B. R. SUNTANKAR (Belgaum).—What was the atmosphere in Belgaum?

Sri GANJI VEERAPPA.—I was only mentioning a similar case. Sri Suntankar will agree with me that such a contingency will arise only after the expiry of the term of the Municipal Council. Before the expiry of the term, no contingency will arise for the appointment of a Special Officer. Let it be made clear under what circumstances Government do want these powers.

I am happy about Sections 22 and 28 that in the case of election disputes, there is a provision for the appointment of a Tribunal and over which the High Court is the final authority. It has been a very healthy provision with regard to the election disputes, and I think that is all right. Another thing which I want to mention and which I may not agree that in Section 41 there is provision with regard to the power of the Government for the removal of a member of a Municipal Council It is mentioned that:

> "The Government, if it thinks fit on the recommendation of the municipal council, may remove any councillor elected or

> appointed under this Act, after giving him an opportunity of being heard and after such enquiry as it deems necessary, if such councillor has been guilty of misconduct in the discharge of his duties.........".

Here, it is mentioned, "on the recommendation of the municipal council". Government cannot be blind in these matters. I do not think that the Government is unaware of the fact that in several municipalities, if I am not wrong, practically in 99 out of 100, there will be factions. So, this provision, *viz.*, "on the recommendation of the municipal council and if the Governmnet thinks fit", is not a happy one. In a particular municipal council, the majority group may take it a fancy to say that an official member of the Opposition in minority will have to be removed. They may make out a case and it may lead to trouble. So, I think, it is not a happy provision and the Municipal Council should not be given this power. Again, in sub-clause (10) of Section 42, which provides for the removal of the President and Vice-President by the Council, I cannot understand one thing. If, unfortunately, a poor man like myself happens to be a President or a Vice-President, or if I am a debtor and I have not discharged my debts, it cannot be considered that I am incapable of holding that office. Specially, in these days of democracy, no distinction can be made between man and man; if he is liable for removal, I don't think this provision should be allowed to remain there.

I do not know whether this provision was there in the former Bombay Act. Any way, I think this should not be there because if by reason of the fact that a man is poor or indebted, he is subject to removal, it will be a very dangerous thing. If a poor man becomes indebted on account of self-less work and if he is disqualified from remaining as President or Vice-President, it is not a very healthy provision. The Select Committee should think of dropping this provision from the enactment.

I beileve there is provision also for the term of office being co-extensive with the term of the Council. As the Minister is aware, for one year nobody will be in a position to render any service. He will take six months to adjust himself to the environments and know about the circumstances for the next six months and the last two months go for the election of the President. At least a four-year period or the full term of the Council is necessary for any President or Vice-President to render useful work for the municipality.

There is another provision which I want to touch here. Though of course it is for Government to frame rules, in the matter of election of President or Vice-President, the present system of voting in the elections should be changed. An election of President every year costs Rs. 30 to 40 thousand. It will be a season for unscrupulous persons to make hay during that period. Government should do their very best to frame rules which will not give scope for such bargaining or trading in this election.

(SRI GANJI VEERAPPA)

A provision is made for calling upon the municipal officers or the executive officers to answer questions at the meetings of the Council just as Ministers are required to answer questions in the House. It is really good because they will be the executive officers of the municipality and they will have to be answerable in the meetings of the Council for whatever they have been doing.

Another thing I want to suggest under the Land Revenue Code, records are maintained to define the properties owned by certain individuals. In the municipalities, no such records are there. In the former Bombay State, they used to have City Survey Office, one's rights are defined in the records with regard to the site or building owned by him. Some rough thing may be mentioned in the assessment records, but it is not legally done as under the Land Records of Rights Act. It is high time that a similar provision is made in case of municipalities so that all properties in a particular municipality may be surveyed and notified and objections called for from the parties concerned and record made so that an individual in the urban area may be definite about certain rights to the properties; that provision may be introduced to avoid confusion and doubts with regard to properties and litigation.

Another thing which I want to bring to the notice of Government is, very wide powers in certain matters are given. Suppose in public streets there are any projections; if within 15 days the projection is not removed—it may be existing for hundred years—provision is made that the municipality may simply occupy and see that projection is made part of the municipal property. I agree that streets must be straight and wide. Provision is there for acquisition. Here, the power is likely to be more abused than made use of for good. All these provisions which give unlimited powers to the municipality should not be there. The Select Committee will have to examine some of these provisions.

Even with regard to levy of octroi, there are certain items like Cardamom which do not find a place. I do not want to go into details. Some rates are high and some rates are low. I suggest that the Select Committee may scrutinise the rates mentioned in the light of the respective areas and in the light of the commercial importance of these products and fix up reasonable rates of octroi. I do not want to take the time of the House. It is a very useful Bill. Every provision contained here must be very carefully examined before we make law. I only wish that the Select Committee will go through the Bill in a very detailed manner and examine the provisions carefully and make this law as early as possible.

†ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಅಧ್ಯಕ್ಷರೇ, ಈ ಸ್ಥಳೀಯ ಸಂಸ್ಥೆಗಳ ಕಾನೂನನ್ನು ಎಲ್ಲ ಪ್ರದೇಶಗಳ ಹಿತದಿಂದ ಕ್ರೋಢೀಕರಿಸಿ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಈ ಸಭೆಯ ಮುಂದೆ ಇಟ್ಟಿರುವುದು ನಿಜವಾಗಿಯೂ ಕೂಡ ಸ್ವಾಗತಿಸತಕ್ಕ ವಿಚಾರ. ಈ ಕ್ರೋಢೀಕೃತವಾದ ಬಿಲ್ಲು ಬಹಳ ಹಿಂದೆಯೇ ಬರಬೇಕಾಗಿತ್ತು. ಈಗಾಗಲೇ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಹಿಂದೆ ಇದ್ದ ಸ್ಥಳೀಯ ಸಂಸ್ಥೆಗಳ ಬಿಲ್ಲನ್ನೇ ಮತ್ತೊಮ್ಮೆ ಹೊಸ ಪುಸ್ತಕದಲ್ಲಿ ಅಚ್ಚು ಹಾಕಿರತಕ್ಕ ವಿಚಾರ ಇದರಲ್ಲಿ ನೋಡುತ್ತಾ ಇದ್ದೇನೆ. ನಾನು ನೋಡಿದ್ದರಲ್ಲಿ 9ನೇ ಕಲಮ್ಮನ್ನು ಬಿಟ್ಟರೆ ಮತ್ತೆ ಯಾವ ಹೊಸ

ಅಂಶವೂ ಕೂಡ ಇದರಲ್ಲಿ ನಮೂದಾಗಿಲ್ಲ. ಈ ಬಿಲ್ಲನ್ನು ಸ್ವಾಗತಿಸುವ ಮೊದಲು ನಾನು ಇವರಲ್ಲಿರತಕ್ಕ ನ್ಯೂನಾತಿರಿಕ್ತಗಳನ್ನು ಮತ್ತು ಅದರಿಂದಾಗತಕ್ಕ ಪರಿಣಾಮಗಳ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಬೇಕೆಂದು ಬಯಸುತ್ತೇನೆ. ಸ್ವಾಮೀ, ಈ ಸ್ಥಳೀಯ ಸಂಸ್ಥೆಗಳು ನಮ್ಮ ದೇಶದಲ್ಲಿ ಬಹಳ ಪ್ರಬಲವಾಗಿ ಇರಬೇಕು. ಸ್ಥಳೀಯ ಸಂಸ್ಥೆಗಳಿಗೆ ಸಂಪೂರ್ಣ ಅಧಿಕಾರ ಸಿಕ್ಕಬೇಕು, ಮುನಿಸಿಪಾಲಿಟಿಗಳು ತಮ್ಮ ಸ್ವಯಂ ಶಕ್ತಿಯಿಂದ ಜನಗಳಿಗೆ ಆಗಬೇಕಾದ ಅನುಕೂಲತೆಗಳನ್ನು ಮಾಡಿಕೊಡಬೇಕು ಮತ್ತು ಅವು ಪುಷ್ಟವಾಗಿ ಬೆಳೆಯಬೇಕೆಂಬ ಉದ್ದೇಶದಿಂದ ಈ ಮಸೂದೆ ಬಂದಿದೆ. ಸ್ಥಳೀಯ ಸಂಸ್ಥೆಗಳಲ್ಲಿ ಹಿಂದೆ ಇದ್ದಂಥ ಲೋಪದೋಷಗಳನ್ನು ನಿವಾರಣೆಮಾಡಿ ಒಳ್ಳೊಳ್ಳೆಯ ಕಲಂಗಳನ್ನು ಇದರಲ್ಲಿ ಅಡಕಮಾಡಬೇಕೆಂಬ ಅಂಶವನ್ನು ಸರ್ಕಾರದವರು ಯೋಚನೆ ಮಾಡಲಿಲ್ಲವೆಂದು ಕಾಣುತ್ತದೆ. ಏಕೆಂದರೆ, ಈಗ ನಿರ್ದಿಷ್ಟವಾದ ಒಂದು ಕಾರ್ಪೊರೇಷನ್ ಇದೆ. ಅವರ ಆಡಳಿತವೂ ಕೂಡ ಸ್ವಯಂಪೂರ್ಣತೆಯಿಂದ ನಡೆಯಬೇಕು. ಕಾರ್ಪೊರೇಷನ್ ಮತ್ತು ಮುನಿಸಿಪಾಲಿಟಿ ಇವೆರಡನ್ನೂ ಕ್ರೋಢೀಕರಿಸಬೇಕಾಗಿತ್ತು. ಈ ರೀತಿ ಎರಡು ಬೇರೆ ಬೇರೆ ಕಾನೂನುಗಳಿರುವುದು ಪ್ರಜಾಪ್ರಭುತ್ವದಲ್ಲಿ ಬಹಳ ಕೆಟ್ಟದ್ದು ಎಂದು ನನ್ನ ಅಭಿಪ್ರಾಯ. ಈಗ ಬೆಂಗಳೂರು ಕಾರ್ಪೊರೇಷನ್ ಇದೆ. ಅದೇ ರೀತಿಯೂ ಮುನಿಸಿಪಲ್ ಬರೋಸ್ ಇವೆ. ಇವುಗಳನ್ನೆಲ್ಲಾ ಸೇರಿಸಿ ಒಂದು ಕಾನೂನು ಮಾಡಿದ್ದರೆ ನಿಜವಾಗಿಯೂ ಆಡಳಿತ ಅಚ್ಚುಕಟ್ಟಾಗಿ ನಡೆಯುತ್ತಿತ್ತು. ಇದು ಒಳ್ಳೆಯ ಮಸೂದೆ ಆಗುತ್ತಾ ಇತ್ತು. ಪ್ರಜಾಪ್ರಭುತ್ವದಲ್ಲಿ ಜನಗಳಿಗೆ ಸ್ವಯಂ ಶಕ್ತಿಯನ್ನು ಬೆಳೆಸವುದಕ್ಕೂ, ಒಳ್ಳೆಯ ಆಡಳಿತವನ್ನು ನಡೆಸುವುದಕ್ಕೆ ಸಮರ್ಥತೆಯನ್ನು ಪಡೆದುಕೊಳ್ಳುವುದಕ್ಕೂ ಅವಕಾಶವಾಗುತ್ತಿತ್ತು. ಅಂತಹ ಮಸೂದೆಯನ್ನು ತರದೇ ಇರುವುದಕ್ಕೆ ವಿಷಾದ ಪಡಬೇಕಾಗಿದೆ. ಶ್ರೀಮಾನ್ ಗಾಂಜಿ ವೀರಪ್ಪನವರು ಈ ಕಾನೂನಿನಲ್ಲಿರತಕ್ಕ ಲೋಪದೋಷಗಳನ್ನು ಈಗಾಗಲೇ ಬಹಳ ಚೆನ್ನಾಗಿ ಹೇಳಿದ್ದಾರೆ. ಅವರು ಹೇಳಿದ ಕೆಲವು ವಿಚಾರಗಳನ್ನು ನಾನು ಸ್ವಾಗತಿಸುತ್ತೇನೆ. ಏಕೆಂದರೆ, ಈ ಪ್ರಜಾಪ್ರಭುತ್ವದಲ್ಲಿ ಮುನಿಸಿಪಾಲಿಟಿಗಳು ಬಹಳ ಸಮರ್ಥತೆಯಿಂದ ನಡೆಯಬೇಕು ಎನ್ನತಕ್ಕ ವಿಚಾರದಲ್ಲಿ ಯಾವ ಸರ್ಕಾರವೇ ಆಗಲೀ ನೇರವಾಗಿ ಆಗಲೀ ಅಥವಾ ಪರೋಕ್ಷವಾಗಿ ಆಗಲೀ ಅವುಗಳ ಕೆಲಸಕಾರ್ಯಗಳಲ್ಲಿ ಕೈಹಾಕುವುದಕ್ಕೆ ಅವಕಾಶವಿರಬಾರದು. ಆದರೆ, ಇತ್ತೀಚಿನ ನಮ್ಮ ರಾಜಕೀಯದ ವಿಷ ಗಾಳಿ ಜಾಸ್ತಿಯಾಗಿ ಮುನಿಸಿಪಾಲಿಟಿಗಳು ಉತ್ತಮ ಸ್ಥಿತಿಯಲ್ಲಿ ಕೆಲಸ ಮಾಡಲು ಅವಕಾಶವಿಲ್ಲವಲ್ಲಾ! ಎಂದು ವಿಷಾದಪಡಬೇಕಾಗಿದೆ. ಯಾವ ಮುನಿಸಿಪಾಲಿಟಿ ತೆಗೆದುಕೊಳ್ಳಿ, ಜಗಳ. ಯಾವ ಮುನಿಸಿಪಾಲಿಟಿಯಲ್ಲಿ ನೋಡಲಿ, ಈ ದಿವಸ ರಾಜಕೀಯದ ವಿಷಜ್ವಾಲೆ ಹೊರಹೊಮ್ಮುತ್ತಾ ಇದೆ. ಇವತ್ತಿನ ದಿವಸ, ಸರ್ಕಾರ ಅದಕ್ಕೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ, ಬೆಂಬಲ ಕೊಟ್ಟು ಅಲ್ಲಿ ತಮ್ಮ ಪ್ರಭಾವವನ್ನು, ಪಕ್ಷವನ್ನು ಸ್ಥಾಪನೆ ಮಾಡಬೇಕು ತಮ್ಮ ಪಕ್ಷದವರು ಪ್ರೆಸಿಡೆಂಟರಾಗಬೇಕು, ತಮ್ಮ ಪಕ್ಷಕ್ಕೆ ಬೆಂಬಲಕೊಡತಕ್ಕ ಕಮೀಷನರು, ಅಧಿಕಾರಿ ಅಲ್ಲಿರಬೇಕು, ಎನ್ನತಕ್ಕ ಒಂದು ಸೂತ್ರ ನಡೆಯುತ್ತಾ ಇರುವುದನ್ನು ನೋಡುತ್ತಾ ಇದ್ದೇವೆ. ಇದು ಆದಷ್ಟೂ ದೂರವಾಗಬೇಕು. ಎಲ್ಲಿನವರೆಗೂ ಇದು ದೂರವಾಗುವುದಿಲ್ಲವೋ ಅಲ್ಲಿನವರೆಗೂ ಈ ಮಸೂದೆಯ ಫಲ ಜನಗಳಿಗೆ ಖಂಡಿತವಾಗಿಯೂ ಸಿಕ್ಕುವುದಿಲ್ಲ.

ಡೆಪ್ಯುಟಿ ಕಮೀಷನರಿಗೆ ಕೊಟ್ಟಿರತಕ್ಕ ಅಧಿಕಾರ ಹುಚ್ಚಾಪಟ್ಟೆ ಇದೆ. ಇದರಿಂದ ಜನಗಳಿಗೆ ಬಹಳ ತೊಂದರೆಯಾಗುತ್ತದೆ. ಮುನಿಸಿಪಾಲಿಟಿಗಳು ಕೆಲಸಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಉದಾಹರಣೆಗೆ ತುಮಕೂರು ಮುನಿಸಿಪಾಲಿಟಿಯಲ್ಲಿ—ಒಬ್ಬ ಮಂತ್ರಿಗಳು—ಆ ಮುನಿಸಿಪಾಲಿಟಿಯವರು ಮೆಜಾರಿಟಿಯಿಂದ ರೆಸಲ್ಯೂಷನ್ ಪಾಸ್ ಮಾಡಿ ರೆಡ್ ಕ್ರಾಸ್ ಸಂಸ್ಥೆಗೆ ಕೊಟ್ಟಿದ್ದ ಮನೆ ನಿವೇಶನವನ್ನು ಅವರಿಗೆ ಕೊಡದಂತೆ ಮಾಡಿ ಡೆಪ್ಯುಟಿ ಕಮೀಷನರ ಮೂಲಕ ಅದನ್ನು ಕ್ಯಾನ್ಸಲ್ ಮಾಡಿಸಿದ್ದಾರೆ. ಅಧಿಕಾರ ಕೊಡಬೇಕು, ಆದರೆ ಯಾವ ರೀತಿ ಉಪಯೋಗಿಸಬೇಕೆನ್ನುವುದನ್ನು ಹೇಳುತ್ತಾ ಇದ್ದೇನೆ, ರೆಡ್ ಕ್ರಾಸ್ ಸಂಸ್ಥೆಗೆ ಕೊಟ್ಟ ನಿವೇಶನವನ್ನು ಕೊಡದಂತೆ ಮಾಡಲು—ಮುನಿಸಿಪಾಲಿಟಿಯ ರೆಸಲ್ಯೂಷನನ್ನು ಸಸ್ಪೆಂಡ್ ಮಾಡುವುದಕ್ಕೆ ಡೆಪ್ಯುಟಿ ಕಮೀಷನರಿಗೆ ಯಾವ ಕಾನೂನಿನಲ್ಲಿ ಅಧಿಕಾರ ಇದೆ? ಯಾವ ರೀತಿ ಅಧಿಕಾರ ಉಪಯೋಗಿಸುತ್ತಾ ಇದ್ದಾರೆ? ಈ ರೀತಿ ಅಧಿಕಾರ ಉಪಯೋಗಿಸುತ್ತಾ ಹೋದರೆ, ಶಕ್ತಿ ಇಲ್ಲದ ಸರ್ಕಾರ ತಮ್ಮ ನೀತಿ ನಿಯಮಗಳಿಂದ ಆ ಅನ್ಯಾಯವನ್ನು ಬೆಂಬಲಿಸುತ್ತಾ ಹೋದರೆ, ಎಲ್ಲಿಯವರೆಗೆ ಪ್ರಜಾಪ್ರಭುತ್ವ ಇರುವುದಕ್ಕೆ ಸಾಧ್ಯ? ಪ್ರಜಾಪ್ರಭುತ್ವದಲ್ಲಿ ಇಂಥಾ ಸಂಸ್ಥೆಗಳು ಬೆಳೆಯುವುದಕ್ಕೆ ಸಾಧ್ಯ ಎಂಬುದನ್ನು ತಾವು ಯೋಚನೆ ಮಾಡಬೇಕು.

ಹಾಸನ ಮುನಿಸಿಪಾಲಿಟಿಯಲ್ಲಿ 18 ಸಾವಿರ ರೂಪಾಯಿಗಳನ್ನು ಈ ದಿವಸ ದುರುಪಯೋಗ ಮಾಡಿದ್ದಾರೆ. ದುರುಪಯೋಗಮಾಡಿರತಕ್ಕ ವೈಖರಿ ಎಂದರೆ 5 ವರ್ಷದಿಂದ ಲೀಲಾಜಾಲವಾಗಿ ಈ ಜಮಾವಣೆ ನಡೆದಿದೆ. ಸರ್ಕಾರದವರು ಈ ವಿಚಾರದಲ್ಲಿ ಕಣ್ಣುಬಿಟ್ಟು ನೋಡಿದ್ದಾರೆಯೇ? ಯಾವ ಅಧಿಕಾರಿ ಇವರಲ್ಲಿ ಸೇರಿಕೊಂಡಿದಾರೆ? ಯಾವ ಅಧಿಕಾರಿಯ ಸಂಪರ್ಕ ಇದರ ಹಿಂದೆ ಇದೆ

(ಶ್ರೀ ಕೆ. ಲಕ್ಕಪ್ಪ)

ಯಾರ ಬೆಂಬಲ ಇದೆ? ಎಂಬುದನ್ನು ಯಾರೂ ಯೋಚನೆ ಮಾಡಿಲ್ಲ. ಹೀಗಾದರೆ ಸಣ್ಣ ಸಣ್ಣ ಮುನಿಸಿಪಾಲಿಟಿಗಳು ಯಾವುವೂ ಕೂಡ ಸರಿಯಾಗಿ, ಸಮರ್ಪಕವಾಗಿ ಕೆಲಸಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಜಿಲ್ಲಾಧಿಕಾರಿಗಳಿಗೆ ಕೊಟ್ಟಿರತಕ್ಕ ಅಧಿಕಾರವನ್ನು ಅವರು ಸರಿಯಾದ ರೀತಿಯಲ್ಲಿ ಪ್ರಜಾಪ್ರಭುತ್ವಕ್ಕನುಗುಣವಾದ ರೀತಿಯಲ್ಲಿ ಉಪಯೋಗಿಸಿ ಇದರ ಆಡಳಿತದಲ್ಲಿ ಕೈಹಾಕಬೇಕೇ ಹೊರತು, ರಾಜಕಾರಣಿಗಳ ಪ್ರಭಾವಕ್ಕೊಳಗಾಗಿ ಕೈಹಾಕಿದರೆ ನಿಜವಾಗಿಯೂ ಕೂಡ ಈ ಸಂಸ್ಥೆಗಳು ಬೆಳೆಯುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಜಿಲ್ಲಾಧಿಕಾರಿಗಳಿಗೆ ಸಂಪೂರ್ಣ ಅಧಿಕಾರ ಕೊಟ್ಟಿರುವುದಕ್ಕಾಗಿ ಬಹಳ ವಿಷಾದವನ್ನು ವ್ಯಕ್ತಪಡಿಸುತ್ತಾ ಇದ್ದೇನೆ.

306ನೆಯ ಕಲಂನಲ್ಲಿ Delegation of powers by Government ಎಂದು ಹೇಳಿದ್ದೀರಿ. ತಮಗೆ ಬೇಕಾದಂಥ ಬೈಲಾವನ್ನು ಮಾಡತಕ್ಕ ಒಂದು ಶಕ್ತಿಯನ್ನು ಮುನಿಸಿಪಾಲಿಟಿಗೆ ಕೊಡಬೇಕಾದ್ದು ಒಳ್ಳೆಯದು. ಆದರೆ ಬೈಲಾ ಮಾಡತಕ್ಕ ಕಾಲದಲ್ಲಿ 304ನೆಯ ಕಲಂ ಪ್ರಕಾರ ಸರ್ಕಾರ ತಡೆ ಹಿಡಿಯುವುದಕ್ಕೆ ಸಸ್ಪೆಂಡ್ ಮಾಡುವುದಕ್ಕೆ ಅಧಿಕಾರ ಕೊಟ್ಟಿರುವುದು ಬಹಳ ಶೋಚನೀಯವಾದ ವಿಷಯ. ಏಕೆಂದರೆ, ಬೈಲಾ ಮಾಡಿದಾಗ ಪ್ರತಿಸಾರಿಯೂ ಕೂಡ ನೀವು ಪದೇ ಪದೇ ಕೈಹಾಕುವುದಕ್ಕೆ ಅವಕಾಶವಾಗುತ್ತದೆ. ಇದರಿಂದ ರಾಜಕೀಯ ಜಾಸ್ತಿಯಾಗುತ್ತದೆ. ಮುನಿಸಿಪಾಲಿಟಿಗಳು ಸುಸೂತ್ರವಾಗಿ ಆಡಳಿತ ನಡೆಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ 304 ಮತ್ತು 306ನೆಯ ಕಲಂಗಳಲ್ಲಿ ಡೆಪ್ಯುಟಿ ಕಮಿಷನರು ಅಥವಾ ಕಮೀಷನರಿಗೆ ಸೂಪರ್‌ವೈಸರಿ ಪವರ್ಸ್ ಕೊಡುವುದು ಸೂಕ್ತ ಎಂದು ಸರ್ಕಾರದವರಿಗೆ ಸಲಹೆ ಮಾಡುತ್ತೇನೆ.

ಇನ್ನು ಈ 19ನೆ ಕಾಲಂನಲ್ಲಿ Term of office of the Council ವಿಚಾರ ಹೇಳಿರುವಂತೆ ಈಗ 4 ವರ್ಷಗಳಿರುತ್ತ. ಇದನ್ನೇ ಅನಿವಾರ್ಯ ಸಂದರ್ಭಗಳಲ್ಲಿ ಎಕ್ಸ್‌ಟೆಂಡ್ ಮಾಡಬಹುದೆಂದೂ—ಹಾಗೆ ಎಕ್ಸ್‌ಟೆಂಡ್ ಮಾಡತಕ್ಕ ಕಾಲಾವಧಿ 5 ವರ್ಷಗಳಿಗೆ ಜಾಸ್ತಿ ಆಗಬಾರದೆಂದೂ ಹೇಳಿ ಹೀಗೆ ಕೊಟ್ಟಿರತಕ್ಕ ಅಧಿಕಾರವನ್ನು ಬೇರೆ ಇನ್ನೊಂದು ಕಡೆಯಲ್ಲಿ ಕಿತ್ತುಕೊಂಡಿದ್ದಾರೆ.

4-00 P.M.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ, ನಾನೊಂದು ಕ್ರಿಯಾಲೋಪವನ್ನು ಸೂಚಿಸುತ್ತೇನೆ. ಈ ದಿವಸ ಈ ಸ್ಥಳೀಯ ಸಂಸ್ಥೆಗಳ ಅಧಿಕಾರ ನಡೆಸತಕ್ಕವರು ಶ್ರೀ ಕೆ. ಪುಟ್ಟಸ್ವಾಮಿಯವರು. ಅವರು ಈಗ ಸಭೆಯಲ್ಲಿಲ್ಲ. ಆದರೆ ಈಗ ಇಲ್ಲಿ ಕುಳಿತಿರುವ ಉಪಮಂತ್ರಿಗಳಿಗೆ ಯಾವ ಅಧಿಕಾರವೂ ಇಲ್ಲ. ಈ ವಿಚಾರದಲ್ಲಿ ಅಧ್ಯಕ್ಷರು ರೂಲಿಂಗ್ ಕೊಡಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಶ್ರೀ ವೈ. ರಾಮಚಂದ್ರ (ಸ್ಥಳೀಯ ಸಂಸ್ಥೆಗಳ ಉಪಸಚಿವರು).—ಎಲ್ಲರದೂ ಜಾಯಿಂಟ್ ರೆಸ್ಪಾನ್ಸಿಬಿಲಿಟಿಯಿದೆ. ನಾನು ಚರ್ಚೆಯಾಗುತ್ತಿರುವ ವಿಚಾರಗಳ ಬಗ್ಗೆ ನೋಟ್ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಕೆ. ಲಕ್ಕಪ್ಪ.—ಈ ಅಧಿಕಾರಿಗಳನ್ನು ಪ್ರಜಾಪ್ರಭುತ್ವ ಆಡಳಿತದಲ್ಲಿ ಆದಷ್ಟು ಹೆಚ್ಚಾಗಿ ಚುನಾಯಿತ ಅಧ್ಯಕ್ಷರು ಉಪಾಧ್ಯಕ್ಷರಿಗೆ ಕೊಟ್ಟು ಈ ಸಂಸ್ಥೆಗಳ ಕೆಲಸ ಚೆನ್ನಾಗಿ ನಡೆಯುವಂತೆ ಮಾಡಬೇಕಾದ್ದು ಯುಕ್ತ. ಆದರೆ ಹಾಗೆ ಮಾಡುವುದಕ್ಕೆ ಬದಲಾಗಿ ಅವರಿಗಿರತಕ್ಕ ಅಧಿಕಾರಗಳನ್ನೂ ಸಹ ಕಿತ್ತು ಸರ್ಕಾರ ತನ್ನ ನೌಕರರ ಕೈಗೆ ಈ ಅಧಿಕಾರವನ್ನು ಕೊಟ್ಟಿರತಕ್ಕದ್ದು ಖಂಡಿತ ಸರಿಯಾದ್ದಲ್ಲ. ಈ ವಿಚಾರವನ್ನು ಮತ್ತೊಮ್ಮೆ ಸರಿಯಾಗಿ ವಿಮರ್ಶೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಸೂಪರ್‌ಸೆಷನ್ ಆಫ್ ಮುನಿಸಿಪಾಲಿಟಿಗಳ ಬಗ್ಗೆ ಈಗಾಗಲೇ ಅನೇಕ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ನನ್ನ ಮಿತ್ರರಾದ ಶ್ರೀ ಬಿ. ಎಲ್. ಗೌಡರು ಆ ದಾವಣಗೆರೆ ಮುನಿಸಿಪ್ಯಾಲಿಟಿ ವಿಚಾರದಲ್ಲಿ ನಡೆಸಿರತಕ್ಕ ಕೈವಾಡದ ಬಗ್ಗೆ ಬಹಳ ಚೆನ್ನಾಗಿ ವಿವರಿಸಿ ಹೇಳಿದ್ದಾರೆ. ಈ ವಿಚಾರದಲ್ಲಿ ಸರ್ಕಾರದವರ ದೃಷ್ಟಿಯೇನಿದ್ದರೂ ಸಹ ಅವರ ಪಕ್ಷವನ್ನು ಅಧಿಕಾರಕ್ಕೆ ತರಲು ಏನೇನು ಮಾಡಬೇಕು? ಅವರ ಪಕ್ಷವನ್ನು ಬೆಳೆಸಲು ಏನು ಪ್ರಯತ್ನ ನಡೆಸಬೇಕು? ಎನ್ನತಕ್ಕ ಸಂಚುಗಳನ್ನು ಹುಡುಕುವುದರಲ್ಲೇ ಸರ್ಕಾರದವರ ಕಾಲವೆಲ್ಲ ಕಳೆದುಹೋಗುತ್ತಿದೆ. ಅವರಿಗೆ ಈ ಸಂಘ ಸಂಸ್ಥೆಗಳ ಸಂಘಟನಾಶಕ್ತಿ ಬೆಳೆಯಲಿ ಎಂಬ ಆಶೆ ಲೇಶಾಂಶವೂ ಇಲ್ಲ. ಅವರ ಈ ಹೊಲಸು ರಾಜಕೀಯ ಇನ್ನಾದರೂ ನಿಲ್ಲಿಸಲೇಬೇಕೆಂದು ನಾನೀಗ ಒತ್ತಾಯವಾಡಿ ಹೇಳುತ್ತೇನೆ.

ಇನ್ನು 4 ನೆಯ ಕಾಲಂ ಪ್ರಕಾರ—liability to remove from Office ಎಂತ ಹೇಳಿದ್ದಾರೆ. ಈ ದಿವಸ ಈ ಸರ್ಕಾರ ಈ ಸ್ವಯಂಪ್ರೇರಿತ ಸಂಸ್ಥೆಗಳ ಮೇಲೆ ಒಂದು ಜಂಬೂಸವಾರಿ ಮಾಡಲು ಹೊರಟಂತಿದೆ. ಈ ಆಡಳಿತ ಪಕ್ಷ ಸೇರದಿರುವ ಪಕ್ಷ ಈ ದಿವಸ ಎಲ್ಲಿ ಈ ಸಂಸ್ಥೆಗಳ ಆಡಳಿತ ನಡೆಸುತ್ತಿವೆಯೋ ಅಂಥ ಕಡೆಗಳಿಗೆ ಈ ಸರ್ಕಾರದವರು ನುಗ್ಗಿ ಅಲ್ಲಿಗೆ ಸರ್‌ಪ್ರೈಸ್ ವಿಜಿಟ್

ಇತ್ಯಾದಿಗಳನ್ನು ಮಾಡಿ ಅಂಥ ಕಡೆಗಳಲ್ಲಿ ನಾನಾ ನಮೂನೆ ಕೀಟ್ಲೆಗಳನ್ನು ಮಾಡಲು ಈ ಒಂದು ಅವಕಾಶವನ್ನು ಇಲ್ಲಿ ಕಲ್ಪಿಸಿಕೊಂಡಿದ್ದಾರೆ. ಇಂಥ ಕಾಲಂಗಳಿದ್ದರೆ ಈ ಪ್ರಜಾ ಸಂಸ್ಥೆಗಳು ಇನ್ನೇನು ಬೆಳೆದಾವು! ಇಂಥ ಕ್ಲಾಜುಗಳನ್ನು ಹಾಕಬಹುದೇ ಎಂಬುದನ್ನು ಸೆಲೆಕ್ಟ್ ಸಮಿತಿಯವರು ತೀವ್ರವಾಗಿ ಪರಿಶೀಲನೆ ಮಾಡಬೇಕಾಗಿದೆ ಎಂತ ಹೇಳುತ್ತೇನೆ. ಇಂಥ ವಿಚಾರಗಳಲ್ಲಿ ಅಧಿಕಾರ ನೇರವಾಗಿ ಸರ್ಕಾರಕ್ಕಿರಬಾರದು. ಸೆಕ್ಷನ್ 41ರಲ್ಲಿ The Government if it thinks fit on the recommendation of the Municipal Council, may remove any Councillor ...etc ಹೀಗೆಂದು ಹೇಳಿದ್ದಾರೆ. ಈ ದಿವಸ ಪ್ರಜಾಪ್ರಭುತ್ವದ ಆಡಳಿತದ ಚೌಕಟ್ಟಿನಲ್ಲಿ ಚುನಾವಣೆಯಲ್ಲಿ ಗೆದ್ದು ಬಂದಿರತಕ್ಕ ಒಬ್ಬ ಮುನಿಸಿಪಲ್ ಸಂಸ್ಥೆಯ ಸದಸ್ಯನನ್ನು ಆ ಸಂಸ್ಥೆಯ ಶಿಫಾರ್ಸಿನ ಮೇಲೆ ಸರ್ಕಾರ ಆ ಸದಸ್ಯನನ್ನು ಸದಸ್ಯತ್ವದಿಂದ ಕಿತ್ತುಹಾಕಬಹುದು ಎಂತ ಹೇಳಿರತಕ್ಕದ್ದು ಬಹಳ ಕೆಟ್ಟದು. ಹೀಗೆಲ್ಲ ಅವರ ಹಕ್ಕನ್ನು ಮೊಟಕುಮಾಡುವುದು ಸರಿಯಾದ್ದಲ್ಲ. ಈ ವಿಚಾರವನ್ನೇ ಜಾಯಿಂಟ್ ಸೆಲೆಕ್ಟ್ ಸಮಿತಿಯವರು ಬಹಳ ಕೂಲಂಕಷವಾಗಿ ಪರಿಶೀಲನೆಮಾಡಿ ನೋಡಬೇಕಾಗಿರುತ್ತೆಂದು ಸಲಹೆ ಮಾಡುತ್ತೇನೆ.

Mr. DEPUTY SPEAKER.—If he is guilty of misconduct, reasons will be given.

ಶ್ರೀ ಕೆ. ಲಕಪ್ಪ.—ಆ ರೀತಿ ಯಾವ ಒಂದು ಕಾರಣವನ್ನೂ ಕೊಡದೆ ಅಧಿಕಾರ ಕೈಲಿರತಕ್ಕವರು ಏನು ಬೇಕಾದರೂ ಮಾಡಬಹುದು. ಅಂಥ ಶಕ್ತಿ ಆಡಳಿತವರ್ಗದವರ ಕೈಲಿರುತ್ತೆ. ಈ ಕ್ಲಾಜನ್ನು ಇಲ್ಲಿ ಸೇರಿಸಿರತಕ್ಕದ್ದು ತುಂಬಾ ಅನುಮಾನಕ್ಕೂ ಶಂಕೆಗೂ ಆಸ್ಪದವಾಗಿದೆ. ಈ ರೀತಿ ಈ ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ಸರ್ಕಾರದವರು ನೇರವಾಗಿ ಕೈಹಾಕತಕ್ಕದ್ದನ್ನು ಇನ್ನಾದರೂ ತಪ್ಪಿಸಬೇಕೆಂದು ಹೇಳುತ್ತೇನೆ.

ಇನ್ನು ಈ ಮುನಿಸಿಪಾಲಿಟಿಗಳ ವಿಚಾರ ಯಾವಕಡೆಗೆ ತಿರುಗಿ ನೋಡಿದರೂ ಬಹಳ ಕ್ಲಿಷ್ಟಕರವಾದ ಸಂಗತಿಗಳೇ ಇರುತ್ತವೆ. ಮೇಲಾಗಿ ಅಲ್ಲಿಗೆ ಚುನಾವಣೆಗಳಲ್ಲಿ ಆರಿಸಿ ಬರತಕ್ಕವರು ಕಾನೂನಿನ ಬಗ್ಗೆ ಹೆಚ್ಚಿನ ಪರಿಶ್ರಮವುಳ್ಳವರಾಗಿರುವುದಿಲ್ಲ. ಆದ್ದರಿಂದ ಈ ಮುನಿಸಿಪಾಲಿಟಿಗಳಿಗೆ ಒಬ್ಬೊಬ್ಬ ಲೀಗಲ್ ಅಡ್ವೈಸರುಗಳ ನೇಮಕವು ಅತ್ಯವಶ್ಯಕವಾಗಿದೆಯೆಂದು ಹೇಳುತ್ತೇನೆ. ಇಲ್ಲವಾದರೆ ಇವುಗಳ ಆಡಳಿತ ಬಹಳ ಕಷ್ಟಕ್ಕೆ ಬರುತ್ತದೆಯೆಂದು ಹೇಳುತ್ತೇನೆ. ಈ ಲೀಗಲ್ ಅಡ್ವೈಜರುಗಳನ್ನು ನೇಮಿಸತಕ್ಕದ್ದು ಅತ್ಯವಶ್ಯಕವೆಂದು ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಸೆಲೆಕ್ಟ್ ಸಮಿತಿಯವರು ಈ ವಿಚಾರಕ್ಕೆ ನಿಗಾ ಕೊಡುತ್ತಾರೆಂದು ನಂಬಿದ್ದೇನೆ.

ಇನ್ನು ಈ ಮುನಿಸಿಪ್ಯಾಲಿಟಿಗಳ ಪ್ರೊಸೀಡಿಂಗ್ಸ್ ಇಂಗ್ಲೀಷಿನಲ್ಲಿ, ಇಲ್ಲವೇ ಕನ್ನಡದಲ್ಲಿರಬೇಕೆಂಬುದಾಗಿ ಹೇಳಿದ್ದಾರೆ. ಈ ದಿವಸ ಕರ್ಣಾಟಕ ರಾಜ್ಯ ಸ್ಥಾಪನೆಯಾಗಿ ಕನ್ನಡವನ್ನು ಉದ್ಧಾರಮಾಡಬೇಕೆಂದು ಹೇಳುತ್ತಿರುವ ಸರ್ಕಾರ ಈ ದಿವಸ ಈ ಆಡಳಿತ ನಡೆಸತಕ್ಕವರು, ಈ ಅಧಿಕಾರ ವರ್ಗದವರು ಈ ಆಡಳಿತದ ವರದಿಗಳನ್ನು ಕನ್ನಡದಲ್ಲೇ ನಡೆಸಬೇಕೆಂದು ಒತ್ತಾಯ ಮಾಡಬೇಕು. ಇಂಗ್ಲೀಷನ್ನೇ ತ್ಯಾಜ್ಯ ಮಾಡಬೇಕೆಂದು ಹೇಳುತ್ತೇನೆ. ಇನ್ನು ಹೆಂಗಸರಿಗೆ ಸ್ಥಾನಮಾನಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಇದು ಒಳ್ಳೆಯ ವಿಷಯವೇ ಹೌದು, ಬಹಳ ಸಂತೋಷ. ಆದರೆ, ಈಗ ಈ ಬಿಲ್ಲಿನಲ್ಲಿ ಇಂತಿಷ್ಟೇ ಸ್ಥಾನಗಳನ್ನು ರಿಜರ್ವ್ ಮಾಡಬೇಕೆಂತ ಹೇಳಿರುವುದು ರಾಜ್ಯಾಂಗಕ್ಕೆ ವಿರೋಧವಾಗಿದೆ. ಆದ್ದರಿಂದ ಇಂಥ ವಿರೋಧವಾದ ವಿಚಾರವನ್ನು ಈ ಬಿಲ್ಲಿನಲ್ಲಿ ನಮೂದು ಮಾಡಬಾರದಾಗಿತ್ತು. ಹೆಂಗಸರ ವಿಚಾರದಲ್ಲಿ ಎಲ್ಲರಿಗೂ ಅನುಕಂಪವಿದೆ. ಅಂದಮಾತ್ರಕ್ಕೆ ಇಂಥ ಅಭಾಸವಾದ ಪ್ರಕರಣಗಳನ್ನು ಸೇರಿಸಿ-ನಾಳೆ ಕೋರ್ಟಿಗೆ ಹೋದಾಗ ಅಲ್ಲಿ ಅಭಾಸವಾಗಬಾರದು. ಆದ್ದರಿಂದ ಈ ವಿಚಾರದಲ್ಲಿ ಸೂಕ್ತ ತಿದ್ದುಪಡಿ ಮಾಡಬೇಕಾದ್ದು ಅತ್ಯಗತ್ಯ. ಕಾನೂನಿಗೆ ಪ್ರತಿಬಂಧಕ ಉಂಟುಮಾಡತಕ್ಕಂಥ ವಿಚಾರಗಳನ್ನು ಇವರಲ್ಲಿ ಸೇರಿಸಬಾರದು.

ಇನ್ನು 9ನೇ ಕಾಲಂನಲ್ಲಿ ಒಂದು ಸಲಹೆ ಮಾಡಿದ್ದಾರೆ. ನಿಜವಾಗಿಯೂ ಇದು ಸ್ವಾಗತಾರ್ಹವಾದ ವಿಚಾರ. ಈ ಇಂಪ್ರೂವ್‌ಮೆಂಟ್ ಬೋರ್ಡಿಗೆ ಛೇರ್ಮನ್ನರನ್ನು ಮತ್ತು ನಾಮಕರಣ ಸದಸ್ಯರನ್ನು ನೇಮಕ ಮಾಡಬೇಕಾಗಿರುತ್ತೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ನನ್ನ ಒಂದು ಸಲಹೆಯೇನೆಂದರೆ—ಈ ಬೋರ್ಡು ಸರಿಯಾಗಿ ನಿರ್ವಂಚನೆಯಿಂದ, ಧಕ್ಷತೆಯಿಂದ ಕೆಲಸಮಾಡುವಂತಾಗಬೇಕು. ಯಾವ ಯಾವ ಮುನಿಸಿಪ್ಯಾಲಿಟಿಯಲ್ಲಿ ಏನೇನು ಅನ್ಯಾಯಗಳು ನಡೆದಿರುತ್ತವೆಂಬುದನ್ನು ವಿಮರ್ಶೆ ಮಾಡಬೇಕು. ಆದರೆ ಈ ಬೋರ್ಡಿನಲ್ಲಿರತಕ್ಕ ಜನರ್‍ಯಾರು ? ಅವರ ಅರ್ಹತೆಗಳೇನೆಂಬುದನ್ನು ಇಲ್ಲಿ ತಿಳಿಸಿಲ್ಲ. ಅನೇಕ ಮುನಿಸಿಪ್ಯಾಲಿಟಿಗಳ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕಾಗಿರುತ್ತೆ. ಅವುಗಳು ತಮ್ಮ ಸ್ವಶಕ್ತಿ ಮೇಲೆ ನಿಂತು ಕೆಲಸ ಮಾಡುವಂತೆ ಮಾಡಲು ಒಂದು ತಜ್ಞ ಜನರ ಸಮಿತಿಯನ್ನು ನೇಮಿಸತಕ್ಕದ್ದು ಅಗತ್ಯ. ಅಂದರೆ ಈ ಸಮಿತಿಯಲ್ಲಿ ಲೇಜಿಸ್ಲೇಟಿವ್ ಅಸೆಂಬ್ಲಿ ಮತ್ತು ಲೆಜಿಸ್ಲೇಟೀವ್ ಕೌನ್ಸಿಲ್‌ನ ಸದಸ್ಯರುಗಳು ಇರುವಂತೆ ಅವಕಾಶ ಮಾಡಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ತಜ್ಞರ ಸಮಿತಿ ಎಂದು ಹೇಳಿದಿರಿ ?

ಶ್ರೀ ಕೆ. ಲಕ್ಕಪ್ಪ.—31ನೆಯ ಕಲಂನಲ್ಲಿ leave of absence to Municipal Commissioner ವಿಚಾರ ಹೇಳಿದ್ದಾರೆ. ಮುನಿಸಿಪಲ್ ಕಮಿಷನರ್ ಇಲ್ಲದೆ ಹೋದಾಗ, ಅವರು ರಜ ತೆಗೆದುಕೊಂಡಾಗ, ಕೆಲಸ ಮಾಡಲಿಕ್ಕೆ ಆಗದೆ ಹೋದಾಗ Government may appoint any suitable person ಎಂದು ಹಾಕಿದ್ದಾರೆ. ಈ ವಿಧಿ ಪ್ರಕಾರ ನೀವು ಯಾರನ್ನು ಬೇಕಾದರೂ ಹಾಕಬಹುದು, ಇದರಲ್ಲಿ ಯಾರನ್ನು ಬೇಕಾದರೂ ಸೇರಿಸಬಹುದು. ಅದಕ್ಕೋಸ್ಕರ ಕಮಿಷನರ್ ಇಲ್ಲದೆ ಇದ್ದರೆ ಇನ್ನು ಯಾರನ್ನಾದರೂ ಸೀನಿಯರ್ ಆಫೀಸರನ್ನು ನೇಮಕ ಮಾಡುವುದು ಒಳ್ಳೆಯದು. ಸರ್ಕಾರ ನೇರವಾಗಿ ಬೇರೊಬ್ಬರನ್ನು ನೇಮಕ ಮಾಡುವ ಗೋಜಿಗೆ ಹೋಗಬಾರದು. ರಜ ತೆಗೆದುಕೊಳ್ಳುವ ಮನುಷ್ಯ ಬಹಳ ದಿನ ರಜ ತೆಗೆದುಕೊಳ್ಳಲಾರ. ಆದುದರಿಂದ ಬೇರೆಯವರನ್ನು ಹೊಸದಾಗಿ ನೇಮಕ ಮಾಡುವುದಕ್ಕೆ ಬದಲಾಗಿ ಆ ಕೆಲಸವನ್ನು ಅಲ್ಲಿರುವ ಅಧಿಕಾರಿಗಳಿಗೇ ವಹಿಸುವುದು ಒಳ್ಳೆಯದೆಂದು ನಾನು ಸಲಹೆ ಮಾಡುತ್ತೇನೆ.

ಮುನಿಸಿಪಾಲಿಟಿಗಳಲ್ಲಿ ರಾಜಕೀಯ ಸಂಕೋಲೆಗೆ ಸಿಕ್ಕಿ ಹಾಳಾಗದೆ ಅವು ಪ್ರಬಲವಾಗಿ, ಸ್ವತಂತ್ರವಾಗಿ ನಡೆಯುವಂಥ ಸಂಸ್ಥೆಗಳಾಗುವಂತೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಅನೇಕ ಮುನಿಸಿಪಾಲಿಟಿಗಳಲ್ಲಿ ಈಗ ರಾಜಕೀಯ ಬಹಳವಾಗಿ ನಡೆಯುತ್ತಿದೆ. ರಾಜಕೀಯವು ತಲೆ ಹಾಕಿರುವುದರಿಂದ ಈ ಸಂಸ್ಥೆಗಳು ಆರ್ಥಿಕವಾಗಿ, ಸಾಮಾಜಿಕವಾಗಿ ಯಾವುದರಲ್ಲಿಯೂ ಮುಂದುವರೆಯುವುದಕ್ಕೆ ಸಾಧ್ಯವಾಗಿಲ್ಲ. ಮಂತ್ರಿಗಳು ನಿಜವಾಗಿಯೂ ಒಳ್ಳೆಯ ಕೆಲಸಕ್ಕೆ ಕೈ ಹಾಕಿದ್ದಾರೆ. ಇದು ಶಾಶ್ವತವಾಗಬೇಕಾಗಿದ್ದರೆ ಪಾರ್ಟಿ, ಪಕ್ಷಗಳ ವಿಚಾರವನ್ನು ಬಿಡಬೇಕು. ಕೆಲವು ಕಡೆ ಮಂತ್ರಿಗಳು enquiry ಮಾಡಬಹುದು ಎಂದು ಹೇಳುವಾಗ ಅದರಲ್ಲಿ ಒಂದೇ ರೀತಿ ಇರಬೇಕು. ಯಾವುದಾದರೂ ಮುನಿಸಿಪಾಲಿಟಿಯ ಕೇಸ್ ಬಂದಾಗ ಅದರಲ್ಲಿ ತಪ್ಪುಗಳಿವೆಯೇ, ಲೋಪದೋಷಗಳಿವೆಯೇ ಎಂದು ವಿಚಾರ ಮಾಡಬೇಕು. ತುಮಕೂರು ಮುನಿಸಿಪಾಲಿಟಿಯ ವಿಷಯ ಆಗಲೇ ಹೇಳಿದ್ದೇನೆ. ಈ ಸಂದರ್ಭದಲ್ಲಿ ಹೇಳುವುದು ಕೂಡ ಸೂಕ್ತವೆಂದು ಹೇಳುತ್ತಿದ್ದೇನೆ. ಒಬ್ಬ ಡೆಪ್ಯುಟಿ ಕಮಿಷನರು ಒಂದು ಮಸೀದಿಯನ್ನು ಜನಗಳಿಗೆ ಕೊಡಬೇಕೆಂದು ಮಾಡುತ್ತಿದ್ದಾರೆ. ನೇರವಾಗಿ ಮುನಿಸಿಪಾಲಿಟಿಯ ವಿಚಾರದಲ್ಲಿ ಡೆಪ್ಯುಟಿ ಕಮಿಷನರು ಕೈ ಹಾಕುತ್ತಿದ್ದಾರೆ. ಮುನಿಸಿಪಲ್ ಕೌನ್ಸಿಲ್‌ನವರು ಮಾಡಿರತಕ್ಕ ನಿರ್ಣಯವನ್ನು ಇವೊತ್ತಿನ ದಿವಸ ಅವರು ತಡೆ ಮಾಡಿದ್ದಾರೆ. ಯಾವ ಕಾರಣವೂ ಇಲ್ಲದೆ ತಡೆ ಮಾಡಿದ್ದಾರೆ. ಆದುದರಿಂದ ಸಾಧ್ಯವಾದ ಮಟ್ಟಿಗೂ ಮುನಿಸಿಪಾಲಿಟಿಗಳು ರಾಜಕೀಯದಿಂದ ದೂರವಿರುವ ಹಾಗೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

14ನೆಯ ಕಲಂನಲ್ಲಿ ನಾಮಿನೇಷನ್ ವಿಚಾರವಿದೆ. ನಾಮಿನೇಷನ್ ಎನ್ನುವುದು ಸರ್ಕಾರದಿಂದ ದೈವದತ್ತವಾದ ಫಲವಾಗಿದೆ. ನಾಮಿನೇಷನ್ ಇಲ್ಲದೆ ಹೋದರೆ ಈ ಸರ್ಕಾರ ಇರುವುದಕ್ಕೂ ಸಾಧ್ಯವಿಲ್ಲ, ಮಂತ್ರಿಮಂಡಲ ಉಳಿಯುವುದಕ್ಕೂ ಸಾಧ್ಯವಿಲ್ಲ. ಇದುವರೆಗೂ ನಾಮಿನೇಷನ್ನೇ ನಿಮ್ಮನ್ನು ಬದುಕಿಸುತ್ತಿರುವುದು. ನೀವು ಅಧಿಕಾರದಲ್ಲಿ ಇನ್ನೂ ಉಳಿದುಕೊಂಡಿದ್ದೀರಿ ಎಂದರೆ ನಾಮಿನೇಷನ್ನಿನಿಂದ. ಪ್ರಜಾಪ್ರಭುತ್ವದಲ್ಲಿ ನಾಮಕರಣ ಮಾಡತಕ್ಕ ಪದ್ಧತಿ ಹೋಗಬೇಕು. ಆದಷ್ಟು ಬೇಗ ಈ ಪದ್ಧತಿ ಹೋಗದಿದ್ದರೆ ರಾಜಕೀಯ ತಿಳಿಯಾಗುವುದಿಲ್ಲ, ಪ್ರಜಾಪ್ರಭುತ್ವ ಸರಿಯಾಗಿ ಬೆಳೆಯುವುದಕ್ಕೆ ಅವಕಾಶವಾಗುವುದಿಲ್ಲ. ಅದಕ್ಕೋಸ್ಕರ ಯಾವ ಯಾವದರಲ್ಲಿ ನಾಮಕರಣ ಮಾಡುತ್ತಿದ್ದೀರೋ ಆದಷ್ಟು ಬೇಗ ಕಡಮೆ ಮಾಡಬೇಕು. ಹಾಗೆ ಮಾಡದೆ ಹೋದರೆ ಪ್ರಜಾಪ್ರಭುತ್ವಕ್ಕೆ ಕೊಡಲಿ ಪೆಟ್ಟು ಬೀಳುತ್ತದೆ ಎಂದು ತಿಳಿಸಿ, ಅಧ್ಯಕ್ಷರು ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಜೆ. ದೇವಯ್ಯ (ಮಂಡ್ಯ).—ಸ್ವಾಮೀ, ನಮ್ಮ ಮಾನ್ಯಮಂತ್ರಿಗಳು ತಂದಿರುವ ಮುನಿಸಿಪಾಲಿಟಿಗಳಿಗೆ ಸಂಬಂಧಪಟ್ಟ ಬಿಲ್ಲನ್ನು ಸ್ವಾಗತಿಸುತ್ತ ಕೆಲವಾರು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ನಿಂತಿದ್ದೇನೆ. ಇಂಥ ಬಿಲ್ಲುಗಳನ್ನು ತರುವಾಗ, ಕನ್ನಡದಲ್ಲಿಯೂ ತಯಾರು ಮಾಡಿ ನಮಗೆಲ್ಲ ತಿಳಿಯುವ ಹಾಗೆ ಮಾಡಬೇಕೆಂದು ಸಭಾಪತಿಯವರ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಇಲ್ಲಿ ಯಾವ ಮಸೂದಾ ಕಾನೂನುಗಳು ಬಂದರೂ ಕೂಡ ಇಂಗ್ಲಿಷಿನಲ್ಲಿ ಮಾತ್ರ ಅಚ್ಚು ಹಾಕಿಸಿಕೊಡುತ್ತಾರೆ. ಇದರ ಜೊತೆಗೆ ಕನ್ನಡದಲ್ಲಿಯೂ ಅಚ್ಚು ಹಾಕಿಸಿಕೊಟ್ಟರೆ ಕನ್ನಡ ಬರುವವರು ಕನ್ನಡ ಪ್ರತಿಗಳನ್ನೂ ಇಂಗ್ಲಿಷ್ ಬರುವವರು ಇಂಗ್ಲಿಷ್ ಪ್ರತಿಗಳನ್ನೂ ತೆಗೆದುಕೊಂಡು ಓದಿಕೊಳ್ಳುತ್ತಾರೆ. ಶ್ರೀಮಾನ್ ಗಾಂಜಿ ವೀರಪ್ಪನವರು ಇಂಗ್ಲಿಷಿನಲ್ಲಿ ಮಾತನಾಡಿದರು. ಮಾನ್ಯ ಸದಸ್ಯರಾದರೂ ಕನ್ನಡದಲ್ಲಿ ಮಾತನಾಡಿದ್ದರೆ ನಮಗೆ ಅರ್ಥವಾಗುತ್ತಿತ್ತು. ಇನ್ನು ಮುಂದಾದರೂ ಕನ್ನಡ ಪ್ರತಿಗಳನ್ನು ಒದಗಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಮುನಿಸಿಪಾಲಿಟಿಯೇ ಬಹಳ ಪ್ರಾಮುಖ್ಯವಾದ ತಳಹದಿ. ದೇಶದಲ್ಲಿ ಸ್ವಾತಂತ್ರ್ಯ ಬರಬೇಕಾದರೆ ಅದರ ಹಕ್ಕನ್ನು ಮೊದಲು ಮುನಿಸಿಪಾಲಿಟಿಗಳಿಗೆ ಸರ್ಕಾರದವರು ಕೊಟ್ಟರು. ಅದರಲ್ಲಿರುವ

ಜನಗಳ ಹಕ್ಕು ಬಾಧ್ಯತೆಗಳ ವಿಚಾರದಲ್ಲಿ ಆ ತಳಹದಿಯ ರೂಪದಲ್ಲಿ ಮುನಿಸಿಪಾಲಿಟಿ ನಡೆಸಿಕೊಂಡು ಹೋಗುವುದಕ್ಕೆ ಅವಕಾಶವಾಯಿತು. ತೆರಿಗೆ, ಮನೆ ಕಂಧಾಯ ಸುಂಕ ಇವುಗಳನ್ನೆಲ್ಲ ಹಾಕಿ ಅನೇಕ ಮುನಿಸಿಪಾಲಿಟಿಗಳು ಅಭಿವೃದ್ಧಿಸ್ಥಿತಿಗೆ ಬಂದವು. ನಾನು ಮಂಡ್ಯ ಮುನಿಸಿಪಾಲಿಟಿಯ ಉದಾಹರಣೆ ಹೇಳಬೇಕಾದರೆ ಅದನ್ನು ಯಾವ ರೀತಿ ಅಭಿವೃದ್ಧಿ ಮಾಡಬೇಕೆಂಬುದನ್ನು ಯೋಚಿಸಿ ಅಲ್ಲಿ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಿ ಅಭಿವೃದ್ಧಿ ಪಡಿಸಿದರು. ಅದು ಬಹಳ ಚಿಕ್ಕದಾಗಿದ್ದು ಈಚೆಗೆ ದೊಡ್ಡದಾಗಿ ಬೆಳೆಯುತ್ತ ಕೈಗಾರಿಕೆ ಅಭಿವೃದ್ಧಿಯಾಗುತ್ತ ಬಂತು. ಜನ ಸಂಖ್ಯೆಯೂ ಹೆಚ್ಚುತ್ತ ಬಂತು. ಹಾಗೆಯೇ ಅನೇಕ ಡಿಸ್ಟ್ರಿಕ್ಟ್‌ಗಳಲ್ಲಿ ಜನ ಸಂಖ್ಯೆ ಜಾಸ್ತಿಯಾಗಿ ಉತ್ತಮ ಬಡಾವಣೆಗಳಾಗಿ ಅಭಿವೃದ್ಧಿಯಾಗುತ್ತಿವೆ. ಪಟ್ಟಣಗಳು ಅಭಿವೃದ್ಧಿಯಾಗಬೇಕಾದರೆ ಸರ್ಕಾರದವರೂ ಸ್ವಲ್ಪ ಸಹಾಯ ಮಾಡಬೇಕು. ಜಮೀನು ಅಕ್ವೈರ್ ಮಾಡಿಕೊಳ್ಳುವಾಗ ಜಾಗ್ರತೆಯಾಗಿ ಅಕ್ವೈರ್ ಮಾಡಿಕೊಂಡು ಜನಗಳಿಗೆ ಅದನ್ನು ಸೈಟುಗಳಾಗಿ ಮಾಡಿ ಹಂಚಬೇಕು. ಅದರಿಂದ ಜನತೆಗೆ ಹೆಚ್ಚು ಪ್ರಯೋಜನವಾಗುತ್ತದೆ. ಹೊರದೇಶಗಳಿಂದ ಇಲ್ಲಿಗೆ ಜನ ಬರುತ್ತಿದ್ದಾರೆ. ಹಳ್ಳಿಯವರೂ ಪಟ್ಟಣಕ್ಕೆ ಬಂದು ಸೇರುತ್ತಿದ್ದಾರೆ. ಅವರು ಇರುವುದಕ್ಕೆ ಸ್ಥಳವಿಲ್ಲದೆ ಗುಡಿಸಲುಗಳನ್ನು ಹಾಕಿಕೊಂಡಿರುತ್ತಾರೆ. ಮಾನ್ಯ ಮಂತ್ರಿಗಳು ಮಂಡ್ಯ ಜಿಲ್ಲೆಗೆ ಸೇರಿದವರು, ಮೈಸೂರು ನಗರ ಸಭೆಯ ಅಧ್ಯಕ್ಷರಾಗಿದ್ದವರು. ಅವರಿಗೆ ಚೆನ್ನಾಗಿ ಅನುಭವವಿದೆ. ಜನರೆಲ್ಲ ಆರೋಗ್ಯದಿಂದಿರಬೇಕು ಎಂದು ಸರ್ಕಾರದವರೂ ಹೇಳುತ್ತಾರೆ. ಆದರೆ ಅದಕ್ಕೆ ಹೇಗಿರಬೇಕು ? ಇದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಒಬ್ಬರು ಶ್ರೀಮಂತರು 40 ಎಕರೆ ಜಮೀನನ್ನು ಖರೀದಿಗೆ ತೆಗೆದುಕೊಂಡರು. ಅದನ್ನು ಸೈಟುಗಳಾಗಿ ವಿಂಗಡಿಸಿ ಲಾಭ ಸಂಪಾದನೆ ಮಾಡುವುದಕ್ಕೆ ಷುರು ಮಾಡಿದರು. ಅದಕ್ಕಿಂತ ಹಿಂದೆಯೇ ಮುನಿಸಿಪಾಲಿಟಿಯವರು ಆ ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕೆಂದು ಸುಮಾರು 60-65 ಸಾವಿರ ರೂಪಾಯಿ ಸಾಲ ಮಾಡಿ ಎರಡು ಮೂರು ವರ್ಷವಾಯಿತು. ಆದರೆ ಆ ಜಮೀನನ್ನು ಅಕ್ವೈರ್ ಮಾಡಿಕೊಂಡು ಮುನಿಸಿಪಾಲಿಟಿಯ ವಶಕ್ಕೆ ಕೊಡುವುದಕ್ಕೆ ಇನ್ನೂ ಅವಕಾಶ ಸಿಕ್ಕಿಲ್ಲ.

ಅನೇಕ ಕಡೆ ಮುನಸಿಪಾಲಿಟಿಯವರು ಅಕ್ವೈರ್ ಮಾಡಲು ಕೇಳಿದ್ದಾರೆ. ಆದರೆ, ಅದಕ್ಕೆ ಅವಕಾಶ ದೊರೆತಿಲ್ಲ. ಸೈಟಿಗಾಗಿ ಶ್ರೀಮಾನ್ ಹನುಮಂತಪ್ಪನವರು 10 ರೂಪಾಯಿ ಡಿಪಾಜಿಟ್‌ಕಟ್ಟಿ ಎರಡುಮೂರು ವರ್ಷವಾಯಿತು. ಸರಕಾರಿ ಜಮೀನು ಆದರೂ ಕೂಡ ಅವರ ಕೈಸೇರಿಲ್ಲ. ಮಾನ್ಯ ಮಂತ್ರಿಗಳು ನಮ್ಮ ಊರಿಗೆ ಬಂದಾಗ್ಗ್ಯೆ ಮನವಿ ಮಾಡಿಕೊಂಡು ಹತ್ತು ವರ್ಷವಾಯಿತು. ಹತ್ತಿರದಲ್ಲಿಯೇ ಸಕ್ಕರೆ ಕಾರ್ಖಾನೆಯಿದೆ. ವ್ಯಾಪಾರಸ್ಥರು ಕೊಡುವ ಸುಂಕ ಮುನಸಿಪಾಲಿಟಿಗೆ ಹೋಗುತ್ತದೆ. ಒಂದು ಉದಾಹರಣೆಗಾಗಿ ಇದನ್ನು ಹೇಳುತ್ತಿದ್ದೇನೆ. ಮನೆ ಕಟ್ಟಿಕೊಳ್ಳಲು ಒಂದು ಸೈಟೂ ಮಂಡ್ಯ ಪಟ್ಟಣದಲ್ಲಿ ದೊರೆಯುತ್ತಿಲ್ಲ. ಕೇಳುವವರು ಹೇಳುವವರು ಯಾರೂ ಇಲ್ಲವೇನೋ ಎಂಬಂತಾಗಿದೆ. ಆದುದರಿಂದ ಜಮೀನು ಅಕ್ವೈರ್ ಮಾಡಿಕೊಳ್ಳಲು ಸರಕಾರ ಯೋಚನೆ ಮಾಡಬೇಕು. ಚೆನ್ನಾಗಿ ಕೆಲಸ ಮಾಡತಕ್ಕಂಥ ಮುನಸಿಪಾಲಿಟಿಯಲ್ಲಿ ನಿಮ್ಮ ಪಕ್ಷದ ಬಹುಮತವಿಲ್ಲದಿದ್ದರೆ ಅಧಿಕಾರದಲ್ಲಿದ್ದ ಪಕ್ಷದ ಸಂಖ್ಯೆ ಕಡಮೆ ಮಾಡಲು ಪ್ರಯತ್ನ ನಡೆಯುತ್ತಿದೆ. ಇದಕ್ಕೆ ಏನು ಅರ್ಥ ಸ್ವಾಮಿ ? ಕೆಲಸ ಕಾರ್ಯಗಳಲ್ಲಿ ಅನನುಕೂಲಮಾಡಿ ತೊಂದರೆ ಕೊಡುತ್ತಿದ್ದಾರೆ ಎಂಬುದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ಈ ರೀತಿ ತೊಂದರೆಯಾಗಬಾರದು. ಕೆಲಸ ಕಾರ್ಯಗಳು ಬೇಗ ನಡೆಯಬೇಕು. ಅಧಿಕಾರ ನಮ್ಮ ಕೈಯಲ್ಲಿಲ್ಲ, ಮೆಜಾರಿಟಿ ನಮಗೆ ಇಲ್ಲ ಎಂದು ಈ ರೀತಿ ತೊಂದರೆ ಪಡಿಸುವುದು ಏತಕ್ಕೆ ? ಜನ ಓಟು ಕೊಟ್ಟು ಇವರನ್ನು ಅಧಿಕಾರಕ್ಕೆ ತಂದಿದ್ದಾರೆ. ಇಂಥಾದ್ದರಲ್ಲಿ ಕಿತಾಪತಿ ಮಾಡುವುದು ಸರಿಯಲ್ಲ. ಮುನಿಸಿಪಾಲಟಿ ಚೆನ್ನಾಗಿ ನಡಕೊಂಡು ಬರುತ್ತಿರುವಾಗ್ಗೆ ಹಿಂಸೆ ಮಾಡುವುದು ಸರಿಯಲ್ಲ. ಇಂಥ ಹಿಂಸೆಗೆ ಜಗ್ಗಬಾರದು.

ಇನ್ನು ಮಾನ್ಯ ಮಂತ್ರಿಗಳಲ್ಲಿ ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮುನಸಿಪಲ್ ಪ್ರೆಸಿಡೆಂಟರ ಚುನಾವಣೆಯನ್ನು ಮೆಂಬರ್ಸ್ ಮಾಡಬಾರದು. ಜನರು ನೇರವಾಗಿ ಓಟು ಹಾಕಿ ಪ್ರೆಸಿಡೆಂಟರನ್ನು ಆರಿಸಬೇಕು. ಈ ಪದ್ಧತಿ ಜಾರಿಗೆ ಬರುವ ಹಾಗೆ ಸೂಕ್ತ ತಿದ್ದುಪಡಿ ಮಾಡಬೇಕೆಂದು ಸೂಚಿಸುತ್ತೇನೆ. ಮುನಿಸಿಪಾಲಿಟಿ ಚುನಾವಣೆಯ ವಿಚಾರದಲ್ಲಿ ಹೈಕೋರ್ಟಿಗೆ ಹೋಗಿ ದುಡ್ಡು ನಷ್ಟವಾಗುತ್ತಿದೆ. ಇದು ಸರಿಯಲ್ಲ. ಯಾಕೆಂದರೆ ಬಡ ರೈತನ ದುಡ್ಡು ನಷ್ಟವಾಗುತ್ತದೆ. ಸರಕಾರದವರು ಮಧ್ಯೆ ಪ್ರವೇಶಮಾಡಿ ಕೆಲವು ವಿವಾದದಲ್ಲಿ ಸ್ಟೇ ಆರ್ಡರ್ ಕೊಡುತ್ತಿದ್ದಾರೆ. ಈ ರೀತಿ ಮಾಡಬಾರದು ಎಂದು ಕೇಳಿಕೊಳ್ಳುತ್ತೇನೆ. ನಮ್ಮ ಮಂಡ್ಯದಲ್ಲಿ ಸರಕಾರಿ ಹೈಸ್ಕೂಲು ಇಲ್ಲ. ಶಾಲೆಗೆ ಹೋಗುವ ಸಾವಿರಾರು ವಿದ್ಯಾರ್ಥಿಗಳು ಇದ್ದಾರೆ. ಈಗ ಈ ಹೈಸ್ಕೂಲು ಕಟ್ಟಡಕ್ಕಾಗಿ ಜಾಗ ಕೊಟ್ಟಿದ್ದಾರೆ. ಲಕ್ಷ್ಮೀ ಜನಾರ್ದನ ಹೈಸ್ಕೂಲು ಮಾಡಬೇಕೆಂದು ಹೇಳಿದ್ದಾರೆ. ಇನ್ನೊಂದು ಗರ್ಲ್ಸ್ ಹೈಸ್ಕೂಲು ಮಾಡಬೇಕೆಂಬ ಉದ್ದೇಶವಿದೆ. ಇದಕ್ಕೆ ಕಟ್ಟಡ ಕಟ್ಟಿಸಿಕೊಡುತ್ತಾರೆಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಈ ವಿಷಯ ಪರಿಶೀಲಿಸಬೇಕು ಎಂದು ಹೇಳುತ್ತೇನೆ. ಕಟ್ಟಡ ಕಟ್ಟಿಸಿಕೊಟ್ಟು ಸ್ಕೂಲು

(ಶ್ರೀ ಜೆ. ದೇವಯ್ಯ)

ನಡೆಸಬೇಕು. ಸರಕಾರಿ ಜಾಗವಿದೆ. ಆದರೆ ನಿಮ್ಮ ಮುಂದೆ ಓಡಾಡತಕ್ಕಂಥ ಮುಖಂಡರು ಬಂದರೆ ಲಕ್ಷಾಂತರ ರೂಪಾಯಿ ಸಹಾಯ ಒದಗಿಸುತ್ತೀರಿ. ಸರಕಾರ ರಾಜ್ಯದ ಎರಡು ಕೋಟಿ ಜನರ ಸಲುವಾಗಿ ಇರುವುದು, ಕೆಲವು ಮುಖಂಡರ ಸಲುವಾಗಿ ಅಲ್ಲ.

ಉಪಾಧ್ಯಕ್ಷರು.—ಈ ಬಿಲ್ಲಿನ ಬಗ್ಗೆ ಮಾತನಾಡಿರಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಮಸೂದೆಯ ಕಲಮುಗಳನ್ನು ಅವರು ಹೇಗೆ ಓದುವುದು ? ಅವರು ಕನ್ನಡವೇ ಕೈಲಾಸ ಎಂದು ತಿಳಿದುಕೊಂಡವರು ಕನ್ನಡ ಪ್ರತಿ ಒದಗಿಸಿಲ್ಲ. ಇಂಗ್ಲಿಷ್ ಪ್ರತಿ ಕೊಟ್ಟಿದೆ. ಅದನ್ನು ಅವರು ಹೇಗೆ ಓದುವುದು ? ಕನ್ನಡ ಭಾಷೆಯಲ್ಲಿ ಮಸೂದೆ ಕಾಪಿ ಒದಗಿಸಬೇಕು.

ಉಪಾಧ್ಯಕ್ಷರು.—ಅವರು ಅದನ್ನು ಮೊದಲೇ ಹೇಳಿದ್ದಾರೆ.

ಶ್ರೀ ಜೆ. ದೇವಯ್ಯ.—ಮಂಡ್ಯದಲ್ಲಿ ವ್ಯವಸಾಯ ಮಾಡತಕ್ಕಂಥ ಪ್ರದೇಶದಲ್ಲಿ ಸಣ್ಣ ಸಣ್ಣ ಸೈಟುಗಳನ್ನು ಮಾಡಿ ಮನೆ ಕಟ್ಟುವುದಕ್ಕೆ ಕೊಟ್ಟುಬಿಟ್ಟಿದ್ದಾರೆ. ಅನೇಕರು ಮನೆ ಕಟ್ಟಿಸಿ ಬಿಟ್ಟಿದ್ದಾರೆ. ಕೆಲವರು ಖಾಲಿ ಜಾಗ ಮಡಗಿದ್ದಾರೆ. ಆದರೆ ಈ ಜಾಗ ಕೊಡುವುದಕ್ಕಾಗುವದಿಲ್ಲವೆಂದು ಸರಕಾರ ಆರ್ಡರ್ ಮಾಡಿದ್ದಾರೆ. ಇದು ಸರಿಯಲ್ಲ. ಸಾರ್ವಜನಿಕರ ಹಿತಕ್ಕಾಗಿ ಮುನಿಸಿಪಾಲಿಟಿ ಕೆಲಸ ಮಾಡುತ್ತದೆ. ಜನ ಇದನ್ನು ಒಪ್ಪಿಕೊಂಡಿದ್ದಾರೆ, ಈ ರೀತಿ ಇದ್ದರೂ ಕೂಡ ಪುನಃ ಪುನಃ ಆಡಳಿತದಲ್ಲಿ ತೊಂದರೆ ಯುಂಟುಮಾಡಿದರೆ ಬಡವರಿಗೆ ಸೈಟ್ ಹೇಗೆ ಸಿಗಬೇಕು ? ಬಡವರಿಗೆ ತೊಂದರೆಯಾಗುವದಿಲ್ಲವೆ ? ಸರಿಯಾಗಿ ಆಡಳಿತ ನಡೆಸುವುದು ಹೇಗೆ ? ಸರ್ಕಾರ ನೌಕರರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಸಹಾಯ ಕೊಡಬೇಕು ; ಹೌಸ್ ಬಿಲ್ಡಿಂಗ್ ಸೊಸೈಟಿಯವರೂ, ಸರ್ಕಾರದವರೂ ಸಾಲ ಕೊಡಬೇಕು. ಎಷ್ಟೋ ಜನ ನೌಕರರ ಮನೆಯೂ, ನೂರು ರೂಪಾಯಿಗಿಂತ ಕಡಿಮೆ ಸಂಬಳ ಬರುವವರೂ ಮನೆಇಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ. ಪ್ರತಿಯೊಬ್ಬರೂ ಮನೆ ಮಾಡಿಕೊಳ್ಳುವ ಅವಕಾಶ ಇರಬೇಕು. ಹರಿಜನರಿಗೆ ಕೂತುಕೊಳ್ಳುವುದಕ್ಕೂ ಜಾಗವಿಲ್ಲ. ಅವರಿಗೂ ಬೇಗ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಮುಗಿಸಿ ಸಹಾಯ ಮಾಡಲೇಬೇಕು. ಎಲ್ಲಾ ವಿಚಾರಗಳನ್ನು ಮಾನ್ಯ ಮಂತ್ರಿಗಳಲ್ಲಿ ತಿಳಿಸಿದ್ದೇನೆ, ಅವರು ಎಲ್ಲ ಸಹಾಯವನ್ನು ಮನೆ ಕಟ್ಟಿಸಿಕೊಳ್ಳುವುದಕ್ಕೆ ಮಾಡಿಕೊಡಬೇಕು.

ಇಷ್ಟೊಂದು ಹೇಳಲು ಅವಕಾಶಕೊಟ್ಟ ಸಭಾಪತಿಗಳನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

4-30 P.M.

†Sri M. SRINIVASA NAYAK (Mangalore-I). —I rise to welcome the Mysore Municipalities Bill that has been introduced in this House. We, from the integrated areas were looking forward to the introduction of such a Bill, because we have been feeling that we, from South Kanara have so far been governed by the Madras M.T.M. Act which left a lot of lacuna and a lot of ambiguity. I congratulate Government for introducing this Bill so that the ambiguity and lacuna found in the different integrated areas so far will be eliminated and we have a fair Municipal Act to govern us. I also welcome the suggestion of Government to refer this Bill to a Select Committee because this Bill could be thoroughly discussed and whatever lacuna found in other areas could be rectified. Coming as I do from South Kanara so far governed by the Madras M.T.M. Act, I find very welcome features in this Bill. I also feel that certain portions of the Madras M.T.M. Act are very much better than what are found in this Bill. So, all these matters could be discussed in the Select Committee and I am certain that the ambition of Government to govern the State through local bodies will be realised through this Bill.

One thing that always comes before the House is that the municipalities of this State are debtors to Government. That is a point which

has to be rectified when this Bill has to be made into a comprehensive Act because it is to be understood that the income of the municipalities should be the *prima facie* factor which should govern the Government's intention to see that Local Self-Government is made perfect. Unless the municipalitins are given adequate finances to run the show and to see that the local development works are carried out by the moneys provided for, I do not think any municipality can achieve the ideals which are before them or it may not be able to satisfy the people of that area. So, it should be the primary duty of Government that the municipalities should be given 5 or 10 per cent of the land revenue collected from the respective area and a big portion of the motor vehicle taxation that is collected from that area should be made over to the municipality. Speaking of my place, Mangalore, we are giving by way of motor vehicle taxation about Rs. 40 lakhs to Government, but the compensation that is received by the municipality is only Rs. 17,000. But it is the responsibility of the municipality to maintain these roads in a motorable condition. The roads are used by the vehicles that pass and the tax for that is collected by Government. Is it possible for the municipality to maintain the roads in a fit condition while the tax on every vehicle that passes is collected by Government ? It is necessary that this Act should provide that the municipality should get 50 per cent of the motor vehicle taxation collected from the respective city or town municipalities so that the municipalities can have a sizable income to repair the roads, to widen the roads.

This Act makes it compulsory to levy octroi. As far as I can see, octroi is an out-dated and out-moded type of taxation and it is better Government considers it before making an Act. It may be possible to make it optional or in the alternative, Government may consider giving to the municipality a portion of the sales-tax collected in the respective area. My friend was referring to leakage in Hassan, that nearly Rs. 18,000 were taken away by the octroi staff, resulting in loss to Hassan Municipality. Similarly, many other cases have come to the notice of Government and it can be said that octroi is not properly administered. It is necessary that octroi should be replaced by another leak-proof taxation and the only other method by which Government could think of providing finances to the municipality would be through giving away a portion of sales tax collected from the respective area to that municipality. Further more, it is quite necessary that members of the Assembly elected from the particular municipal constituency should be made *ex-officio* members of the municipality as in the case of taluk boards. Members of the Legislative Council elected from the Local Authorities' Constituency should also be made *ex-officio* members of the municipality so that they could be liaison between Government and the municipality. Because it is known that the municipality cannot survive or function well without the patronage of Government as at every stage the municipality has to Government for financial assistance and Government also should provide adequate funds for giving grants for development works. Because, if a particular municipal area is to provide

(SRI M. SRINIVASA NAYAK)

sufficient or required amenities for the people, it may be taken that the other responsibility of Government, that is, P.W.D. or other department is very much lessened and the people in the respective areas would be satisfied and they would always have no complainst againts Government. One lacuna is, Government has not specified the allowance to be paid to the Chairman or Vice-Chairman. That leaves great room for each muncipality to fix up such sums, fantastic or otherwise; that is left to the whims and fancies of the Council in power. This Act should provide for, as is provided for in the M.T.M. Act, a specific sum to be given to the Chairman. Again, this Act also provides for allowance to the Vice-Chairman. This may not be necessary. Only the Chairman may be given conveyance allowance or such other entertainment allowance and that should be specified in the Act itself. That will go a long way to eliminate certain difficulties experienced from time to time. It is also said that some muncipalities need not elect Vice-Chairman. That may not be a correct thing to be passed into law. It should be compulsory on the part of every muncipality to have a Vice-Chairman and the election of Vice-Chairman should be taken place within 7 or 15 days from the date of the election of the Chairman. The number of Harijan seats to be provided for in every muncipality is also left vague. Every time, the Council or the Commissioner or the authorities concerned will have to go to Government to fix the number of Harijans that are to be given seats in the Municipality Government should specify the number of seats to be reserved for Harijans so that that ambiguity can be eliminated.

And it was said by some Hon'ble Members that no seat for the ladies should be reserved. The Madras MPL Act provides for the reservation of seats for ladies. I do not think it is opposed to the Constitution. But the Select Committee may get it examined. But it will be quite necessary that seats should be reserved and it should not be left vague. It should be specified that a particular municipality with a particular population shall have so many seats reserved for ladies.

Another thing that is left vague in this Bill that the city shall be divided into divisions. I do not think that by dividing the city into division, it will fix liability of the councillor to concentrate on a particular area. It is better to divide the city or town into wards, where a particular councillor could be made responsible for a particular constituency. Now it is said in this Bill to have 3-4 members elected in each division. That will leave the members in a vague position. They cannot bind down any particular person for lapse of duty. I would urge the Government to consider the proposal to divide the city or town not into divisions but as in Madras, the city should be divided into wards because there will be an effective approach to all people by a particular councillor and that will give the councillor also a sense of duty to see that the particular area is developed properly.

Here, provision has been made for the town improvement board and the functions of the Board is defined in this Bill. I would say the Town

Planning Act of the Madras area will be an ideal thing to implement along with the Board. Because the functions of the Board and the Town Planning Act of Madras State are quite different and it will be quite necessary that we should have introduced the Madras Town Planning Act in every municipality because that will provide for the grant of licence and certain other matters in towns and local areas. It is said in this Act that any town with a population of 10,000 should be declared as a Muncipality. That is, for a town of 10,000 people if you introduce a municipality, it cannot be fully to the advantage of the people of that area. It should for a town with a population of over 15,000 or 20,000 and only such towns should be declared as a municipal area. Because when a municipality is introduced and a particular area is converted into municipality, people of that locality will have to bear a certain measure of taxation burden. It is necessary that Government should reconsider that position and see whether the limit of 10,000 could be raised to 15,000 or 20,000.

After that, the factor which the Government has to consider in order to see that proper administration is made by the muncipality is that the municipal servants cadre should be provicialised. Every servant who has put in a service of 5 years...clerks, revenue officers, first division clerks, etc., should be transferred from one municipality to the other. Also the Health Inspectors who are responsible for the administration of the sanitary conditions in the City. Without their transfer, it is not possible to have control over these officers and it is necessary that they should be transferred from one municipality to the other at the end of five years compulsorily. Government should also provide food analysing laboratory in each municipal area because the municipality is responsible for preventing adulteration of food under the Adulteration of Food Act. It is now found that all the adulterated stuff that is seized by the Municipal staff will have to be sent to Calcutta or Bangalore for analysis and during the transit, lot of mischief is done by the muncipal staff. So, it is necessary that in the interest of the public where the municipality is saddled with the responsibility of administering the Food Adulteration Act, it is the responsibility of the Government to provide a food analysing laboratory in every city because that will give the municipal staff and the people a sort of responsibility to see that the food that has been seized is analysed immediately.

Another factor that will have to be considered is that the elementary. education in the municipalities is a particular burden of the Government Government should take over all the elementary schools and also it should be the responsibility of Government to open Balawadies. Because according to the compulsory education scheme, the Government has specified five years and above for children to be admitted to the first class. For children above three years, Government has not specified anything. It should therefore be the responsibility of the Government to run balawadis and it is necessary that Government should provide for such education in the Bill itself.

(SRI M. SRINIVASA NAYAK)

It should also be the responsibility of the Government to provide each municipality with drinking water—purified water and also a good underground drainage scheme. For that purpose, Government can give 50 per cent grant or 50 per cent loan, or if it is a small municipality, Government should consider giving full grant to provide purified water and underground drainage so that they may lead a healthy and comfortable life.

Sir, I do not wish to say anything further at this stage because it is proposed to send the Bill to the Select Committee.

With these few observations, I welcome this Bill and it is the responsibility of the Select Committee to give us a comprehensive and acceptable Bill.

†ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, 15 ವರ್ಷಗಳನಂತರ ನಮ್ಮ ಸಂಸ್ಥಾನದ ಕನ್ನಡ ಭಾಗಗಳೆಲ್ಲಾ ಒಟ್ಟಾದ ಮೇಲೆ ಈ ಒಂದು ಸಮಗ್ರವಾದ ಮಸೂದೆಯನ್ನು ಸಭೆಯ ಮುಂದೆ ತಂದಿರುವುದಕ್ಕಾಗಿ ಸರ್ಕಾರದವರನ್ನು ಅಭಿನಂದಿಸುತ್ತಾ ಈ ಸಂದರ್ಭದಲ್ಲಿ ಒಂದೆರಡು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗತಾನೆ ಮಾತನಾಡಿದಂಥ ಗಾಂಜಿ ವೀರಪ್ಪನವರು ಈ ಮಸೂದೆಯ ವಿಷಯವಾಗಿ ಕೆಲವು ಮುಖ್ಯವಾದ ಅಂಶಗಳನ್ನು ಹೇಳಿದರು. ನಾನು ಮತ್ತೆ ಪುನಃ ಅದೇ ವಿಷಯವಾಗಿ ಮಾತನಾಡಲು ಇಷ್ಟಪಡುವುದಿಲ್ಲ. ಲೇ ಔಟ್ ಹಾಕತಕ್ಕ ಸಂದರ್ಭದಲ್ಲಿ ವಿಸ್ತಾರವಾಗಿ ಬೆಳೆಯುತಕ್ಕ ಪಟ್ಟಣಗಳ ಸಮೀಪದಲ್ಲಿ ಖಾಸಗೀ ಜನರು ಲೇ ಔಟ್ಸ್ ಹಾಕಲು ಅಧಿಕಾರ ಕೊಡಬಾರದು, ಈ ಬಗ್ಗೆ ಕಡ್ಡಾಯವಾದ ನಿಯಮವನ್ನು ಈ ಆಕ್ಟ್‌ನಲ್ಲಿ ಸೇರಿಸಿದರೆ ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಈಗ ನಮ್ಮ ಸಂಸ್ಥಾನದಲ್ಲಿ ಮೈಸೂರು ಮತ್ತು ಬೆಂಗಳೂರು ಪಟ್ಟಣಗಳಿಗೆ ಟ್ರಸ್ಟ್ ಬೋರ್ಡುಗಳಿವೆ. ಒಂದು ವ್ಯವಸ್ಥಿತವಾದ ರೀತಿಯಲ್ಲಿ ಈ ಪಟ್ಟಣಗಳ ಬೆಳವಣಿಗೆಗೆ ಕಾರ್ಯಕ್ರಮ ಹಾಕಿಕೊಂಡು ಅನುಕೂಲ ಮಾಡಿಕೊಡುತ್ತಾ ಇವೆ. ಈ ಆಧುನಿಕ ಯುಗದಲ್ಲಿ ಸಣ್ಣಪುಟ್ಟ ಟೌನ್ ಮುನಿಸಿಪಾಲಿಟಿಗಳಿಗೂ ಕೂಡ ಒಂದು ಮಾಸ್ಟರ್ ಪ್ಲಾನ್ ಅನುಸರಿಸಿ ಪಟ್ಟಣಗಳು, ಗ್ರಾಮಗಳು ಬೆಳೆಯುತಕ್ಕ ಒಂದು ಕ್ರಮವನ್ನು ಸರ್ಕಾರ ಈಗಿನಿಂದಲೇ ಅನುಸರಿಸುವುದು ಒಳ್ಳೆಯದು. ಇಲ್ಲದೇ ಹೋದರೆ ಸಿಕ್ಕಾಪಟ್ಟೆ ಲೇ ಔಟ್ಸ್ ಆಗಿ ನಾಳೆ ಯಾವುದೇ ಪಟ್ಟಣಗಳು ಸಹ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಇರುವುದಿಲ್ಲ. ಅವಕ್ಕೆ ಅಂಡರ್ ಗ್ರೌಂಡ್ ಡ್ರೈನೇಜು, ನೀರಿನ ಅನುಕೂಲ ಇಂಥವುಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಇದಕ್ಕಾಗಿ ಪ್ರತ್ಯೇಕವಾದ ಒಂದು ಟೌನ್ ಪ್ಲಾನಿಂಗ್ ವಿಭಾಗವನ್ನೇ ಇಟ್ಟುಕೊಂಡು ನಮ್ಮಲ್ಲಿರತಕ್ಕ ಎಲ್ಲಾ ಟೌನ್ ಮುನಿಸಿಪಾಲಿಟಿಗಳಿಗೂ ಕೂಡ ಒಂದು ಮಾಸ್ಟರ್ ಪ್ಲಾನ್ ಮಾಡಿಸಿ ಅದರಂತೆ ಆಯಾಯ ಪಟ್ಟಣಗಳು ಬೆಳೆಯಲು ಒಂದು ಅವಕಾಶವನ್ನು ಮಾಡಿಕೊಡಬೇಕೆಂದು ಹೇಳಿ ಇದಕ್ಕನುಗುಣವಾದ ಒಂದು ಕಲಂನ್ನು ಈ ಕಾನೂನಿನಲ್ಲಿ ಸೇರಿಸಬೇಕೆಂದು ಹೇಳುತ್ತೇನೆ.

ಮೈಸೂರು, ಬೆಂಗಳೂರು, ಬೆಳಗಾಂ, ಹುಬ್ಬಳ್ಳಿ, ಧಾರವಾಡ ಈ ಪಟ್ಟಣಗಳನ್ನು ಬಿಟ್ಟರೆ, ನಮ್ಮ ಹಳೇ ಮೈಸೂರು ಭಾಗದಲ್ಲಿ 3000ಪ್ರಜಾ ಸಂಖ್ಯೆ ಇರತಕ್ಕ ಊರುಗಳೂ ಕೂಡ ಮುನಿಸಿಪಾಲಿಟಿಗಳಾಗಿವೆ. ಮುನಿಸಿಪಾಲಿಟಿಗಳಾಗಿರುವುದರಿಂದ ಸರ್ಕಾರದವರು ನಿಮ್ಮ ಕಂದಾಯವನ್ನು ನೀವೇ ತೆಗೆದುಕೊಳ್ಳಿ, ನಿಮ್ಮ ಕಾಲಮೇಲೆ ನೀವೇ ನಿಂತುಕೊಳ್ಳಿ ಎಂದು ಹೇಳುತ್ತಾ ಯಾವ ಅನುಕೂಲ ಮಾಡಿಕೊಡಬೇಕೋ ಅದಕ್ಕೆ ಸುತರಾಂ ಸರಿಯಾದ ಕಾರ್ಯಕ್ರಮ ಇಲ್ಲ. ಅಂಥವುಗಳಿಗೆ ಒಂದು ಪಕ್ಷ ಮುನಿಸಿಪಾಲಿಟಿಗಳ ಸ್ಥಾನಮಾನ ಕೊಡಬೇಕೆಂದು ಇಷ್ಟವಿದ್ದರೆ, ಅವುಗಳನ್ನು ಉಳಿಸಿಕೊಂಡು ಬರಬೇಕೆಂದರೆ under ground drainage works, ನೀರಿನ ವ್ಯವಸ್ಥೆ ಇದನ್ನೆಲ್ಲಾ ಅವರೇ ಮಾಡಿಕೊಳ್ಳಬೇಕೆಂಬ ಕಡ್ಡಾಯ ಮಾಡದೇ ಸರ್ಕಾರದವರೇ ಆ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕೆಂದು ಸೂಚಿಸುವುದಕ್ಕೆ ಇಷ್ಟಪಡುತ್ತೇನೆ. ಒಂದು ನಿದರ್ಶನ ಈ ಸಂದರ್ಭದಲ್ಲಿ ಕೊಡಬೇಕು. ನಾನು ಬಂದಿರತಕ್ಕ ಸ್ಥಳ ನಾಗಮಂಗಲ ಒಂದು ಮುನಿಸಿಪಾಲಿಟಿ. ಆ ಊರಿನ ಜನಸಂಖ್ಯೆ 6,500. ಅದಕ್ಕೆ ಬರತಕ್ಕ ಉತ್ಪನ್ನ ಸುಮಾರು 60 ರಿಂದ 70 ಸಾವಿರ ರೂಪಾಯಿಗಳವರೆಗೆ ಇದೆ. ಅದಕ್ಕೆ ಎಕ್ಸಿಕ್ಯೂಟೀವ್ ಆಫೀಸರು, ಸಿಬ್ಬಂದಿ, ಅವರಿಗೆ ಸಂಬಳ ಕೊಡುವುದಕ್ಕೆ 38 ಸಾವಿರ ರೂಪಾಯಿ. ದೀಪ ವಗೈರೆ ಇದಕ್ಕೆಲ್ಲಾ 18 ಸಾವಿರ ರೂಪಾಯಿ ಆಗುತ್ತದೆ. ನಮ್ಮ ಊರಿನ

ನೀರಿನ ಅನುಕೂಲಕ್ಕಾಗಿ 4 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಬಹಳ ಉದಾರವಾಗಿ ಕೊಟ್ಟರು. ಈಗ ಆ 4 ಲಕ್ಷ ರೂಪಾಯಿಗಳ ಸಾಲವನ್ನು ತೀರಿಸಬೇಕಾಗಿದೆ. ಆದಗೆ ನಮಗೆ ಕೊಡುವುದಕ್ಕೆ ಎಷ್ಟರವರೆಗೆ ಶಕ್ತಿ ಇದೆಯೋ ಅಷ್ಟರವರೆಗೆ ತಾವು ಕಂದಾಯ ಹಾಕಬಹುದು. ಆದರೆ ಈಗ ಹಾಕಿರತಕ್ಕದ್ದೇ ಬಹಳ ಜಾಸ್ತಿಯಾಗಿದೆಯೆಂದು ಹೇಳುವ ಕಾಲ ಬಂದಿದೆ. ಇದಕ್ಕೆ ಮೇಲ್ಪಟ್ಟು ನಾವು ಕಂದಾಯ ಹಾಕುವುದಕ್ಕೆ ಹೋದರೆ ಜನರು ದಂಗೆಯೇಳುತ್ತಾರೆ. ನಮಗೀಗ ಈ ನಾಲ್ಕು ಲಕ್ಷ ರೂ. ಗಳಿಗೆ ತೆರಬೇಕಾದ ಬಡ್ಡಿ ಮತ್ತು ಕಂತು ಪ್ರಕಾರ ಪಾವತಿ ಮಾಡಬೇಕಾಗಿರುವ ಕಂತಿನ ಮೊಬಲಗು ಒಟ್ಟು ಸೇರಿ 36 ಸಾವಿರ ರೂ. ಗಳಿಗೆ ಬರುತ್ತದೆ. ಸರ್ಕಾರದವರು ಈ ನೀರಿನ ಬಾವಿಗಳ ಬಗ್ಗೆ ಒಂದೊಂದು ಬಾವಿಗೆ 5-10 ಸಾವಿರ ಖರ್ಚುಮಾಡುತ್ತಿರಬಹುದು. ಹೀಗೇ ಅವರು ಹತ್ತಾರು ಹಳ್ಳಿಗಳಲ್ಲಿ ಹತ್ತಾರು ಬಾವಿಗಳಿಗೆ ಹಣ ಒದಗಿಸಿದರೆ ಅದೂ ಕೂಡ ಇಷ್ಟೇ ಆಗುತ್ತದೆ. ಆದರೆ, ಈ ದಿವಸ ಇದಕ್ಕೇನೋ ಮುನಿಸಿಪ್ಯಾಲಿಟಿ ಎಂತ ಒಂದು ದೊಡ್ಡ ಹೆಸರನ್ನು ಕೊಟ್ಟು ಸಾಲ ತೆಗೆದುಕೊಳ್ಳಿ ಅಂತ ತಾವು ಹೇಳಿದರೆ ಅವರು ತೀರಿಸತಕ್ಕ ಬಗೆ ಹೇಗೆ? ಯಾವ ರೀತಿ ಆ ಸಾಲವನ್ನು ತೀರಿಸಬೇಕು? ಈ ದಿವಸ ಈ ಪಂಚಾಯಿತಿಗಳನ್ನೆಲ್ಲಾ ಸರ್ಕಾರದವರೇ ವಹಿಸಿಕೊಂಡು ಬಿಡಿ. ಆಗ ನೀವು ಏನು ಕಂದಾಯ ಹಾಕಿದರೆ ನಾವು ಅದನ್ನು ಕೊಡುವುದಕ್ಕೆ ಸಿದ್ಧವಾಗಿರುತ್ತೇವೆ. ಈ ದಿವಸ ಬೆಂಗಳೂರು ನಗರಕ್ಕೆ ನೀರನ್ನೊದಗಿಸಲು ಕಾವೇರಿ ನದಿಯಿಂದ ನೀರನ್ನು ತರಬೇಕೆಂದು ಆದಕ್ಕೆ ಕೋಟ್ಯಾಂತರ ರೂ. ಗಳನ್ನೇ ಖರ್ಚುಮಾಡಲು ಹೊರಟಿದ್ದೀರಿ. ಆದರೆ, ನಾಳೆ ದಿವಸ ಈ ಹಣವನ್ನೇ ಕೊಡಲು ಶಕ್ತಿಯಿಲ್ಲ ಅಂದರೆ ರೈಟ್ ಆಫ್ ಮಾಡುತ್ತೀರಿ ಅಂತ ನಾವು ತಿಳಿಯೋಣವೇ? ಆದರೆ ಈಗಾಗಲೇ ಈ ಕುಡಿಯುವ ನೀರಿನ ಸರಬರಾಯಿ ವಿಚಾರದಲ್ಲಿ ನಮ್ಮ ಮಂಗಳೂರಿನ ಮಾನ್ಯ ಸದಸ್ಯರು ಹೇಳಿದಂತೆ ಈ ಖರ್ಚಿನಲ್ಲಿ ಅರ್ಧ ಮೊಬಲಗನ್ನು ಗ್ರ್ಯಾಂಟ್ ರೂಪದಲ್ಲಿ ಕೊಡದೆ ಹೋದರೆ ಬಹಳ ತೊಂದರೆ ಆಗುತ್ತದೆ ಎಂಬ ಅಂಶವನ್ನು ನಾನೀಗ ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಈ ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಚಾರದಲ್ಲಿ ಈಗಿರತಕ್ಕ ಪದ್ಧತಿ ಪ್ರಕಾರ ಎಲ್ಲಿ 5 ಸಾವಿರಕ್ಕಿಂತ ಮೇಲ್ಪಟ್ಟು ಓಟರುಗಳಿರುತ್ತಾರೋ ಅಲ್ಲಿ ಡಿವಿಜನ್‌ಗಳನ್ನಾಗಿ ಮಾಡತಕ್ಕ ಪದ್ಧತಿ ಇದೆ. ಇದರಿಂದ ದುರ್ನಡತೆ ಇದ್ದೇ ಇರುತ್ತದೆ. ಲಂಚ ರುಷವತ್ತುಗಳಿಲ್ಲದೆ ಚುನಾವಣೆಗಳಲ್ಲಿ ಆರಿಸಿ ಬರುವುದಕ್ಕೆ ಬಹಳ ಕಷ್ಟವಿರುತ್ತದೆ. ಒಳ್ಳೆಯವರು ಆರಿಸಿ ಬರಲು ಕಷ್ಟವಿದೆ, ಸಣ್ಣಪುಟ್ಟ ಮುನಿಸಿಪ್ಯಾಲಿಟಿಗಳಲ್ಲಿ ಈ ತೊಂದರೆ ಜಾಸ್ತಿಯಾಗಿದೆ. ಈ ದಿವಸ ಬೆಳ್ಳೂರಿನಲ್ಲಿ ಒಂದು ಪಂಚಾಯಿತಿಯನ್ನೇ ಮಾಡಿದ್ದೇವೆ. ಅಲ್ಲಿ ಕೇವಲ 80 ಜನ ಓಟರುಗಳು ಮಾತ್ರ ಇದ್ದಾರೆ. ಅಲ್ಲಿ ಒಬ್ಬರು 7 ಸಾವಿರ ರೂ. ಗಳನ್ನು ಚುನಾವಣೆಗೆ ಖರ್ಚುಮಾಡಿದ್ದಾರೆ. ಹೀಗೆ ಕೇವಲ ಅಂಥಾ ಒಂದು ಸಣ್ಣ ಗ್ರಾಮದಲ್ಲೇ ಅಷ್ಟು ದುಡ್ಡು ಖರ್ಚಾಗಬೇಕಾಗಿದ್ದರೆ ಇನ್ನು ದೊಡ್ಡ ನಗರಗಳಲ್ಲಿ ಜನರ ಪಾಡೇನಾಗಿರಬೇಕು? ಆದ್ದರಿಂದ ನಾನೀಗ ಹೇಳುವುದೇನೆಂದರೆ--ಈ ಸಣ್ಣ ಪುಟ್ಟ ಊರುಗಳಲ್ಲಿ ಡಿವಿಜನ್‌ಗಳನ್ನೇ ಮಾಡಲೇ ಬೇಡಿ ಒಟ್ಟಿಗೆ ಚುನಾವಣೆ ನಡೆಸುವಂತೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ರೀತಿ ಮಾಡಿದರೆ ಒಳ್ಳೆಯದಾದೀತೆಂಬುದು ನನ್ನ ಭಾವನೆ.

ಇನ್ನು ಈ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆ ವಿಚಾರದಲ್ಲಿ ಈಗಾಗಲೇ ಕೆಲವು ಮಾನ್ಯ ಸದಸ್ಯರು ಹೇಳಿದಂತೆ, ಆ ಅಧ್ಯಕ್ಷರಾಗತಕ್ಕ ಜನಗಳಿಗೆ ಒಳ್ಳೆಯ ಅನುಭವವಿರಬಹುದು, ಆದರೆ ಆ ಎಲೆಕ್ಷನ್ ನಡೆಯುವುದಕ್ಕೆ ಮುನ್ನ 9 ಜನರೋ-12 ಜನರೋ ಸೇರಿ ಒಂದು ಜಾಲಿ ಟ್ರಿಪ್ ಅಂತ ಆಲ್-ಇಂಡಿಯಾ ಟೂರ್ ಮಾಡಿಕೊಂಡು ಬಂದರೆ ಸಾಕು ಯಾರನ್ನೋ ಅಧ್ಯಕ್ಷರನ್ನಾಗಿ ಆರಿಸಿಬಿಡುತ್ತಾರೆ. ಹೀಗೆ ಚುನಾವಣೆಯಾಗಿ ಬಂದವರಿಗೆ ಆ ಊರಿನ ಮೇಲೆ ಎಷ್ಟರ ಮಟ್ಟಿಗೆ ಮಮತೆ ಇರಬಹುದು, ಅವರು ಎಷ್ಟರ ಮಟ್ಟಿಗೆ ಆ ಊರಿನ ಜನರ ಕ್ಷೇಮವನ್ನು ನೋಡಿಕೊಳ್ಳುತ್ತಾರೆಂಬುದನ್ನು ತಾವೆಲ್ಲರೂ ಆಲೋಚನೆ ಮಾಡಬೇಕಾದಂಥ ವಿಷಯ ಇದು. ಇಂಥ ಸಂದರ್ಭಗಳಲ್ಲಿ ಏನೇನು ನಡೆಯುತ್ತದೆಂಬ ವಿಚಾರವೆಲ್ಲ ತಿಳಿದುಕೊಳ್ಳಲು ಸರ್ಕಾರದವರಿಗೆ ಅವಕಾಶವಿದೆ. ಅವರಿಗೆ ಅಧಿಕಾರವಿದೆ. ಇಂಥ ಅಕ್ರಮ ರೀತಿಯಲ್ಲಿ ಆದ ಚುನಾವಣೆಗಳನ್ನು ರದ್ದು ಮಾಡಲು ಒಂದು ಅವಕಾಶ ಸರ್ಕಾರಕ್ಕೆ ಇರಲೇಬೇಕು.

ಇನ್ನು 43 ನೇ ಪೇಜಿನಲ್ಲಿ—ಸೂಚಿಸಿರತಕ್ಕ 10 ಮತ್ತು 11 ನೆಯ ಉಪಕಲಂಗಳಲ್ಲಿ ಹೇಳಿರತಕ್ಕದ್ದು ವಿಚಿತ್ರವಾಗಿದೆ. ಹೀಗೆಲ್ಲ ಆದರೆ ಇನ್ನು ಮುಂದೆ ಯಾರು ನಿಷ್ಠೆಯಿಂದ, ದೇಶಭಕ್ತಿಯಿಂದ ಕೆಲಸ ಮಾಡಬೇಕೆಂಬ ಇರಾದೆ ಇರುತ್ತದೆಯೋ ಅಂಥವರಿಗೆ ಎಲ್ಲಿಯೇ ಇರಲಿ ದುಡ್ಡು ಸಂಪಾದನೆಗೆ ಅವಕಾಶವೇ ಇರುವುದಿಲ್ಲ. ಒಂದು ವೇಳೆ ಅಧ್ಯಕ್ಷನಾಗಿರತಕ್ಕ ವ್ಯಕ್ತಿ ಅಥವಾ ಉಪಾಧ್ಯಕ್ಷನಾಗಿರತಕ್ಕ ವ್ಯಕ್ತಿ ಮುನಿಸಿಪ್ಯಾಲಿಟಿಗೆ ಸಂಬಂಧಪಟ್ಟ ಹಣ ಕಾಸನ್ನು ದುರುಪಯೋಗಪಡಿಸಿಕೊಂಡಿದ್ದರೆ ಅಥವಾ ಆಡಳಿತದಲ್ಲಿ ಮತ್ತೇನಾದರೂ ಲೋಪದೋಷಗಳನ್ನೇ ನಡೆಸಿದ್ದ ಪಕ್ಷದಲ್ಲಿ ಅಂಥವರ ಮೇಲೆ ಕ್ರಮ ಜರುಗಿಸಬಹುದು. ಆದರೆ ಯಾರ್ಯಾರ ಗೃಹಕೃತ್ಯದ ತಾಪತ್ರಯಗಳು ಹೇಗ್ಹೇಗೆ ಇರುತ್ತವೋ,

(ಶ್ರೀ ಟಿ. ಎಚ್. ಮಾದಪ್ಪ ಗೌಡ)

ಅದನ್ನು ನಾವು ಇಲ್ಲಿ ಹೇಳುವುದಕ್ಕೆ ಬರುವುದಿಲ್ಲ. ಯಾರಾದರೂ ಆತನ ಸ್ವಂತ ವಿಚಾರದಲ್ಲಿ ಸಾಲ ಮಾಡಿದ್ದರೆ ಆತನಿಗೆ ಚುನಾವಣೆಗೆ ನಿಲ್ಲುವ ಹಕ್ಕಿಲ್ಲ-ಅವಕಾಶವಿಲ್ಲ ಅಂತ ಹೇಳಿರತಕ್ಕದ್ದು ತುಂಬಾ ಅನ್ಯಾಯ. ಇಂಥಾ ಕ್ಲಾಜುಗಳನ್ನೇ ಯಾವತ್ತೂ ಇಂಥಾ ಕಾನೂನು ಪುಸ್ತಕದಲ್ಲಿಡಬಾರದು. ಈ ಕ್ಲಾಜನ್ನು ಕೂಡಲೆ ತೆಗೆದುಹಾಕಬೇಕೆಂತ ಹೇಳುತ್ತೇನೆ.

5-00 P.M.

ಇನ್ನು ಈ ಅಧ್ಯಕ್ಷರ ಅವಧಿಯನ್ನು 2 ವರ್ಷಗಳೆಂತ ಹೇಳಿರತಕ್ಕದ್ದನ್ನು ನೋಡಿದರೆ ಇದು ಒಂದು ಹುಡುಗಾಟವಿದ್ದಂತೆ ಕಾಣುತ್ತಿದೆ ಈ ಬೆಂಗಳೂರಿನಂಥ ನಗರ ಕಾರ್ಪೊರೇಷನ್ನಿಗೆ ಅಧ್ಯಕ್ಷರಾಗಿ ಬರತಕ್ಕವರು 2 ವರ್ಷಗಳಲ್ಲಿ ಎಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೂ ಸಹ ಸಾಧ್ಯವಿರುವುದಿಲ್ಲ. ಹೀಗೆ ಮಾಡಿರತಕ್ಕದ್ದರ ಮೂಲಕವೇ ಪಾರ್ಟಿಯವರಿಗೆ ಸಾಧ್ಯವಾದಷ್ಟು ಈ ಸ್ಥಾನಗಳನ್ನು ಕೊಟ್ಟು ಅವರನ್ನು ತೃಪ್ತಿಪಡಿಸಲು ಹೀಗೆ ಮಾಡಿದ್ದಾರೆಂಬ ಅಂಶವನ್ನು ನಾನು ಘಂಟಾಘೋಷವಾಗಿ ಸಾರಿ ಸಾರಿ ಹೇಳಬಲ್ಲೆ. ಒಬ್ಬೊಬ್ಬರು ಸದಸ್ಯರಾಗಿ ಚುನಾವಣೆ ಹೊಂದಿ ಬರತಕ್ಕ ಕಾಲಾವಧಿ ಎಷ್ಟಿರುತ್ತದೆಯೋ ಅಷ್ಟು ಅವಧಿಯವರೆಗೆ ಅಧ್ಯಕ್ಷರಾಗಿ-ಉಪಾಧ್ಯಕ್ಷರಾಗಿ ರಲು ಅವಕಾಶ ಕಲ್ಪಿಸಬೇಕಾದ್ದು ನ್ಯಾಯ. ಇವರಿಗೆ ಈ ಅಧಿಕಾರಾವಧಿಯನ್ನಿನ್ನೂ ಜಾಸ್ತಿ ಮಾಡಬೇಕಾಗಿತ್ತೆಂದು ನಾನು ಅಭಿಪ್ರಾಯ ಪಡುತ್ತೇನೆ. ಇನ್ನು ಇತ್ತೀಚೆಗೆ ಈ ರಾಜಕೀಯ ಆಡಳಿತ ಯಾವ ಪಕ್ಷದವರ ಕೈಲೇ ಇರಲಿ ಆಡಳಿತ ಸುಲಲಿತವಾಗಿ ನಡೆಯುವ ಹಾಗೆ ಮಾಡಲು ಆಡಳಿತಕ್ಕೆ ಒಂದು ಒಳ್ಳೆಯ ವಿರೋಧಪಕ್ಷ ವಿರಲೇಬೇಕೆಂದು ಎಲ್ಲರೂ ಬಾಯಿನಲ್ಲೇ ಹೇಳಿದ್ದೂ ಹೇಳಿದ್ದೇ. ದೊಡ್ಡ ದೊಡ್ಡ ಶಬ್ದಗಳನ್ನು ಈ ಬಗ್ಗೆ ಬಳಸಿದ್ದೂ ಬಳಸಿದ್ದೇ.

ನಮ್ಮ ಅನುಭವಕ್ಕೆ ಬಂದಿರುವ ರೀತಿಯಲ್ಲಿ ನಾವು ತಲೆತಗ್ಗಿಸಬೇಕಾದ ಪ್ರಸಂಗಗಳು ಈ ದೇಶದಲ್ಲಿ ಆಗಿ ಹೋಗಿವೆ. ಈಗತಾನೆ ನನ್ನ ಮಾನ್ಯ ಮಿತ್ರರಾದ ಜೆ. ದೇವಯ್ಯನವರು ಮಂಡ್ಯ ಮುನಿಸಿಪಾಲಿಟಿಯ ಕಥೆಯನ್ನು ಹೇಳುತ್ತಿದ್ದರು. ನ್ಯಾಯವಾಗಿ ಜನಗಳ ಪ್ರೀತಿ, ವಿಶ್ವಾಸಗಳಿಂದ ಆರಿಸಿ ಬಂದವರ ಮೇಲೆ ನಮ್ಮ ಅಧಿಕಾರವಿದೆ, ದರ್ಪವಿದೆ, ನಮ್ಮ ಪಕ್ಷ ಆಳುತ್ತದೆ ಎನ್ನುವ ಅಹಂಭಾವದಿಂದ ಸರ್ಕಾರಕ್ಕೆ ಇಲ್ಲದ ಸಲ್ಲದ ವಿಚಾರಗಳನ್ನು ಹೇಳಿ ಕ್ರಮ ತೆಗೆದುಕೊಳ್ಳುವುದೆಂದರೆ, ಅದಕ್ಕಿಂತಲೂ ಪಾಪದ ಕೆಲಸ ಮತ್ತೊಂದಿಲ್ಲ. ನೀವು ಕಾಂಗ್ರೆಸ್ ಪಕ್ಷದ ಹೆಸರಿನಿಂದ ಚುನಾಯಿತರಾಗಿ ಬಂದಿದ್ದೀರಿ. ನಾನು ಹಿಂದೆ ಒಂದು ಸಂದರ್ಭದಲ್ಲಿ ಹೇಳಿದ ಹಾಗೆ ಚುನಾಯಿತರಾಗುವವರೆಗೂ ಒಂದು ಪಕ್ಷದ ಸದಸ್ಯರು ದೇಶದ ಆಡಳಿತ ಸೂತ್ರಗಳನ್ನು ವಹಿಸಿಕೊಂಡ ಮೇಲೆ ನಿರ್ವಾಚನೆಯಿಂದ ಯಾವುದೇ ಪಕ್ಷ ಪಂಗಡಗಳ ಹಿತವನ್ನೂ ಗಮನದಲ್ಲಿಟ್ಟು ನಿಮ್ಮ ಅಧಿಕಾರವನ್ನು ಚಲಾವಣೆ ಮಾಡುತ್ತ ಹೋದರೆ ಆಗ ಆ ಜಾಗದಲ್ಲಿರುವುದಕ್ಕೆ ನಾಲಾಯಕ್ ಆಗುತ್ತೀರಿ, ಜನರ ವಿಶ್ವಾಸವನ್ನು ಕಳೆದು ಕೊಳ್ಳುತ್ತೀರಿ. ಆದುದರಿಂದ ಭಗವಂತ ಕೊಟ್ಟಿರತಕ್ಕ ಸ್ಥಾನಮಾನಗಳನ್ನು ಬಹಳ ವಿಚಕ್ಷಣೆಯಿಂದ ನ್ಯಾಯಬದ್ಧವಾಗಿ ಯಾರು ಏನೇ ಹೇಳಲಿ, ತಪ್ಪು ಇದ್ದರೆ ಶಿಕ್ಷೆ ಮಾಡತಕ್ಕದ್ದು ಸೂಕ್ತ. ಅದರಲ್ಲಿ ನಮ್ಮ ಅಭ್ಯಂತರವೇನೂ ಇಲ್ಲ, ಸುಮ್ಮನೆ ರಾಜಕೀಯ ಕಾರಣಗಳಿಗಾಗಿ ಇಲ್ಲದ ಒತ್ತಡವನ್ನು ಸರ್ಕಾರದ ಮೇಲೆ ತಂದರೆ, ಸರ್ಕಾರ ಆ ಬಗ್ಗೆ ದುಡುಕಿ ಕಾರ್ಯಕ್ರಮವನ್ನು ತೆಗೆದುಕೊಳ್ಳಬಾರದು. ಅದರಿಂದ ಜನರ ಮನಸ್ಸಿನ ಮೇಲೆ ದುಷ್ಪರಿಣಾಮವಾಗುತ್ತದೆ. ಅದರ ಫಲವನ್ನು ನಾಳೆ ನೀವೂ ಅನುಭವಿಸಬೇಕಾಗುತ್ತದೆಂದು ಎಚ್ಚರಿಸುವುದಕ್ಕೆ ಇಷ್ಟಪಡುತ್ತೇನೆ.

ಟೌನ್ ಮುನಿಸಿಪಾಲಿಟಿಗಳಲ್ಲಿ, ಹಳ್ಳಿಯ ಊರುಗಳಲ್ಲಿ ಕಬ್ಬಿಣದ ಕೆಲಸ, ಮರದ ಕೆಲಸ ಇಂಥ ಕೆಲಸಗಳನ್ನು ಮಾಡುವ ಜಾಗ ಊರುಗಳಲ್ಲೆಲ್ಲ ಹರಡಿಕೊಂಡಿರುತ್ತದೆ. ಇದರಿಂದ ಆ ಊರಿಗೆ ಆರೋಗ್ಯ ದೃಷ್ಟಿಯಿಂದ ಬಹಳ ಕಷ್ಟವಾಗುತ್ತದೆ. ಇಂಥ ಸಣ್ಣ ಪುಟ್ಟ ಕೈಗಾರಿಕಾ ಸ್ಥಳಗಳಿಗೆಲ್ಲ ಬೇರೆ ಒಂದು ಜಾಗವನ್ನು ಗೊತ್ತು ಮಾಡಿ, ಅಂಥ ಸ್ಥಳದಲ್ಲಿಯೇ ಈ ತರಹ ಕೈಗಾರಿಕೆಗಳನ್ನು ಏರ್ಪಾಡು ಮಾಡತಕ್ಕದ್ದು ಸೂಕ್ತವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಸಂಸ್ಥಾನದ ಮತ್ತು ಕೇಂದ್ರ ಸರ್ಕಾರದ ಕಟ್ಟಡಗಳಿಗೆ ಕಂದಾಯದ ವಿನಾಯಿತಿ ಕೊಡಬೇಕೆಂದು ಒಂದು ಕಲಮು ಇದೆ ಇದು ಕೂಡದು. ಆ ಪಟ್ಟಣದಲ್ಲಿರುವ ಕಟ್ಟಡಗಳಲ್ಲೆಲ್ಲ ಸರ್ಕಾರಿ ಕಟ್ಟಡಗಳೇ ಉತ್ತಮವಾದ ಕಟ್ಟಡಗಳು ಇವುಗಳ ಮೇಲೆ ಬರುವ ಕಂದಾಯವನ್ನು ಕಳೆದು ಕೊಂಡರೆ, ಆಯಾ ಮುನಿಸಿಪಾಲಿಟಿಗಳಿಗೆ ಬರತಕ್ಕ ವರಮಾನ ಬಹಳ ಕಡಮೆಯಾಗುತ್ತದೆ. ಆದುದರಿಂದ ಸರ್ಕಾರಿ ಕಟ್ಟಡಗಳ ಮೇಲೆಯೂ ಕೂಡ ತೆರಿಗೆಯನ್ನು ಹಾಕಿ ಅದನ್ನು ವಸೂಲ್ಮಾಡತಕ್ಕ ಹಕ್ಕು ಮುನಿಸಿಪಾಲಿಟಿಗಳಿಗೆ ಇರಬೇಕೆಂದು ಹೇಳಲು ಇಷ್ಟಪಡುತ್ತೇನೆ.

ಇಷ್ಟು ಮಾತ್ರ ಹೇಳಿ, ನನಗೆ ಎರಡು ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

SRI B. R. SUNTHANKAR.—Sir, I regret to say that I cannot welcome this bill because it is a very retrograde bill, it is undemocratic in character and complexion. It is a very ill-concieved and sinister measure. I say this because it contains provisions which are harmful to the growth and development of local-self government in our country. This bill, of course, aims at bringing uniformity in law in the State. Yes, this bill if passed in the present form will bring in uniformity but what kind of uniformity will it be. It will be a degradation of the local-self-government that is already existing.

Sir, the Hon'ble Minister in moving this bill stated that it contained measures taken from the existing acts in the State. That is not quite true. This bill contains some of the provisions of the existing acts; Iam speaking particularly about the Bombay acts. The former Bombay State had two separate acts, one for district municipalities and another for city municipalities. The city municipalities had wider powers. I say that the present bill is retrograde because it tries to go several years back, some decades backwards. If it is passed in its present form, it will deal a severe blow to the municipal institutions in the Bombay Karnatak area, and I think, the Madras area also. This bill is trying to reverse the process of history, to turn back the clock of history. The bill snatches away with a number of rights, powers and privileges that our Municipalities enjoyed today. The bill provides for too much of interference by the government in all material particulars. It takes away the very essential character, the democratic character, of local self-governing institutions If this bill is made into law the municipal institutions in the State will be nothing but Government-controlled bodies.

Local self-government has had a long tradition in our country, a tradition of more than a century. Local self Government institutions, particularly municipalities, started in our country under the British regime, under the Act of 1850. Belgaum municipality was one of the earliest municipalities that were started in this country. Belgaum Municipality was started in 1851. Then Athani Municipality was started in 1853. Belgaum is, in a way, responsible for the 1850 Act. Here is a book, 'Local Self Government in India, Pakistan and Burma' written by Mr. Tinker. He says on page 29 "Experience in Belgaum from 1848 seems to demonstrate that people will be willing to pay taxes for municipal improvements. This encouraged the Government of India to provide a new measure, the Act 26 of 1850." This Act established municipal institutions in this country. Bombay Province was far ahead of other provinces in the country. By 1858, in Bombay province, there were 352 municipal institutions. In the old Mysore State the first municipal institutions started as an experiment in 1862.

[MR. CHAIRMAN (SRI SIDDIAH KASHIMUTT) in the Chair.]

Sir, generally, the policy of the British Government, even the policy of the Imperialist Government, was to encourage the Local-Self Government and transfer more and more power to them by instalments. Step by step, they gave, as time passed, more power to the Municipal

(SRI B. R. SUNTHANKAR)

bodies. In the beginning there was an official dominance, but it grew less and less. The then Viceroy, Lord Rippon recognised these institutions as means of popular education. The policy of the British Government was that the control should be from without and not from within. The 1918 resolution of the British Government at that time was to lay emphasis on outside control. The famous 1918 resolution said :

> "The local bodies should be as representative as possible of the people whose affairs they are called on to administer, that their authority in the matters entrusted to them should be real and not nominal, and that they should not be subjected to unnecessary control but should learn by making mistakes and profiting by them.

That was the liberal policy that was adopted even by the foreign British rulers. I do not want to go into all the history of the development of the Local-Self Government. Step by step, these Municipalities obtained more and more power. After the Congress Government came in power in Bombay, the first thing that they did was to ablish all nominations in the Municipalities. In 1938, all the nominations in the then Bombay province in all the Municipalities was totally abolished and from that time there are no nominations at all in the Municipal bodies. Here, this Bill is introducing again after 25 years this principle of nominations and appointments. That is why I say that this Bill is not keeping with the progressive policy and the democratic traditions. Bombay Act was, in a way, a culmination of the process of this long tradition of Local-Self Government. I had accomplished a sort of balance between the Local-Self Government and the control by the Government. Sir, the old Mysore State, I have got to say, was backward in the Local-Self Government. Unfortunately, by this reorganisation, we are tagged on to a policy, to an administration, having a retrograde policy in the matter of Local-Self Government. This is one of the evil consequences of the re-organisation.

This Bill eliminates the distinction between City and Town Municipalities. There is practically no difference between a City and a Town Municipality, except in minor details just like, a Town Municipality may have a Vice-President or not. The only difference is to suit the convenience of the administration. The Deputy Commissioner will be responsible for City Municipalities and the Assistant Commissioner will be responsible for Town Municipalities. Only to suit the convenience of the officers, there is that much distinction. The City Municipalities, as I have already said, in the Bombay area had wider powers These powers are snatched away by this new Bill. One more sinister aspect of the Bill is about the language of the Municipalities. This Bill, in the present form, will be a severe blow to the Marathi population in the border areas, because by certain clauses Kannada is being imposed upon our Municipalities. In Belgaum Municipality, the official language has been

since the beginning Marathi. But, here, under clauses 11, 53 and 66, Kannada will be imposed on our Municipalities. The proclamation under Clause 11 will be in Kannada. Similarly, under Clause 53, the minutes of proceedings will have to be maintained in Kannada. Similarly, under Clause 66, the proceedings of the Committees will have to ba maintained in Kannada. That means the official language of the Belgaum Municipality will be in Kannada, and that is why we say this is the imposition of Kannada on Marathi areas.

SRI GANJI VEERAPPA.—Does it mean that the official language in the State varies from District to District?

SRI B. R. SUNTHANKAR.— In border areas, Govenment will have to adopt a different policy. We want to go back to Maharashtra, but you are forcing us to stay here and impose Kannada on us. That will make topsyturvy. If you change the language, it will upset the whole thing. I request the Government and I request particularly the Hon'ble Minister that he should make allowances for the Municipalities in the Marathi border areas. Belgaum Municipality and Nippani Municipality are having Marathi as official language from the beginning. Marathi should be maintained as it is, it should be retained as it is.

Then, about the constitution of the Municipal councils. In clause 13 of the Bill the number of Councillors has been given from 15 to 31. I do not understand on what basis this principle is fixed. There is no proper basis, there is no reason or rhyme in fixing this number, not even on population. For the first 20,000 population, there will be 15 members, for the next 10,000, there will be 19 members, for the next 10,000, there will be an addition of only two; Similarly, for the next 10,000, there will be an addition of 4, again for the next 10,000, there will be an addition of only 2, and for the next 50,000, there will be an addition of only 4. There is no proper basis, it is *ad hoc* basis, and this number 31 is quite small. Belgaum Municipality, at present, has 44 members. Even under Montegue-Chelmsford Reforms, we had 33 members. So, our representation of the peop e is being curtailed by this clause. Some State Governments had appointed Committees to enquire into the Local Self Government affairs. United Provinces had appointed one Committee and Bombay Government had appointed one Committee. United Province Committe had given the opinion that the number of members should vary from 20 to 120. There should be as wide representation as possible. Towns having a population of more than a lakh should be given more representation-it should be at least 50.

One more point. By restricting the number of Councillors, the minorities will suffer. I am not speaking of linguistic minorities; I am speaking of other minorities. There are several minorities the schelude castes also will suffer, because they will, get less number of seats. Some of the minorities may not get seats at all. The number of Councillors must be increased, essentially from the point of view of minorities.

The worst and obnoxious feature of this Bill is that there is Government interference in a variety of ways. A point was raised by Sri Ganji Veerappa about the dismissal of Government officers by these

(SRI B. R. SUNTHANKAR)

bodies. In Bombay area, the Chief Officers and other officers are appointed by the municipalities; it is the privilege of the municipality to appoint the officers. But according to the Bill, Government will appoint their own officers. So there will be Government officers. I do not understand why there is the necessity of imposing Government officers on the local self-government. In Bombay area the municipalities have been appointing their own officers for the last 35 years and the system has worked very well; there is no defect found. I do not understand why this system should be changed and if at all such officers are appointed, the municipalities should have power to dismiss them if they misbehave.

There are so many clauses where there is interference of Government in so many matters. Clauses 14, 19, 42, 71 (5), 81, 102, 262 B and C, 272, 299, 303, 304 and 311. In so many matters there is unnecessary interference by Government. This interference is not at all envisaged in the Bombay Act. This interference is reducing the local self government to a mockery. The role that Government is assuming by this interference is just like a wicked mother-in-law keeping constant watch and vigilance on her daughter-in-law to find fault with her and to herass her. That is the role that Government is playing by this Bill. There should be least interference by Government. The local self-governing institutions should be given the fullest possible liberty. They should be controlled, but that control should be from without and not from within. As the famous Resolution of 1918 says, let them learn by committing mistakes and profiting by mistakes. That should be the attitude. Mr. Sharma in his Book on "Local Self Government in India' has rightly said that municipalities must not be treated like school boys who must be asked to sit for examination to be promoted to the next higher class". By this bill the municipalities will be treated like school boys. There is one Section which will demote city municipalitics into town municipalities, just like demotion of a Government servant, just like a co-operative society being demoted from first class to second clast and from second to third class. Thank god, there is no provision thas the city municipality should be demoted into a village panchayat.

Under clause 14, Government obtains the power of nominating a councillor. Under clause 42, the President and Vice-President will be appointed by the Government. It gives power to the Deputy Commissioner and Assistant Commissioner to perform the duties of the municipality. Clause 19 gives power to Government to appoint a Special Officer to take charge of the Municipal Council. Clause 71 is very obnoxious. It requires the approval of Government for contracts above Rs. 10,000 or 15,000. It is very surprising that for entering into contract, the approval of Government is essential for small sums of Rs. 10,000 ar 15,000. If there is any opposition party in power in any municipality, the Deputy Commissioner or the Assistant Commissioner

will not allow the opposition party to function properly. The Municipality will not be able to work at all. Similarly, clause 81 (m) gives power to Government in the matter of octroi limits and granting license. Clause 102 gives power to Government to appoint an assessor. The assessment of house tax is at present done by the municipalities themselves. But now Government shall appoint an assessor to assess the house tax. Similraly, clause 159 provides for the establishment of Improvement Board which will be almost a Government nominated body. The Chairman will be appointed by Government. The Vice-President of the Council will be on that Board, but not the President. I do not understand why the President should not be represented on the Board. Under this Bill, the President is treated like a subordinate officer. Under clause 43, he will have to submit periodical reports to the Deputy Commissioner. There are so many encroachments. Similarly, this Bill gives wide powers to Government in the matter of municipal budgets. As a matter of fact, the Municipalities should have full control over their own budgets, but here in the matter of municipal budgets also there is interference by Government. The Deputy Commissioner has power to modify the budgets. There should be full budgetary control with these municipalities. Of course, audit and periodical inspection will be there; they ought to be there. In this respect I would like to quote from the Taxation Enquiry Commissions Report. The Taxation Enquiry Commission in its Report has rightly pointed out that "the role of State Governments is not merely a negative aspect, the prevention or misuse of powers, etc., by local bodies through audit and periodical examination, but it is a positive one, that is, active encouragement and development of local bodies." That should be the aim of Government. This Bill will go to a Select Committee. The Select Committee will have the very important task of improving upon the Bill. I wish they will improve upon this Bill to make the municipalities real local self-government institutions.

†ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಸ್ವಾಮಿ, ಈ ಪುರಸಭೆಗಳಿಗೆ ಸಂಬಂಧಪಟ್ಟ ಬಿಲ್ಲನ್ನು ಸ್ವಾಗತಿಸುತ್ತಾ, ಈ ಬಿಲ್ಲಿನ ಸಂಬಂಧವಾಗಿ ಒಂದೆರಡು ವಿಷಯಗಳನ್ನು ಮಾತನಾಡುವುದಕ್ಕೆ ನಿಂತಿದ್ದೇನೆ. ಪುರಸಭೆಗಳ ಆಡಳಿತದಲ್ಲಿ ಒಳ್ಳೆಯ ಅನುಭವ ಹೊಂದಿರತಕ್ಕ ಸಚಿವರೂ ಮತ್ತು ಉಪಸಚಿವರೂ ತಮ್ಮ ಅನುಭವಗಳನ್ನೆಲ್ಲ ಕ್ರೋಢೀಕರಿಸಿ ಈ ಒಂದು ಬಿಲ್ಲನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅನೇಕ ಮಾನ್ಯ ಸದಸ್ಯರು ಮಾತನಾಡತಕ್ಕ ಕಾಲದಲ್ಲಿ ಈ ಬಿಲ್ಲಿನಲ್ಲಿ ಸರ್ಕಾರದವರು ಇಟ್ಟುಕೊಂಡಿರತಕ್ಕ ಅಧಿಕಾರವ್ಯಾಪ್ತಿಯ ಬಗ್ಗೆ ಬಹಳ ಶಂಕೆ ಪಟ್ಟರು. ನನಗಾದರೋ ಈ ಅಧಿಕಾರ ಒಂದೊಂದು ಸಂದರ್ಭದಲ್ಲಿ ಅವರಿಗೂ ಇರುವುದು ಒಳ್ಳೆಯದೆಂದೆನಿಸುತ್ತದೆ. ಏಕೆಂದರೆ ಈ ಅಧಿಕಾರ ಇಲ್ಲದೆ ಹೋದರೆ ಪುರಸಭೆಗಳ ಆಡಳಿತ ಸ್ವೇಚ್ಛೆಯಾಗಿ ನಡೆಯುವುದಕ್ಕೆ ಷುರುವಾದಾಗ ಸರ್ಕಾರ ಮಧ್ಯೆ ಪ್ರವೇಶ ಮಾಡದಿದ್ದರೆ, ಆ ಪುರಸಭೆಯ ಪರಿಮಿತಿಯಲ್ಲಿರತಕ್ಕ ಜನತೆಗೆ ನಿಜವಾಗಿಯೂ ಸರಿಯಾದ ಸೌಲಭ್ಯ ದೊರೆಯುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಕೆಲವು ಮುನಿಸಿಪಾಲಿಟಿಗಳ ಆಡಳಿತ ಬಹಳಮಟ್ಟಿಗೆ ಕೆಟ್ಟುಹೋಗಿವೆ. ಈಗಾಗಲೇ ಅನೇಕರು ಹಾಸನ ಪೌರಸಭೆಯ ಬಗ್ಗೆ ಮಾತನಾಡುತ್ತ ಅಲ್ಲಿ ಆಗಿರತಕ್ಕ ಡಿಫಾಲ್‌ಕೇಷನ್ ಬಗ್ಗೆ ಚರ್ಚೆ ಮಾಡಿದ್ದಾರೆ. ಆ ವಿಷಯದಲ್ಲಿ ನಾನು ಹೆಚ್ಚಿಗೆ ಹೇಳದ್ದರೂ ಕೂಡ ಅಂಥ ಸಂದರ್ಭದಲ್ಲಿ ಸರ್ಕಾರಕ್ಕೆ ಅಧಿಕಾರವಿಲ್ಲದೆ ಹೋದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಅಧಿಕಾರವನ್ನು ಒಳ್ಳೆಯದಕ್ಕೆ ಉಪಯೋಗಿಸಬೇಕೇ ಹೊರತು ಮನಸ್ಸು ಬಂದಂತೆ ಉಪಯೋಗಿಸಬಾರದು. ಯಾವ ಸಂದರ್ಭದಲ್ಲಿ ಉಪಯೋಗಿಸಬೇಕು ಯಾವ ಸಂದರ್ಭದಲ್ಲಿ ಉಪಯೋಗಿಸಬಾರದು ಎಂಬ ವಿವೇಚನಾ ಶಕ್ತಿಯಿಂದ ವಿಚಾರಮಾಡಿ ಕೆಲಸಮಾಡಿದರೆ ಯಾರಿಗೂ ತೊಂದರೆಯಾಗುವುದಿಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ

(ಶ್ರೀ ಎಚ್. ಡಿ. ದೇವೇಗೌಡ)

ನನಗೆ ತಿಳಿದಿರತಕ್ಕ ಒಂದು ಸಂದರ್ಭವನ್ನು, ಸನ್ನಿವೇಶವನ್ನು, ತಮ್ಮ ಮುಂದೆ ಇಡುವುದಾದರೆ ಈ ಅಧಿಕಾರ ದುರುಪಯೋಗವಾಗಿಬಿಟ್ಟರೆ, ರಾಜಕೀಯಕ್ಕಾಗಿ ಉಪಯೋಗಿಸಿಕೊಳ್ಳುವುದಾದರೆ ಇದರಿಂದ ಬಹಳ ಅಪಘಾತವಾಗುತ್ತದೆ. ಅದಕ್ಕಾಗಿ ಬಹಳ ಕಳವಳಪಡಬೇಕಾಗುತ್ತದೆ. ಎಲ್ಲಾದರೂ ಒಂದು ಪುರಸಭೆಯನ್ನು ಸೂಪರ್‌ಸೀಡ್ ಮಾಡತಕ್ಕ ಸಂದರ್ಭದಲ್ಲಿ ಅಲ್ಲಿನ ಅಧಿಕಾರಿಗಳನ್ನು ಕರೆಸಿ ರಿಪೋರ್ಟನ್ನು ಬರೆಸಿದರು ಎಂಬ ವರ್ತಮಾನ ಬಂದಿದೆ. ಇದು ಮಂತ್ರಿಗಳಿಗೆ ಸಂಬಂಧಪಡುವುದಿಲ್ಲ ಏಕೆ ಹೇಳುತ್ತೇನೆ ಎಂದರೆ ಇದರಿಂದ ರಾಜಕೀಯ ದ್ವೇಷ ತೀರಿಸಿಕೊಳ್ಳುವುದಕ್ಕೆ ಅಧಿಕಾರ ದುರುಪಯೋಗವಾಗಬಾರದು. ಆ ರೀತಿ ಆದರೆ ಕಳವಳಪಡಬೇಕಾಗುತ್ತದೆ. ಒಳ್ಳೆಯದಕ್ಕೆ ಉಪಯೋಗಿಸಿದರೆ ಅದರಬಗ್ಗೆ ಶಂಕೆ ಪಡಬೇಕಾಗಿಲ್ಲ. ಇದು ನನ್ನ ವೈಯುಕ್ತಿಕಾಭಿಪ್ರಾಯ.

5-30 P.M.

13ನೇ ಕ್ಲಾಜಿನಲ್ಲಿ ಒಂದು ಲಕ್ಷ ಜನಸಂಖ್ಯೆಗೆ ಮೇಲ್ಪಟ್ಟಿದ್ದರೆ 31 ಜನ ಸದಸ್ಯರಿರಬೇಕೆಂದು ಹೇಳಿದ್ದಾರೆ. 4 ಲಕ್ಷ ಜನರಿದ್ದರೆ ಎಷ್ಟು ಜನ ಸದಸ್ಯರಿರಬೇಕೆಂಬುದನ್ನು ಹೇಳಿಲ್ಲ. ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಪರಿಶೀಲನೆ ಮಾಡಿ ಇದರ ಬಗ್ಗೆ ಒಂದು ಪರಿಮಿತಿ ಹಾಕುವುದು ಒಳ್ಳೆಯದು ಎಂದು ಹೇಳುತ್ತೇನೆ.

ಎಷ್ಟು ಜನಸಂಖ್ಯೆಯಿದ್ದರೆ ಕಾರ್ಪೋರೇಷನ್ ಮಾಡಬಹುದು ಎನ್ನುವುದನ್ನೂ ಕೂಡ ಇದರಲ್ಲಿ ಸ್ಪಷ್ಟಪಡಿಸಿಲ್ಲ. ಈ ವಿಚಾರವನ್ನೂ ಸಹ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಪರಿಶೀಲನೆಮಾಡಿ ಈ ಬಗ್ಗೆ ಒಂದು ಪ್ರಾವಿಜನ್ನನ್ನೂ ಇದರಲ್ಲಿ ಅಳವಡಿಸುವುದು ಸೂಕ್ತ ಎಂದು ನನಗೆ ಅನ್ನಿಸುತ್ತಿದೆ.

ಶ್ರೀ ಟಿ. ಮಾದಯ್ಯಗೌಡರು ಪುರಸಭಾಧ್ಯಕ್ಷರ ಚುನಾವಣಾವೈಖರಿಯನ್ನು ಬಹಳ ಚೆನ್ನಾಗಿ ಹೇಳಿದರು. ನಿಜವಾಗಿಯೂ ಹೇಳುವುದಾದರೆ ಪುರಸಭೆಯ ಆಡಳಿತವನ್ನು ಕೆಳದರ್ಜೆಗೆ ಎಳೆಯುವುದಕ್ಕೆ ಅಧ್ಯಕ್ಷರ ಚುನಾವಣೆಯ ಕಾಲದಲ್ಲಿ ಆಗತಕ್ಕ ಅನೀತಿಯೇ ಮುಖ್ಯವಾದ ಕಾರಣ ಎಂದು ಹೇಳುವುದನ್ನು ನಾನು ಖಂಡಿತವಾಗಿಯೂ ಒಪ್ಪುತ್ತೇನೆ. ಪುರಸಭೆಯ ಅಧ್ಯಕ್ಷರನ್ನು ಚುನಾವಣೆ ಮಾಡುವ ಅನುಭವ ತಮಗಿದೆ. ನಾನು ಹೇಳಬೇಕಾದ್ದಿಲ್ಲ. ದುಡ್ಡಿರತಕ್ಕವನು ಸದಸ್ಯರನ್ನು ಕೊಂಡು ಕೊಂಡು ಜಾಲಿಡ್ರೈವ್ ಹೋಗುವುದು ಇತ್ಯಾದಿ ಅನೀತಿಯುತವಾದ ವ್ಯವಹಾರಕ್ಕೆ ಕೈಹಾಕಿ ಅಧ್ಯಕ್ಷತನ ಗಳಿಸುವುದನ್ನು ತಡೆಗಟ್ಟಬೇಕಾದರೆ ಉತ್ತಮ ವ್ಯಕ್ತಿಯನ್ನು ಜನ ಆರಿಸಬೇಕಾಗಿದ್ದರೆ ನೇರವಾದ ಚುನಾವಣೆಯಲ್ಲಿ ಅಧ್ಯಕ್ಷರಾಗಿಬರಲು ಅವಕಾಶ ಮಾಡಿ ಕೊಡಬೇಕಾದುದು ಸರ್ಕಾರದ ಕರ್ತವ್ಯ. ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಒಂದು ತಿದ್ದುಪಡಿ ಮುಖೇನ ಇದನ್ನು ಸೂಚಿಸಿ ಈ ಒಂದು ಅವಕಾಶ ಮಾಡಿಕೊಡಬೇಕೆಂದು ನಾನು ಸಲಹೆಮಾಡುತ್ತೇನೆ. ಜಾಯಿಂಟ ಸೆಲೆಕ್ಟ್ ಕಮಿಟಿಯವರು ಒಂದು ತಿದ್ದುಪಡಿ ಮುಖೇನ ಇದನ್ನು ಸೂಚಿಸಿ ಈ ಒಂದು ಅವಾಕಾಶ ಮಾಡಿಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಶ್ರೀಮಾನ್ ಶ್ರೀನಿವಾಸನಾಯಕ ಅವರು, ಎಂ.ಎಲ್.ಎ. ಮತ್ತು ಎಂ.ಎಲ್.ಸಿ. ಗಳನ್ನು ಎಕ್ಸ್‌ಫಿಷಿಯೋ ಮೆಂಬರುಗಳಾಗಿರಲು ಅವಕಾಶವಿರಬೇಕೆಂದು ಹೇಳಿದರು. ನನಗೆ ತಿಳಿದಮಟ್ಟಿಗೆ ಇದರ ಅವಶ್ಯಕತೆ ಬಹಳವಾಗಿದೆ. ಅವರ ಅಭಿಪ್ರಾಯಕ್ಕೆ ನಾನು ಪೂರ್ಣ ಬೆಂಬಲ ಕೊಡುತ್ತೇನೆ. ಇದಕ್ಕೆ ಕಾರಣ ಇಷ್ಟೆ. ಅಸೆಂಬ್ಲಿಗೆ ಚುನಾಯಿತರಾಗಿ ಬಂದ ಸದಸ್ಯರು ಪುರಸಭೆಯ ಆಡಳಿತದಲ್ಲಿ ನೆರವು ಕೊಡವುದಕ್ಕೆ ಯಾವುದೆ ತರಹ ಅವಕಾಶವಿಲ್ಲ. ಒಂದು ಉದಾರಣೆ ಹೇಳುವುದಾದರೆ ಹೊಳೇನರಸಿಪುರ ತಾಲ್ಲೂಕಿನ ಪುರಸಭೆಯ ಪರಿಮಿತಿಯೊಳಗೆ ಜನರಲ್ ಹಾಸ್ಪಲಿಗೆ ಒಂದು ಸೈಟ್ ಕೊಡಿಸಿ ಎಂದು ಅಲ್ಲಿನ ಜನ ನಮ್ಮ ಹತ್ತಿರ ಬಂದು ಹೇಳುತ್ತಾರೆ. ಅಗ ನಮಗೆ ಯಾವರೀತಿಯಲ್ಲೂ ಅಲ್ಲಿ ನಮ್ಮ ಅಭಿಪ್ರಾಯವನ್ನು ತಿಳಿಸುವುದಕ್ಕೆ ಅವಕಾಶವಿಲ್ಲ ಆದ್ದರಿಂದ ಈಗಲೂ ಕಾಲ ಮೀರಿಲ್ಲ, ಇದಕ್ಕೆ ಒಂದು ಪ್ರಾವಿಜನ್ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಒಳ್ಳೆಯದು. ಈಗ ನಾವು ತಾಲ್ಲೂಕು ಬೋರ್ಡಿನಲ್ಲಿ ಎಕ್ಸ್-ಅಫಿಷಿಯೋ ಮೆಂಬರುಗಳಾಗಿದ್ದೇವೆ. ಅದೇ ರೀತಿ ಮುನಿಸಿಪಾಲಿಟಿಗಳಲ್ಲೂ ಎಂ. ಎಲ್. ಎ. ಮತ್ತು ಎಂ. ಎಲ್. ಸಿ. ಗಳಿಗೂ ಪ್ರಾತಿನಿಧ್ಯ ಇದ್ದರೆ ಒಳ್ಳೆಯದು ಎಂತ ನನ್ನ ವೈಯುಕ್ತಿಕಾಭಿಪ್ರಾಯ. ಇದನ್ನು ಮಂತ್ರಿಗಳು ಗಮನಿಸಬೇಕೆಂದು ಹೇಳುತ್ತೇನೆ. ಜೊತೆಗೆ ಈ ಲೋಕಲ್ ಸೆಲ್ಫ್ ಇನ್‌ಸ್ಟಿಟ್ಯೂಷನ್‌ಗಳಿಗೆ ಚುನಾವಣೆಗಳಲ್ಲಿ ಗೆದ್ದು ಬಂದಂಥ ಸದಸ್ಯರುಗಳಿಗೆ ಈ ಒಂದು ಅವಕಾಶವಿಲ್ಲವೆಂದರೆ ನನಗಂತೂ ಇದು ಅರ್ಥವಾಗುತ್ತಿಲ್ಲ. ಇದರ ಬಗ್ಗೆ ಮತ್ತೊಮ್ಮೆ ಕೂಲಂಕಷವಾಗಿ ಪರಿಶೀಲನೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಕ್ಲಾಜ್ 300 ರಲ್ಲಿ ಈ ಮುನಿಸಿಪಾಲಿಟಿಗಳನ್ನು ಸೂಪರ್‌ಸೀಡ್ ಮಾಡತಕ್ಕ ವಿಚಾರವನ್ನು ಹೇಳಿದ್ದಾರೆ. ಕೆಲವು ಸಂದರ್ಭಗಳಲ್ಲಿ ಆಡಳಿತವನ್ನು ಸರಿಯಾಗಿ ನಡೆಸದೆ ಮತ್ತು ಈ ಸಂಸ್ಥೆ ತನ್ನ ಕೆಲಸ ಕಾರ್ಯಗಳನ್ನು ನಡೆಸುವುದಕ್ಕೆ ಸಾಧ್ಯವಿಲ್ಲದೆ ಇದ್ದ ಸಂದರ್ಭಗಳಲ್ಲಿ ಅವರನ್ನು ಕೈಬಿಡಲೇ

ಬೇಕಾಗುತ್ತದೆ. ಆದರೆ ಹೀಗೆ ಸುಮ್ಮನೆ ಒಂದು ಕ್ಲಾಜನ್ನು ಹಾಕಿದರೇನೂ ಪ್ರಯೋಜನವಾಗುವುದಿಲ್ಲ. ಇಂಥ ಕ್ಲಾಜಿಗೆ ಗೌರವ ತೋರಿಸಬೇಕೆಂಬ ಇರಾದೆಯಿದ್ದರೆ ಮಾತ್ರ ಇಂಥ ಕ್ಲಾಜನ್ನು ಸೇರಿಸಬಹುದು. ಯಾವ ಪಾರ್ಟಿಯೇ ಅಧಿಕಾರದಲ್ಲಿರಲಿ ಸರ್ಕಾರದವರು ಘಂಟಾಘೋಷವಾಗಿ ಈ ಕ್ಲಾಜನ್ನು ಕಾರ್ಯಗತಮಾಡಬೇಕು. ಆದರೆ ಹಾಗೆ ಮಾಡದೆ ಈ ಕ್ಲಾಜನ್ನು ಕೇವಲ ಒಂದು ರಾಜಕೀಯ ಕಕ್ಕಾಗಿ ಇಟ್ಟುಕೊಂಡಿದ್ದರೆ ಇದರಿಂದ ಖಂಡಿತ ಏನೂ ಪ್ರಯೋಜನವಾಗುವುದಿಲ್ಲ ಅಂತ ಹೇಳುತ್ತೇನೆ. ಯಾವ ಒಂದು ಮುನಿಸಿಪಾಲಿಟಿಯೇ ಆಗಲೀ ಅದು ಸರಿಯಾಗಿ ತನ್ನ ಕೆಲಸ ಕಾರ್ಯಗಳನ್ನು ಮಾಡುತ್ತಿಲ್ಲವೆಂಬುದಾಗಿ ಕಂಡು ಬಂದರೆ ಅದನ್ನು ಕೂಡಲೆ ಅಂಥಾ ಸಂದರ್ಭಗಳಲ್ಲಿ ಈ ಕ್ಲಾಜನ್ನು ಇಂಪ್ಲಿಮೆಂಟ್ ಮಾಡಬೇಕೆಂಬುದಾಗಿ ನಾನು ಒತ್ತಾಯಮಾಡಿ ಹೇಳುತ್ತೇನೆ. ಈಗಾಗಲೇ ಈ ವಾಟರ್-ಸಪ್ಲೈ ವಿಚಾರವಾಗಿ ಶ್ರೀ ಮಾದಪ್ಪ ಗೌಡರು ಏನು ಹೇಳಿದರೋ ಅದಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ. ಈ ನೀರು ಸರಬರಾಯಿ ಕೆಲಸವನ್ನು ಮುನಿಸಿಪಾಲಿಟಿಗೆ ವಹಿಸಿದ್ದಾಗ ಅದಕ್ಕೆ ಆ ಕೆಲಸಮಾಡಲು ಶಕ್ತಿಯಿಲ್ಲವೆಂಬುದಾಗಿ ಕಂಡುಬಂದಾಗ ಅಂಥ ಸಂಸ್ಥೆಗಳಿಗೆ ಸರ್ಕಾರದವರು ಪೂರ್ತಿ ಸಹಾಯ ನೀಡಬೇಕೆಂದು ಹೇಳಿದರು. ಅದಕ್ಕೆ ನಾನೂ ಸಂಪೂರ್ಣ ಬೆಂಬಲ ಕೊಡುತ್ತೇನೆ. ಮೊನ್ನೆತಾನೇ ಇದೇ ಸಭೆಯಲ್ಲಿ ನಾನು ಈ ಕುಡಿಯುವ ನೀರಿನ ಸರಬರಾಯಿ ವಿಚಾರವಾಗಿ ಕಳುಹಿಸಿದ್ದ ಒಂದು ಪ್ರಶ್ನೆ ಇಲ್ಲಿ ಚರ್ಚೆಯಾಗುತ್ತಿದ್ದಾಗ ಈ ಕುಡಿಯುವ ನೀರನ್ನು ಒದಗಿಸತಕ್ಕ ಕರ್ತವ್ಯ ಮುನಿಸಿಪಾಲಿಟಿಯವರದು ಅಂತ ಮಂತ್ರಿಗಳು ಉತ್ತರ ಕೊಟ್ಟರು. ಆದರೆ ಅಂಥಾ ಮುನಿಸಿಪ್ಯಾಲಿಟಿಯಲ್ಲಿ ಹಣಕಾಸಿನ ಪರಿಸ್ಥಿತಿ ಕೆಟ್ಟಿದ್ದರೆ ಅಥವಾ ಅದಕ್ಕೆ ಶಕ್ತಿಯಿಲ್ಲದಿದ್ದರೆ ಅಂಥಾ ಸನ್ನಿವೇಶಗಳಲ್ಲಿ ಸರ್ಕಾರದವರು ಅದರ ವೆಚ್ಚದಲ್ಲಿ ಅರ್ಧ ಭಾಗವನ್ನು ಅಂದರೆ ಶೇಕಡ 50ನ್ನು ಗ್ರಾಂಟ್ ರೂಪದಲ್ಲಿ ಕೊಡತಕ್ಕದ್ದು ಯುಕ್ತವಾದುದೆಂದು ಹೇಳುತ್ತೇನೆ. ಈ ಹಿಂದೆ ಈ ನೀರು ಸರಬರಾಯಿ ವ್ಯವಸ್ಥೆಯನ್ನು P.W.D. ಅವರು ನಡೆಸುತ್ತಿದ್ದರು. ಈಗಲೂ ಅದರಂತೆ ಏಕೆ ಮಾಡಬಾರದು? ಇಲ್ಲವೇ ಪೌರಸಭೆಗಳಿಗೆ ಈ ನೀರು ಸರಬರಾಯಿ ವ್ಯವಸ್ಥೆಯ ಬಗ್ಗೆ ಒಂದು ಗ್ರಾಂಟನ್ನಾದರೂ ಕೊಡಲೇ ಬೇಕೆಂತ ಹೇಳುತ್ತೇನೆ.

ಇನ್ನು ಈ ಮುನಿಸಿಪಾಲಿಟಿಗಳ ವಶದಲ್ಲಿರತಕ್ಕ ಆಸ್ತಿಗಳನ್ನು—ಪ್ರಾಪರ್ಟಿಗಳನ್ನು ಒಂದು ಸರಿಯಾದ ರೀತಿಯಲ್ಲಿ ಕಾಪಾಡಲು ವ್ಯವಸ್ಥೆಯಿರಬೇಕು. ಈ ಪ್ರಾಪರ್ಟಿಗಳನ್ನು ಈಗ ಈ ಕೌನ್ಸಿಲ್ಲರುಗಳು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಮುನಿಸಿಪಲ್ ವೆಹಿಕಲ್ಸ್ ಹಾಗೂ ಈ ಕಾಂಪೋಸ್ಟ್‌ಗೊಬ್ಬರಗಳ ವಿಚಾರದಲ್ಲಿ ಬಹಳ ಅಕ್ರಮ ನಡವಳಿಕೆಗಳು ನಡೆಯುತ್ತಿವೆ. ಇವುಗಳನ್ನು ನ್ಯಾಯವಾದ ರೀತಿಯಲ್ಲಿ ಉಪಯೋಗಮಾಡುತ್ತಿಲ್ಲ. ಸರ್ಕಾರದವರು ಈ ವಿಚಾರದಲ್ಲಿ ತಕ್ಕ ಬಂದೋಬಸ್ತು ಮಾಡಬೇಕೆಂದು ಹೇಳುತ್ತೇನೆ. ಸೆಲೆಕ್ಟ್ ಕಮಿಟಿಯವರು ಈ ವಿಚಾರವನ್ನು ಕೂಲಂಕಷವಾಗಿ ವಿಮರ್ಶೆ ಮಾಡಬೇಕಾಗಿದೆ—ಇದಕ್ಕೊಂದು ಸೂಕ್ತ ವ್ಯವಸ್ಥೆಯನ್ನು ಮಾಡುತ್ತಾರೆಂದು ನಾನು ನಂಬಿದ್ದೇನೆ. ಮೊನ್ನೆತಾನೆ ಹಾಸನದಲ್ಲಿ ಈ ಸಂಬಂಧದಲ್ಲೇ 18 ಸಾವಿರ ರೂ. ಗಳ ಡಿಫಾಲ್ಕೇಷನ್ ಆಗಿರತಕ್ಕ ವಿಚಾರ ತಮಗೆಲ್ಲರಿಗೂ ತಿಳಿದಿರತಕ್ಕದ್ದೇ ಆಗಿದೆ. ಆ ಸಂಸ್ಥೆಯ ಲೆಕ್ಕ ಪತ್ರಗಳು 1962ಕ್ಕೆ ಹಿಂದೆ ಯಾವತ್ತೂ ಆಡಿಟ್ಟೇ ಆಗಿಲ್ಲ. ಆದರೆ ಆ ಲೆಕ್ಕ ಪತ್ರಗಳ ಆಡಿಟ್ಟಿನಲ್ಲಿ ಇತ್ತೀಚೆಗೆ ಆಡಿಟರುಗಳೂ ಸಹ ಕೊಲೈಡ್ ಆಗಿರುತ್ತಾರೆಂಬುದಾಗಿ ಹೇಳುತ್ತಿದ್ದಾರೆ. ಹೀಗೆ ಹೆತ್ತತಾಯಿಯೇ ಮಕ್ಕಳಿಗೆ ವಿಷ ಹಾಕುವಂಥಾ ಪರಿಸ್ಥಿತಿ ಬಂದರೆ ನಾವೇನು ಹೇಳುವುದು ಇದೆ? ಯಾವತ್ತೂ ಈ ಆಡಿಟ್‌ಗೆ ಒಂದು ಸ್ಯಾಂಕ್ಟಿಟಿಯಿತ್ತು. ಅವರು ಪ್ರತಿಯೊಂದೂ ಲೋಪ ದೋಷಗಳನ್ನೂ ಎತ್ತಿಹಿಡಿಯುತ್ತಿದ್ದಾರೆಂಬ ನಂಬಿಕೆ ಜನರಲ್ಲಿತ್ತು. ಆದರೆ ಅಂಥಾ ಒಂದು ನಂಬಿಕೆ ಈ ದಿವಸ ಆಡಿಟ್ ವ್ಯವಸ್ಥೆಯಿಲ್ಲವೆಂದು ಧಾರಾಳವಾಗಿ ಹೇಳಬಹುದು. ಅಲ್ಲಿ ರಶೀದಿಗಳನ್ನೇ ಬದಲಾಯಿಸಿ ಬಿಟ್ಟಿದ್ದಾರೆ. ಅಲ್ಲಿರತಕ್ಕ ರಶೀದಿಗಳೇ ಬೇರೆ—ಪಾರ್ಟಿಗಳಿಗೆ ಕೊಟ್ಟಿರತಕ್ಕ ರಶೀದಿಗಳೇ ಬೇರೆ. ಹೀಗೆಲ್ಲ ಗೊಂದಲವಾಗಿ 18 ಸಾವಿರ ರೂ. ಗಳು ದುರುಪಯೋಗವಾಗಿ ಇಲ್ಲಿಗೆ ಆರು ವರ್ಷಗಳ ಮೇಲಾಗಿವೆ. ಕೆಲ—ಕೆಲವು ರಶೀದಿಗಳನ್ನೇ ಹಪಪ್ ಮಾಡಿದ್ದಾರೆ. ಹೀಗೇ ಈ ಮಸೂದೆಯಲ್ಲಿ ತಿದ್ದುಪಡಿಯಾಗತಕ್ಕ ವಿಚಾರಗಳು ಅನೇಕವಾಗಿವೆ. ಈ ಮಸೂದೆಯಲ್ಲಿ ಯಾವ ತರಹೆಯ ಲೋಪ ದೋಷಗಳಿರುವುದಕ್ಕೂ ಅವಕಾಶ ಕೊಡದಂತೆ ಸೆಲೆಕ್ಟ್ ಸಮಿತಿಯವರು ಇದನ್ನು ಸರಿಪಡಿಸಿ ಅದಷ್ಟು ಬೇಗ ಈ ಮಸೂದೆಯನ್ನು ಮತ್ತೆ ಈ ಸಭೆಯ ಮುಂದೆ ಬರುವಂತೆ ಮಾಡಬೇಕೆಂದು ಹೇಳಿ ನನಗಿಷ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅಧ್ಯಕ್ಷರೇ, ಈ ದಿವಸ ಈ ಗಜಗರ್ಭ ಇಂಥಾ ಒಂದು ಕೂಸನ್ನು ಪ್ರಸವ ಮಾಡಿದೆ. ಹನ್ನೆರಡು ವರ್ಷಗಳಕಾಲ ಈ ರಾಜ್ಯಕ್ಕೊಂದು ಸ್ಥಳೀಯ ಸಂಸ್ಥೆಗಳು ಆಡಳಿತ ನಡೆಸಲು ಒಂದು ಕಾನೂನನ್ನು ರಚಿಸತಕ್ಕ ಬಗ್ಗೆ ಸತತ ಪ್ರಯತ್ನಗಳು ನಡೆದು ಈ ಕಿವಿಯಿಲ್ಲದ, ಈ ಕಾಲಿಲ್ಲದ, ಈ ಸೊಂಟವಿಲ್ಲದ, ಈ ತಲೆಯಿಲ್ಲದ, ಈ ಒಂದು ಕೂಸು ಈಗ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಹುಟ್ಟಿಬಿಟ್ಟಿದೆ. ಈ ಕೂಸಿನ ರೂಪು ರೇಖೆಗಳನ್ನು ನೋಡಿದರೆ ಇದಕ್ಕೇನು ನಾಮಕರಣ ಮಾಡಬೇಕು, ಏನು ಹೆಸರಿಡಬೇಕು ಎಂಬ ಒಂದು ಭ್ರಮೆ ನನಗೆ ಈ ಪುಸ್ತಕ ಕೈಗೆ ಬಂದಾಗಿನಿಂದಲೂ ತೀರ್ಮಾನವಾಗದೆ ಇನ್ನೂ ಹಾಗೇ ಉಳಿದಿದೆ. ಪ್ರಥಮದಲ್ಲೇ ಈ ಮಸೂದಾಕಾನೂನಿನ ಪುಸ್ತಕ ನಮ್ಮ ಕೈಗೆ ಬಂದಾಗಲೇ ಇದಕ್ಕೊಂದು ವಿಚಿತ್ರ ಆಕಾರ! ಸಾಲದ್ದಕ್ಕೆ ಇದರಲ್ಲಿರತಕ್ಕ ವಾಕ್ಯಗಳು ಕೂಡ ಅರ್ಥಮರ್ಥ ಆಗಿವೆ. ಅರ್ಧ ವಾಕ್ಯ ಕಟ್ಟಾಗಿದೆ, ಇನ್ನರ್ಧ ಹೊಲಿಗೆಯಲ್ಲಿ ಮುಚ್ಚಿ ಹೋಗಿದೆ. ನಮ್ಮ ಸರ್ಕಾರದಲ್ಲಿ ಈ ಕಾಗದಕ್ಕೂ ಇಷ್ಟು ಬರಗಾಲ ಬಂತೇ! ಮಂತ್ರಿಗಳ ಉಪ ಮಂತ್ರಿಗಳ ಸಂಬಳ ಸಾರಿಗೆ ಬಿಲ್ಲುಗಳಿಗೆಲ್ಲ ಅಂದ ಚಂದವಾದ ಕಾಗದ ಬೇಕಾದಷ್ಟಿದೆ. ಆದರೆ ಇಡೀ ರಾಜ್ಯದಲ್ಲಿರತಕ್ಕ ಸ್ಥಳೀಯ ಸಂಸ್ಥೆಗಳ ಆಡಳಿತಕ್ಕೆ ಸಂಬಂಧಪಟ್ಟಂಥ ಒಂದು ಕಾನೂನನ್ನು ರಚಿಸಿ, ಅದನ್ನು ಶಾಶನಕಡತಕ್ಕೇರಿಸಬೇಕೆಂದರೆ ಕಾಗದವಿಲ್ಲ! ನಾನು ಈ ಹಿಂದೆ ಹುಡುಗನಾಗಿದ್ದಾಗ ನಮ್ಮ ತಾಲ್ಲೂಕಿನಲ್ಲಿ ನಾನು ಪ್ರೈಮರಿ ಶಾಲೆಯಲ್ಲಿ ಓದುತ್ತಿದ್ದಾಗ ನನಗೆ ಇಂಥಾ ಪುಸ್ತಕಗಳನ್ನು ರಫ್ ನೋಟಿಗೆ ಕೊಡುತ್ತಿದ್ದರು. ಆ ರಫ್‌ನೋಟ್ ಪುಸ್ತಕವಿದ್ದಹಾಗಿದೆ ಈ ದಿವಸ ನಮಗೆ ಒದಗಿಸಿರತಕ್ಕ ಈ ಬಿಲ್ ಪುಸ್ತಕ. ಸ್ಥಳೀಯ ಸಂಸ್ಥೆಗಳ ಮಂತ್ರಿಗಳಿಗೆ ಈ ವಿಚಾರಕ್ಕೆ ಸಾಕಷ್ಟು ನಿಗಾ ಕೊಡಲು ಅವರಿಗೆ ಅವಕಾಶವಿರಲಿಲ್ಲವೇನೋ ಪಾಪ! ಏನೇ ಆಗಲಿ ಈ ದಿವಸ ಈ ಪುಸ್ತಕವನ್ನು ಹೀಗೇ ಪ್ರಿಂಟ್‌ಮಾಡಿಸಿ ಇಂಥಾ ಒಂದು ವಿಚಿತ್ರರೀತಿಯಲ್ಲಿ ಒದಗಿಸಿರುವುದನ್ನು ನೋಡಿ ನಮ್ಮ ಅವಸ್ಥೆ ಈ ಮಟ್ಟಕ್ಕಿಳೀತಲ್ಲಾ ಎಂಬುದನ್ನು ನೋಡಿ ನನಗಂತೂ ಬಹಳ ಸಂಕಟವಾಗುತ್ತದೆ. ಅಕ್ಷರಗಳನ್ನೇ ನುಂಗಿ ಹಾಕಿಬಿಟ್ಟಿದ್ದಾರೆ. ಮೇಲಾಗಿ ಇಲ್ಲಿರತಕ್ಕ ಅನೇಕ ಮಾನ್ಯ ಸದಸ್ಯರಿಗೆ ಇಂಗ್ಲೀಷ್ ಬರುವುದಿಲ್ಲ. ಈಗಾಗಲೇ ಮಾತನಾಡಿದ ಶ್ರೀ ಜೆ. ದೇವಯ್ಯನವರು ನನಗೆ ಕಂಡಹಾಗೆ ಅವರು ಈ ಬಿಲ್ಲಿನ ಮೇಲೆ ಮಾತನ್ನೇ ಆಡಲಿಲ್ಲ. ಕಾರಣ ಅವರಿಗೆ ಇಂಗ್ಲೀಷಿನಲ್ಲಿ ಈ ಬಿಲ್ಲಿರುವುದರಿಂದ ಏನೂ ಅವರಿಗೆ ಅರ್ಥವಾಗದೆ ಅವರು ಏನೋ ಹೇಳಿಬಿಟ್ಟರು. ಇದಕ್ಕೆ ಬದಲು ಈಗ ಈ ಬಿಲ್ಲನ್ನು ಕನ್ನಡದಲ್ಲಿ ಪ್ರಿಂಟ್ ಮಾಡಿಸಿದ್ದರೆ ಅನೇಕರಿಗೆ ಈ ಚರ್ಚೆಯಲ್ಲಿ ಭಾಗವಹಿಸಲು ಅವಕಾಶವಾಗುತ್ತಿತ್ತು. ಈ ಮಸೂದೆಗಳನ್ನು ಕನ್ನಡದಲ್ಲಿ ಅಚ್ಚುಹಾಕಿಸಿ ಕೊಡಬೇಕೆಂದು ನಾವು ಮೊದಲಿಂದಲೂ ಕೇಳುತ್ತಲೇ ಬಂದಿದ್ದೇವೆ. ಸರ್ಕಾರದವರು ಮಾತೆತ್ತಿದರೆ ನಮ್ಮದು ಅಂಥಾ ನಾಡು, ಇಂಥಾ ನಾಡು, ಕನ್ನಡ ನಾಡು ಎಂತ ಹೇಳಿಕೊಳ್ಳುತ್ತಾರೆ. ಆದರೆ ಇಂಥ ಬೀಡಿನಲ್ಲಿ ಈ ಗೋಳಾಗಿದೆ! ಇಂಥ ವಿಧೇಯಕಗಳನ್ನು ಇನ್ನು ಮುಂದಾದರೂ ಈ ಸಭೆಯ ಮುಂದಿಡಬೇಕಾಗಿದ್ದರೆ ಕನ್ನಡದಲ್ಲಿ ಪ್ರಿಂಟ್ ಮಾಡಿಸಿ ಕೊಡಬೇಕೆಂದು ಹೇಳುತ್ತೇನೆ. ಕನ್ನಡಕ್ಕೆ ತರ್ಜುಮೆ ಮಾಡತಕ್ಕ ಜನರು ಸರ್ಕಾರದಲ್ಲಿಲ್ಲವೇನು? ಈ ಕನ್ನಡ ನಾಡಿನಲ್ಲಿ ಅಕ್ಕಮಹಾದೇವಿ, ಬಸವಣ್ಣನವರು, ಶಂಕರಾಚಾರ್ಯರು ಇಂಥವರೆಲ್ಲ ಹುಟ್ಟಿ ಬೆಳೆದರು. ಈ ದಿವಸ ಈ ಕನ್ನಡನಾಡಿಗೆ ಇಂಥಾ ಅಧೋಗತಿ; ಕನ್ನಡಕ್ಕೆ ಇಂಥಾ ಅಧೋಗತಿ ಬಂದಿತಲ್ಲಾ!

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀ ಶಂಕರಾಚಾರ್ಯರು ಹುಟ್ಟಿದ್ದು ಕೇರಳದಲ್ಲಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೆಳೆದದ್ದು-ಬಾಳಿದ್ದು ಎಲ್ಲ ಕನ್ನಡನಾಡಿನಲ್ಲಿ. ಆದರೆ ಇನ್ನು ಮುಂದೆ ಆದರೂ ಈ ಮಸೂದೆ ಸೆಲೆಕ್ಟ್ ಸಮಿತಿಯ ಮುಂದೆ ಹೋಗಿ ಮತ್ತೆ ಈ ಸಭೆಮುಂದೆ ಬರುವ ವೇಳೆಗಾದರೂ ಇದನ್ನು ಕನ್ನಡದಲ್ಲಿ ತರ್ಜುಮೆಮಾಡಿಸಿ, ಕನ್ನಡ ಪ್ರತಿಗಳನ್ನು ಸದಸ್ಯರಿಗೆ ಹಂಚುವಂತೆ ಮಾಡಬೇಕೆಂದು ನಾನು ಅಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಸ್ವಾಮಿ, ಇಂಥ ಕಾನೂನುಗಳನ್ನು ಮಾಡುವಾಗ ಸರ್ಕಾರದವರು ಬಹಳ ಎಚ್ಚರಿಕೆಯಿಂದಿರಬೇಕಾದುದು ಅವರ ಕರ್ತವ್ಯ. ಈ ದಿವಸ ಈ ಮಸೂದೆ ಯಾವ ಮಂತ್ರಿಗಳ ಖಾತೆಗೆ ಸೇರಿದೆಯೋ ಅವರು ಈ ಕಾನೂನನ್ನು ದೋಷರಹಿತವಾಗಿರುವಂತೆ ಮಾಡಬೇಕಾದ್ದು ಅವರ ಮುಖ್ಯ ಜವಾಬ್ದಾರಿಯಾಗಿದೆ. ಆದರೆ ಈ ಮಸೂದೆಯಲ್ಲಿ ಏನಿದೆ ಎಂಬುದನ್ನೆಲ್ಲ ಓದುವುದಕ್ಕೆ ಮಾನ್ಯ ಮಂತ್ರಿಗಳಿಗೆ ಪುರಸತ್ತು ಇರಲಿಲ್ಲ ಅಂತ ಕಾಣುತ್ತದೆ. ಈ ಮಸೂದೆಯಲ್ಲಿ ಬಹಳ ದೋಷಪೂರಿತವಾದಂಥಾ ವಿಷಯಗಳು ಅಡಕವಾಗಿವೆ. ಇಂಥಾ ಮಸೂದೆಯನ್ನು ನಾವೀದಿವಸ ಶಾಸನ ಕಡತಕ್ಕೇರಿಸಿ ಬಿಟ್ಟರೆ ಆ ಸ್ಥಳೀಯ ಸಂಸ್ಥೆಗಳು ಉಳಿಯುವುದಕ್ಕೆ ಅವಕಾಶವೇ ಇರುವುದಿಲ್ಲ. ಈ ವಿಚಾರದಲ್ಲಿ ನಾನೀಗ ಒಂದೇ ಒಂದು ಮಾತನ್ನು ಹೇಳುತ್ತೇನೆ:—ಈ ದಿವಸ ಈ ಸ್ಥಳೀಯ ಸಂಸ್ಥೆಗಳು ಅಸ್ತಿತ್ವಕ್ಕೆ ಬರಬೇಕಾಗಿದ್ದರೆ ಇಂಥಾ ಒಂದು ಮಸೂದೆ ಜಾರಿಗೆ ಬರಬೇಕಾಗಿದೆ. ಆದರೆ ಇಂಥಾ ಮಸೂದೆಯನ್ನು ಜಾರಿಗೆ ಕೊಡುವುದಕ್ಕೆ ಮೊದಲು ಎಷ್ಟೆಷ್ಟು ಪ್ರಜಾಸಂಖ್ಯೆಗೆ ಒಂದೊಂದು ಈ ಮುನಿಸಿಪ್ಯಾಲಿಟಿಗಳು ಇರಬೇಕು ಎಂಬುದನ್ನು ನಿಗದಿ ಮಾಡಬೇಕಾದ್ದು ನ್ಯಾಯವೇ. ಆದರೆ ಆ ಸಂಸ್ಥೆಯ ಸದಸ್ಯರ ಸಂಖ್ಯೆ ಎಷ್ಟೇ ಇರಲಿ ಅಲ್ಲಿ ಹೆಂಗಸರಿಗೆ 3 ಸೀಟುಗಳನ್ನೂ ಷೆಡ್ಯೂಲ್ಡ್ ಕ್ಲಾಸಿನವರಿಗೆ 3 ಸೀಟುಗಳನ್ನೂ ರಿಜರ್ವ್ ಮಾಡಬೇಕೆಂತ ಹೇಳಿರುವಂತಿದೆ. ಸದಸ್ಯರ ಸ್ಥಾನಗಳು ಎಷ್ಟೇ ಇರಲಿ ಹೀಗೆ ಮೂರು ಮೂರು ಸ್ಥಾನಗಳನ್ನು ಇವರಿಗೆ ರಿಜರ್ವ್ ಮಾಡಲೇ ಬೇಕೆಂತ ಎಲ್ಲಿ ಹೇಳಿದೆ? ಈಗ ಈ ಮಸೂದೆ

ಯ 22ನೇ ಪುಟದಲ್ಲಿ ಇಂತಿಷ್ಟು ಪ್ರಜಾಸಂಖ್ಯೆಗೆ ಇಂತಿಷ್ಟು ಸ್ಥಾನಗಳಿರಬೇಕೆಂದು Constitution of Municipal Councilsಗಳ ವಿಚಾರವಾಗಿ ಹೇಳಿದ್ದಾರೆ. ಒಂದು ಮುನಿಸಿಪ್ಯಾಲಿಟಿಯ ಪ್ರಜಾ ಸಂಖ್ಯೆ 20 ಸಾವಿರ ಇದ್ದರೆ ಅಂಥಾ ಮುನಿಸಿಪ್ಯಾಲಿಟಿಯಲ್ಲಿ ಸದಸ್ಯರುಗಳ ಸಂಖ್ಯೆ 15 ಇರಬೇಕೆಂತ ಹೇಳಿದ್ದಾರೆ. ಇದಕ್ಕೆ ಆಧಾರವೇನು ? ಇದು ನನಗಂತೂ ಅರ್ಥವೇ ಆಗುತ್ತಿಲ್ಲ. ಈಗ 20 ಸಾವಿರಕ್ಕೆ ಮೇಲ್ಪಟ್ಟು 30 ಸಾವಿರದೊಳಗೆ ಪ್ರಜಾಸಂಖ್ಯೆಯಿದ್ದರೆ 19 ಜನ ಕೌನ್ಸಿಲರುಗಳಿರಬೇಕೆಂದು ಹೇಳಿದ್ದಾರೆ. 20 ಸಾವಿರಕ್ಕೆ ಒಳಗಿದ್ದರೆ 15 ಜನ ಕೌನ್ಸಿಲರುಗಳಿರಬೇಕೆಂದು ಹೇಳಿದ್ದಾರೆ. ಇದೇನು ಕೌನ್ಸಿಲರುಗಳ ಸಂಖ್ಯೆ 11-15-17-19 ಹೀಗೆ ಜನಸಂಖ್ಯೆಯಲ್ಲೇ ಇರಬೇಕೆಂಬ ನೇಮವೇನಾದರೂ ಇದೆಯೋ ? ನಾಳೆ ಅಲ್ಲಿ ಏನಾದರೂ ಓಟಿಂಗಿನ ಟ್ರಬಲ್ ಬಂದರೆ ಸಮ ಸಂಖ್ಯೆಯಿರಬಾರದು—ಬೆಸಸಂಖ್ಯೆಯೇ ಇರಬೇಕೆಂಬ ದೃಷ್ಟಿಯಿಂದ ಏನಾದರೂ ಹೀಗೆ ಮಾಡಿದ್ದಾರೋ ? ಈ ದಿವಸ ಹತ್ತು ಸಾವಿರ ಪ್ರಜಾಸಂಖ್ಯೆಯಿರತಕ್ಕ ಸಂಸ್ಥೆಗಳಲ್ಲಿ 20 ಜನ ಕೌನ್ಸಿಲರುಗಳಿದ್ದಾರೆ. 20 ಸಾವಿರದಿಂದ 30 ಸಾವಿರದವರೆಗೆ ಪ್ರಜಾಸಂಖ್ಯೆಯಿರುವ ಮುನಿಸಿಪಾಲಿಟಿಗೆ 19 ಜನ ಸದಸ್ಯರು ಎಂದು ಯಾವ ಆಧಾರದ ಮೇಲೆ ಇಟ್ಟಿದ್ದೀರಿ ? ಯಾವ ತತ್ವವನ್ನು ಅನುಕರಣೆ ಮಾಡಿದ್ದೀರಿ ಎಂದು ನನಗೆ ಅರ್ಥವಾಗುವುದಿಲ್ಲ. ಹಾಗೆಯೇ ಮುಂದಕ್ಕೆ ಬಂದರೆ for a municipality with a population exceeding one lakh—31 ಜನ ಸದಸ್ಯರು ಎಂದು ಹೇಳಿದ್ದಾರೆ. ಸಿಟಿ ಮುನಿಸಿಪಾಲಿಟಿ ಎಂದು ಯಾವುದನ್ನು declare ಮಾಡುತ್ತೀರಿ ? ಎಷ್ಟು ಜನಸಂಖ್ಯೆ ಇರಬೇಕು ?

ಶ್ರೀ ಕೆ. ಪುಟ್ಟಸ್ವಾಮಿ.—50 ಸಾವಿರಕ್ಕಿಂತ ಹೆಚ್ಚು ಪ್ರಜಾಸಂಖ್ಯೆಯಿರುವುದು ಸಿಟಿ ಮುನಿಸಿಪಾಲಿಟಿ ಎಂದು definitionsನಲ್ಲಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಿಟಿ ಮುನಿಸಿಪಾಲಿಟಿ ಮಾಡಿದ ಮೇಲೆ ಅದರ ಪ್ರಜಾಸಂಖ್ಯೆ 50 ಸಾವಿರಕ್ಕಿಂತ ಮೇಲ್ಪಟ್ಟು ಇದ್ದರೆ 27 ಜನ ಸದಸ್ಯರು ಎಂದು ಇಟ್ಟಿದ್ದೀರಿ. ಒಂದು ಲಕ್ಷಕ್ಕೆ ಮೀರಿದ್ದರೆ 31 ಜನ ಎಂದು ಇಟ್ಟಿದ್ದೀರಿ. ಹಾಗಾದರೆ ಕಾರ್ಪೊರೇಷನ್ ಎಂದು ಯಾವುದನ್ನು ಕರೆಯುತ್ತೀರಿ ?

ಶ್ರೀ ಕೆ. ಪುಟ್ಟಸ್ವಾಮಿ.—ನಮ್ಮ ಸಂಸ್ಥಾನದಲ್ಲಿ ಎರಡು ಕಾರ್ಪೊರೇಷನ್‌ಗಳಿವೆ. ಎರಡಕ್ಕೂ ಎರಡು ಬೇರೆ ಬೇರೆ ಕಾನೂನುಗಳಿವೆ. ಬೆಂಗಳೂರು ಕಾರ್ಪೊರೇಷನ್ ಆಕ್ಟ್ ಎಂದು ಇದೆ. ಬೊಂಬಾಯಿ ಕಾರ್ಪೊರೇಷನ್ ಆಕ್ಟ್ ರೀತ್ಯ ಹುಬ್ಬಳ್ಳಿ ಧಾರವಾಡ ಎರಡು ಊರುಗಳನ್ನೂ ಸೇರಿಸಿ ಒಂದು ಕಾರ್ಪೊರೇಷನ್ ಮಾಡಿದೆ. ಮೈಸೂರು ಸಂಸ್ಥಾನದಲ್ಲಿ ಒಂದಕ್ಕಿಂತ ಹೆಚ್ಚು ಕಾರ್ಪೊರೇಷನ್ ಇರುವುದರಿಂದ ಎರಡಕ್ಕೂ ಸಮನ್ವಯವಾಗತಕ್ಕ ಒಂದು ಕಾರ್ಪೊರೇಷನ್ ಆಕ್ಟ್ ತರಬೇಕಾದ್ದು ಅಗತ್ಯ. ಅದನ್ನು ತಂದಾಗ ಕಾರ್ಪೊರೇಷನ್ನನ್ನು ಯಾವ ಆಧಾರದ ಮೇಲೆ ಮಾಡಬೇಕು ಎನ್ನುವುದನ್ನು ಈ ಸಭೆ ಪರ್ಯಾಲೋಚಿಸಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಂತ್ರಿಗಳು ಕೊಟ್ಟಂಥ ವಿವರಣೆಯ ಮೇಲೆ ಮುಂದುವರಿಯುವುದಾದರೂ ನನಗೆ ಏನು ಅನುಮಾನ ಬಂದಿದೆ ಎಂದರೆ ಒಂದು ಲಕ್ಷಕ್ಕೆ ಮೇಲ್ಪಟ್ಟು ಪ್ರಜಾಸಂಖ್ಯೆಯಿರುವ ಕಡೆ 31 ಜನ ಸದಸ್ಯರಿರಬೇಕು. ಆದರೆ ಕಾರ್ಪೊರೇಷನ್ ಮಾಡಬೇಕಾದರೆ, ಜನಸಂಖ್ಯೆ ಎರಡು ಲಕ್ಷವಿರಬೇಕೇ, ಮೂರು ಲಕ್ಷವಿರಬೇಕೇ? ಬೆಂಗಳೂರಿನಲ್ಲಿ 14 ಲಕ್ಷ ಜನರಿದ್ದಾರೆ. ಇದು ಒಂದು ಕಾರ್ಪೊರೇಷನ್. ಹುಬ್ಬಳ್ಳಿ-ಧಾರವಾಡದಲ್ಲಿ ನಾನು ತಿಳಿದುಕೊಂಡಿರುವ ಹಾಗೆ ಎರಡೂವರೆ ಲಕ್ಷ—ಮೂರು ಲಕ್ಷ ಪ್ರಜಾಸಂಖ್ಯೆ ಇದೆ. ಎಷ್ಟು ಪ್ರಜಾಸಂಖ್ಯೆಯಿದ್ದರೆ ಒಂದು ಕಾರ್ಪೊರೇಷನ್ ಮಾಡಬೇಕು, ಎಷ್ಟು ಪ್ರಜಾಸಂಖ್ಯೆಗೆ ಕಡಮೆ ಇದ್ದರೆ ಸಿಟಿ ಮುನಿಸಿಪಾಲಿಟಿ ಎಂದು ಮಾಡಬೇಕೆನ್ನುವುದು ಅರ್ಥವಾಗುವುದಿಲ್ಲ. ಕಾರ್ಪೊರೇಷನ್‌ಗೆ ಒಂದು ವಿಧೇಯಕವನ್ನು ತಂದಾಗ ನೀತಿನಿಯಮಗಳನ್ನು ಕುರಿತು ಮಾತನಾಡಬಹುದು ಎಂದು ಹೇಳಿದರು. ಅದನ್ನು ಕಾದುನೋಡೋಣ. ಮಾನ್ಯಮಂತ್ರಿಗಳು ಉತ್ತರ ಹೇಳುವಾಗ ಅವರ ಮನಸ್ಸಿನಲ್ಲಿರುವುದನ್ನು ತಿಳಿಸಬೇಕೆಂದು ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

Appointment by Government when Councillor not elected ಎಂದು 14ನೆಯ ಕ್ಲಾಜಿನಲ್ಲಿದೆ. ಇಲ್ಲಿಂದಲೇ ಸರ್ಕಾರದ ಕೈವಾಡ ಪ್ರಾರಂಭವಾಗುತ್ತದೆ. ಚುನಾವಣೆಗಳು ನಡೆದ ತಕ್ಷಣ ನಮ್ಮ ಕೈಯಲ್ಲಿ ಏನೇನು ಇಟ್ಟುಕೊಳ್ಳಬೇಕು ಎಂದು ಮಾಡಿದ್ದಾರೆ. ಅಸೆಂಬ್ಲಿ ಸದಸ್ಯತ್ವಕ್ಕೆ ಒಂದು ಸ್ಥಾನದಿಂದ ಯಾರಾದರೂ ಅರ್ಜಿ ಹಾಕದೇಹೋದರೆ ಆಗ ನಾಮಕರಣ ಮಾಡುತ್ತೀರಾ ? ಚುನಾವಣೆಗಳು ನಡೆಯಬೇಕು ಎಂದು ಹೇಳಿದಾಗ ಅರ್ಜಿಗಳು ಬರುವುದಿಲ್ಲ. ಅಭ್ಯರ್ಥಿಗಳು ಇರುವುದಿಲ್ಲ ಎಂದು ಹೇಳತಕ್ಕದ್ದು ಬಹಳ ವಿಚಿತ್ರವಾದವಾಗಿದೆ. ನಾಮಕರಣ ಮಾಡುವ ಪದ್ಧತಿ ಬೇಡ ಎಂದು ಎಲ್ಲರೂ ಹೇಳುತ್ತಿದ್ದರೂ ಇಂಥ ಕ್ಲಾಜನ್ನು ಈ ವಿಧೇಯಕದಲ್ಲಿ ಹಾಕಿದ್ದಾರೆ. ಆ ಹಿಂದೆ ಟೌನ್‌ಹಾಲಿನಲ್ಲಿ ಪ್ರಜಾಪ್ರತಿನಿಧಿ ಸಭೆ ನಡೆಯುತ್ತಿದ್ದಾಗ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ನಮ್ಮ ರಾಜಸ್ವಮಂತ್ರಿಗಳು ನಾಮಕರಣ ಪದ್ಧತಿಯನ್ನು ತೀವ್ರವಾಗಿ ವಿರೋಧಿಸುತ್ತಿದ್ದರು. ನಾವು ಗ್ಯಾಲರಿಯಲ್ಲಿ ಕುಳಿತುಕೊಂಡು ಇವರು ಏನು ಮಾಡುತ್ತಾರೆ ಎಂದು ನೋಡುತ್ತಿದ್ದೆವು. ಇವರ ಧೋರಣೆ ನಾಮಕರಣ ಪದ್ಧತಿಯನ್ನು ವಿರೋಧಿಸುವುದೂ ಆಗಿತ್ತು. ಅವರು ಗುಂಡು ಟೋಪಿ ಹಾಕಿಕೊಂಡಿರುತ್ತಿದ್ದರು. ಈಗ ಇರುವುದು ಬಿಳಿ ಟೋಪಿ ಹಾಕಿಕೊಂಡಿರುವ ಸರ್ಕಾರ. ಹಿಂದೆ ಯಾವ ಪದ್ಧತಿಯನ್ನು ವಿರೋಧಿಸುತ್ತಿದ್ದರೋ ಅದೇ ನಾಮಕರಣ ಪದ್ಧತಿಯಿರಬೇಕೆಂಬ ಅವಕಾಶವನ್ನಿಟ್ಟುಕೊಂಡಿದ್ದಾರೆ. ಅಂಥ Contingency ಬರುವುದಿಲ್ಲ. ಬಂದರೆ ಪುನಃ ಚುನಾವಣೆ ಏಕೆ ನಡೆಸಬಾರದು ?

[MR. DEPUTY SPEAKER in the Chair.]

ಶ್ರೀ ಕೆ. ಪುಟ್ಟಸ್ವಾಮಿ.—ಇಂಥದ್ದು ಬಹಳ ಅಪರೂಪವಾಗಿ ಒದಗತಕ್ಕ ಪರಿಸ್ಥಿತಿ. ಪುನಃ ಚುನಾವಣೆ ಏರ್ಪಾಡು ಮಾಡಬೇಕೆಂದರೆ ಇದಕ್ಕೆ ಒಂದೆರಡು ತಿಂಗಳು ಹಿಡಿಯುತ್ತದೆ. ಕೌನ್ಸಿಲ್ ಸಂಪೂರ್ಣವಾಗಿ ರಚನೆಯಾದ ಹೊರತು ಚುನಾಯಿತವಾದ ಕೌನ್ಸಿಲ್ ಅಧಿಕಾರಕ್ಕೆ ಬರುವುದಕ್ಕಾಗುವುದಿಲ್ಲ. ಇಂಥ ವಿಚಿತ್ರವಾದ ಪರಿಸ್ಥಿತಿ ಬಂದಂಥ ಕಾಲದಲ್ಲಿ ಪ್ರಜಾಪ್ರತಿನಿಧಿಗಳಿಂದ ಅಧಿಕಾರ ಪಡೆದಿರತಕ್ಕ ಸರ್ಕಾರ ಒಂದು ಪಕ್ಷ ಒಂದು ಸ್ಥಾನವನ್ನು ಭರ್ತಿ ಮಾಡಿದರೆ ಅದರಿಂದ ಪ್ರಜಾಪ್ರಭುತ್ವಕ್ಕೆ ಕಳಂಕವೇನೂ ಬರುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರು ಮಾಡಿದಂಥ ಭಾಷಣ, ಅವರು ಹೇಳಿದಂಥ ಹೇಳಿಕೆಗಳು, ಅವರು ಹೇಳಿದಂಥ ವಿವೇಕ ಬುದ್ಧಿ, ಏನಿತ್ತೋ ಅದನ್ನು ನಾನು ಈಗ ಹೇಳುತ್ತೇನೆ. ನಾಮಕರಣ ಪದ್ಧತಿ ಇರಬಾರದು, ನಾಮಕರಣ ಪದ್ಧತಿ ಹೋಗಬೇಕು. ರಾಜ್ಯಾಂಗದ ಪ್ರಕಾರ ಈ ಸಭೆಗೆ ಒಬ್ಬರನ್ನು ನಾಮಕರಣ ಮಾಡಿದ್ದಾರೆ. ಯಾವುದೋ ಒಂದು interest represent ಮಾಡುವುದಕ್ಕೆ ಅವಕಾಶವಿಲ್ಲದೆ ಇರುವುದರಿಂದ ಈ ರೀತಿ ನಾಮಕರಣ ಮಾಡಿದ್ದಾರೆ. ಇವೊತ್ತು ಒಂದು ಮುನಿಸಿಪಾಲಿಟಿಯೊಳಗೂ ಯಾವುದೋ ಕಾರಣಾಂತರದಿಂದ ಚುನಾವಣೆಯಾಗಲಿಲ್ಲವೆನ್ನುವ ವಿಶೇಷ ಸಂದರ್ಭದಲ್ಲಿ ನಾಮಕರಣ ಮಾಡಬಾರದು, ಅದು ಪ್ರಜಾಪ್ರಭುತ್ವಕ್ಕೆ ಕುಠಾರಪ್ರಾಯವಾಗುತ್ತದೆನ್ನುವುದನ್ನು ಸರ್ಕಾರ ಯೋಚನೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ವೋಟರುಗಳ ಪಟ್ಟಿಯ ವಿಚಾರ ತೆಗೆದುಕೊಂಡರೆ, ಅಸೆಂಬ್ಲಿ ಕ್ಷೇತ್ರದ ವೋಟರು ಪಟ್ಟಿಯನ್ನೇ ಇದಕ್ಕೂ ಉಪಯೋಗಿಸಬೇಕೆಂದು ಹೇಳಿದ್ದಾರೆ. ಮಾನ್ಯಮಂತ್ರಿಗಳೂ ನನ್ನಂತೆಯೇ ಚುನಾವಣೆಗೆ ನಿಂತುಕೊಂಡವರು. ಅದರಲ್ಲಿರುವ ದೋಷಗಳನ್ನು ತಿಳಿದುಕೊಂಡಿರುತ್ತಾರೆ. ಚುನಾವಣೆಯಾದ ಮೇಲೆ election petition ಹಾಕಿದರೆ ಯಾವ ಆಧಾರದ ಮೇಲೆ ಸತ್ತವನು ಓಟು ಮಾಡಿದ್ದಾನೆ ಬದುಕಿದವನು ಓಟು ಮಾಡಿದ್ದಾನೆ, false personification ನಿಂದ ಓಟು ಮಾಡಿದ್ದಾನೆ ಎಂದು ರುಜುವಾತು ಮಾಡುತ್ತೀರಿ ? ಈಗ ಇರುವ ಅಸೆಂಬ್ಲಿ ಪಟ್ಟಿ ದೋಷಪೂರಿತವಾಗಿದೆ. ಇದು ಎಷ್ಟರಮಟ್ಟಿಗೆ ಅನುಕೂಲವಾಗುತ್ತದೆ ? ಅಸೆಂಬ್ಲಿ ಚುನಾವಣೆಯ ವೋಟರುಗಳ ಪಟ್ಟಿಯನ್ನು ಸ್ಥಳೀಯ ಸಂಸ್ಥೆಗಳಿಗೆ ಸಹ ಉಪಯೋಗಿಸಬೇಕೆಂದು ಹೇಳತಕ್ಕದ್ದು ನನಗಾದರೂ ಬಹಳ ವಿಚಿತ್ರವಾಗಿ ಕಾಣುತ್ತದೆ. ಇವೊತ್ತು ಒಂದು ಮುನಿಸಿಪಾಲಿಟಿಯನ್ನು ತೆಗೆದುಕೊಂಡರೆ, ಅದಕ್ಕೆ ಚುನಾವಣೆ ನಡೆಸಬೇಕೆಂದು ಒಂದು ಪಕ್ಷ ಸರ್ಕಾರ ಈ ಕಾನೂನು ಪ್ರಕಾರ ಆರ್ಡರ್ ಮಾಡಿದರೆ, ಚುನಾವಣಾ ಟ್ರಿಬ್ಯುನಲ್ ಮುಂದೆ ಹೋದಾಗ, ಚುನಾವಣೆಯಲ್ಲಿ 500 ಜನ ಸತ್ತವರು ವೋಟು ಮಾಡಿದ್ದಾರೆ, 600 ಜನ false personification ನಿಂದ ವೋಟು ಮಾಡಿದ್ದಾರೆ ಎಂದು ರುಜುವಾತು ಕೊಡುವುದು ಹೇಗೆ ? ಇವೊತ್ತು ಘೋಷಾ ಗಾಡಿಯಲ್ಲಿ ಜನರನ್ನು ತುಂಬಿಕೊಂಡು ಬಂದು ಮನಸ್ಸು ಬಂದಂತೆ ವೋಟು ಹಾಕಿಸುತ್ತಿದ್ದಾರೆ. ತಮಗೆ ಇದರ ಅನುಭವವಿದೆ. ಮಾನ್ಯ ಮಂತ್ರಿಗಳು ಮೈಸೂರು ಪುರಸಭೆಯ ಅಧ್ಯಕ್ಷರಾಗಿದ್ದವರು, ಉಪಮಂತ್ರಿಗಳು ಬೆಂಗಳೂರು ಕಾರ್ಪೊರೇಷನ್ನಿನ ಮೇಯರ್ ಆಗಿದ್ದವರು. ತಾವಿಬ್ಬರೂ ಗಮನ ಕೊಟ್ಟು ವೋಟರುಗಳ ಪಟ್ಟಿಯಲ್ಲಿರುವ ದುರ್ದೋಷಗಳನ್ನು ನಿವಾರಣೆ ಮಾಡಿದರೆ ಪ್ರಜಾಪ್ರಭುತ್ವಕ್ಕೆ ಗೌರವ ತರುತ್ತೀರಿ. ಇವೊತ್ತು ಇರತಕ್ಕ ವೋಟರುಗಳ ಪಟ್ಟಿ ಎಲ್ಲ ಬರೀ ಮೋಸ, bogus.

Sri K. PUTTASWAMY.—Under the People's Representation Act, the voters' list is revised every year. In fact if the voters list as envisaged in that Act is brought up-to-date it would be best. In whatever manner we may prepare the list, unless sufficient attention is paid, the list is bound to be defective.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ ಈಗ ಇವರು ಹೇಳಿದುದನ್ನು ನೋಡಿದರೆ ನಾನು ಹೇಳಿದ ವಿಷಯಗಳನ್ನು ಪರೋಕ್ಷವಾಗಿ ಒಪ್ಪಿಕೊಂಡಹಾಗೆ ಆಯಿತು.

Sri G. V. GOWDA.—Under the Peoples' Representation Act, voters' lists are taken to be valid until the contrary is proved. Anybody can challenge it when it goes before the Tribunal but until the tribunal sets it aside, it is effective.

Mr. DEPUTY SPEAKER.—Everytime the list is revised, if the people are attentive, they can give effect to the necessary changes.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಪ್ರಜಾಪ್ರಭುತ್ವ ತಳಹದಿಯ ಮೇಲೆ ಕೆಲಸ ಮಾಡ ಬೇಕೆಂದು ಒಪ್ಪಿಕೊಂಡಿರುವದರಿಂದ ನಾವು ವೋಟರ್ ಪಟ್ಟಿ ಪರಿಶುದ್ಧ ಮಾಡದೇ ಹೋದರೆ ಚುನಾವಣೆ ಕಳಂಕರಹಿತವಾಗಿದೆ ಎಂದು ಹೇಳುವದಕ್ಕಾಗುವದಿಲ್ಲ. ವೋಟರ್ ಪಟ್ಟಿ ಪ್ರಕಟನೆಗಾಗಿ ಮುನಿಸಿಪಲ್ ಆಫೀಸು ಬಿ.ಡಿ.ಓ. ಆಫೀಸು, ತಾಲ್ಲೂಕು ಆಫೀಸುಗಳಲ್ಲಿ ನೇತುಹಾಕುತ್ತಾರೆ.

Mr. DEPUTY SPEAKER.—What more time the Hon'ble Member would require ?

Sri C. J. MUCKANNAPPA.—I want about half an hour more Sir.

Mr. DEPUTY SPEAKER.—The Hon'ble Member has already taken 20 minutes. He will have 10 minutes to-morrow because there are so many others who are willing to participate in the Debate.

Sri C. J. MUCKANNAPPA.—Please do not fix the time limit, Sir. I will try to finish as early as possible.

Mr. DEPUTY SPEAKER.—The House will now rise and reassemble to-morrow at 1 P.M.

The House adjourned at Six of the Clock to meet again at One of the Clock on Tuesday, the 9th April 1963.

WD 408—GPB—900—20-9-63